ಲಂಕೇಶ್

ಜನವರಿ 6, 2010 ರೂ. 12/-



ಹೊರಗೆ ಹೊಸನೀರು
ಕಲಿಗಣನಾಥ ಗುಡದೂರು





ನೆ
ಡೆ
ಂದ



ಮಹೇಂದರ್ ಧಮಕಿ



ಅನಂತ್ಮಾಣಿಯ ಮಸ್ತಿ ಮಹಿಮೆ

•

ಮೈತ್ರಿ ಪವಾಡ ಬಿಜೆಪಿಗೆ ಬ್ರೇಕ್

•

ಸತ್ಯ ಮರೆತ ತುಳು ಸಮ್ಮೇಳನ



ಕಟ್ಟಾನ ಫೋರ್ಜರಿ ರ್ಯಾಕೆಟ್




ಅಧೀನತೆ ಮೀರಿದ ವೈದೇಹಿ

ಕೋಪನ್‌ಹೆಗನ್‌ನಲ್ಲಿ ಕೂಪಮಂಡೂಕಗಳು!

ಭೂತಾಯಿಗೆ ಜಗತ್ತಿನ ಶ್ರೀಮಂತ ದೇಶಗಳು ಹಚ್ಚಿರುವ ಬೆಂಕಿಯನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಡೆನ್ಮಾರ್ಕಿನ ಕೋಪನ್‌ಹೆಗನ್‌ನಲ್ಲಿ ಸೇರಿದ್ದ 'ಜಾಗತಿಕ ತಾಪಮಾನ ಸಮಾವೇಶ' ಶ್ರೀಮಂತ ದೇಶಗಳ ಸ್ವಾರ್ಥ, ಲಾಭಕೋರತನ ಮತ್ತು ಕುತಂತ್ರಗಳಿಂದಾಗಿ ವಿಫಲಗೊಂಡಿದೆ. ಕಳೆದ ಅರ್ಧ ಶತಮಾನದಲ್ಲಿ ಒಂದೇ ಸಮನೆ ಏರುತ್ತಿರುವ ಜಾಗತಿಕ ತಾಪಮಾನವನ್ನು ಮನುಕುಲ ತಡೆಯದೇ ಹೋದಲ್ಲಿ ಮುಂದಿನ ಒಂದೆರಡು ದಶಕಗಳಲ್ಲಿ ಶ್ರೀಮಂತ-ಬಡ ದೇಶಗಳೆಂಬ ಭೇದಭಾವ ವಿಲ್ಲದೆ ಇಡೀ ಮನುಕುಲ ಸರ್ವನಾಶವಾಗುತ್ತದೆಂಬುದು ಈಗ ಎಲ್ಲರ ಅರಿವಿಗೂ ಬಂದಿರುವ ಸತ್ಯ. ಆದರೆ ಭೂತಾಯಿಗೆ ಹಚ್ಚಿರುವ ಬೆಂಕಿಯಲ್ಲಿ ಶೇ.80ರಷ್ಟು ಪಾಲು ಅಮೆರಿಕ, ಐರೋಪ್ಯ ಒಕ್ಕೂಟ ಮತ್ತು ಜಪಾನಿನಂತಹ ಶ್ರೀಮಂತ ದೇಶಗಳದ್ದೇ. ಈ ದೇಶಗಳ ಉದ್ಯಮಗಳು ತಮ್ಮ ಲಾಭದ ದುರಾಸೆಗಾಗಿ ಮತ್ತು ಶ್ರೀಮಂತ ಜನತೆಯ ಐಷಾರಾಮಿ ಬದುಕಿಗಾಗಿ ಪ್ರಪಂಚದ ಎಲ್ಲಾ ಸಂಪನ್ಮೂಲವನ್ನು, ಅದರಲ್ಲೂ ಪೆಟ್ರೋಲಿಯಂ ಉತ್ಪನ್ನಗಳನ್ನು, ಲೂಟಿ ಹೊಡೆಯುತ್ತಾ ಆ ಪ್ರಕ್ರಿಯೆಯಲ್ಲಿ ವಾತಾವರಣಕ್ಕೆ ಇಂಗಾಲದ ಡೈಯಾಕ್ಸೈಡ್‌ನಂತಹ ವಿಷವನ್ನು ಬೆರೆಸುತ್ತಿರುವುದರಿಂದಲೇ ಭೂಮಿ ತನ್ನ ಒಡಲಿನ ಉರಿಯನ್ನು ಹೊರಹಾಕಲಾಗದೆ ಜಗತ್ತಿನ ತಾಪಮಾನ ಹೆಚ್ಚುವಂತಾಗಿದೆ.

ಜಗತ್ತಿನ ತಾಪಮಾನಕ್ಕೆ ಮನುಷ್ಯನೇ ಕಾರಣ ಎಂದು ಭೋಳೆಭೋಳೆಯಾಗಿ ಹೇಳಿಬಿಡುವವರಿದ್ದಾರೆ. ಆದರೆ ಇದು ಶ್ರೀಮಂತ ದೇಶಗಳು ಮತ್ತು ಅಲ್ಲಿನ ಉದ್ಯಮಗಳು ತಮ್ಮ ಪ್ರಧಾನಪಾತ್ರವನ್ನು ಮುಚ್ಚಿಟ್ಟುಕೊಳ್ಳಲು ತೇಲಿಬಿಡುತ್ತಿರುವ ಸುಳ್ಳುಗಳು. ಆ ಸುಳ್ಳುಗಳ ಅಡಿಪಾಯದಲ್ಲೇ ಕೋಪನ್‌ಹೆಗನ್ ಸಮಾವೇಶವನ್ನು ಇದೇ ಶ್ರೀಮಂತ ದೇಶಗಳು ವಿಫಲಗೊಳಿಸಿದ್ದಾವೆ. ಆದ್ದರಿಂದಲೇ ಜಾಗತಿಕ ತಾಪಮಾನ ಹೆಚ್ಚುತ್ತಿರುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳದೇ ಇಡೀ ಭೂಮಂಡಲವನ್ನೇ ವಿನಾಶದಂಚಿಗೆ ತಂದಿರುವ ಅವರ ಹುನ್ನಾರಗಳನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ನಭೋಮಂಡಲದಲ್ಲಿ ಕೋಟ್ಯಂತರ ಆಕಾಶಕಾಯಗಳಿದ್ದರೂ ಭೂಮಿಯಲ್ಲಿ ಮಾತ್ರ ಜೀವಸೃಷ್ಟಿಯಾಗಲು ಕೆಲವು ನಿರ್ದಿಷ್ಟ ಕಾರಣಗಳಿವೆ. ಭೂಮಿಯನ್ನು ಬಿಟ್ಟಂತೆ ಉಳಿದ ಆಕಾಶಕಾಯಗಳೊಳಗೆ ಇರುವ ತಾಪಮಾನ ಒಂದೋ ಅತಿ ಕಡಿಮೆ (-40 ಡಿಗ್ರಿ ಸೆಂಟಿಗ್ರೇಡ್ ಕ್ಕಿಂತಲೂ ಕಡಿಮೆ) ಅಥವಾ ಅತಿಹೆಚ್ಚು (300 ಡಿಗ್ರಿಗಳ ಆಸುಪಾಸು). ಈ ಎರಡು ಸಂದರ್ಭಗಳಲ್ಲೂ ಜೀವ ಸೃಷ್ಟಿಯಾಗಲು ಸಾಧ್ಯವೇ ಇಲ್ಲ. ಮೊದಲು ಭೂಮಿಯ ಮೇಲ್ಮೈ ತಾಪಮಾನ ಸಹ -20ರಷ್ಟಿತ್ತು. ಆಗ ಭೂಗೋಳದಲ್ಲಿ ಶೇ.75ರಷ್ಟು ಸಾರಜನಕ ಮತ್ತು ಶೇ.20ರಷ್ಟು ಆಮ್ಲಜನಕವಿತ್ತು. ಆಮ್ಲಜನಕ ಜೀವವಾಯುವಾದರೂ ಜೀವ ಸೃಷ್ಟಿಗೆ ಬೇಕಾದಷ್ಟು ತಾಪಮಾನ ಆಗಿನ್ನೂ ಭೂಮಿಯ ಮೇಲ್ಮೈನಲ್ಲಿರಲಿಲ್ಲ. ಆದರೆ ಭೂಮಿಯ ವಾತಾವರಣದಲ್ಲಿ ಈ ಎರಡು ಅನಿಲಗಳ ಜೊತೆಜೊತೆಗೆ ಕಾರ್ಬನ್ ಡೈಆಕ್ಸೈಡ್, ಮೀಥೇನ್‌ನಂತ ಅನಿಲಗಳೂ ಇದ್ದವು. ಈ ಅನಿಲಗಳು ಸೂರ್ಯನ ಬೆಳಕಿನ ವಿಕಿರಣದ ಮೂಲಕ ಭೂಪದರವನ್ನು ಪ್ರವೇಶಿಸುವ ಶಾಖವನು ಹೀರಿಕೊಳ್ಳುತ್ತಿದ್ದವು ಮತ್ತು ಅದನ್ನು ಭೂಮಂಡಲದ ವಾತಾವರಣಕ್ಕೆ ಮರುಹಾಯಿಸಿದವು. ಇದರಿಂದ ಭೂಮಿಯ ಮೇಲ್ಮೈ ತಾಪಮಾನ ನಿಧಾನವಾಗಿ -20ರಿಂದ 10 ಡಿಗ್ರಿಗೆ ತಲುಪಿತು. ಈ ಸಂದರ್ಭದಲ್ಲಿ ಜೀವವಾಯುವಿನ ಸಹಾಯದೊಂದಿಗೆ ಈ ಭೂಗ್ರಹದಲ್ಲಿ ಜೀವಸೃಷ್ಟಿಯಾಯಿತು.



ಈ ಪರಿಸ್ಥಿತಿಯೇ ಹೆಚ್ಚೂಕಡಿಮೆ ಲಕ್ಷಾಂತರ ವರ್ಷಗಳ ಕಾಲ ಉಳಿದುಕೊಂಡು ಬಂದು ಭೂಗ್ರಹದಲ್ಲಿನ ಜೀವವಿಕಾಸಕ್ಕೆ ಹಾಗೂ ಕ್ರಮೇಣ ಮನುಷ್ಯ ಜೀವಿಯ ಸೃಷ್ಟಿಗೂ ಕಾರಣವಾಯಿತು. ಮನುಷ್ಯ ಸಮಾಜ ಹೊಟ್ಟೆಪಾಡಿಗೆ ಮತ್ತು ತನ್ನ ಅತ್ಯಗತ್ಯಗಳಿಗೆ ಬೇಕಾದಂತೆ ಪ್ರಕೃತಿಯಲ್ಲಿನ ಸಂಪನ್ಮೂಲಗಳ ಬಳಕೆ ಮಾಡುತ್ತಾ ನಾಗರಿಕತೆಯಲ್ಲಿ ದಾಪುಗಾಲಿಡುತ್ತಿದ್ದಾಗಲೂ ಭೂತಾಯಿಗೆ ಮುನಿಸೇನೂ ಬಂದಿರಲಿಲ್ಲ. ಆದರೆ ಕೈಗಾರಿಕಾ ಕ್ರಾಂತಿ ಸಂಭವಿಸಿ ಮನುಷ್ಯ ಸಮಾಜದಲ್ಲಿ ಲಾಭದ ದುರಾಸೆಗೆ ಇತರರನ್ನು ಮತ್ತು ಪ್ರಕೃತಿಯನ್ನೂ ಶೋಷಿಸುವ ಬಂಡವಾಳ ಶಾಹಿ ವರ್ಗವೊಂದು ಸೃಷ್ಟಿಯಾಯಿತು. ಈ ಬಂಡವಾಳ ಶಾಹಿ ತನ್ನ ದೇಶದ ಮಿತಿಯಲ್ಲಿ ಮಾತ್ರವಲ್ಲದೆ ಪ್ರಪಂಚದೆಲ್ಲೆಡೆ ಎಲ್ಲೆಲ್ಲಿ ಸಂಪನ್ಮೂಲಗಳಿವೆಯೋ ಅಲ್ಲೆಲ್ಲಾ ಲೂಟಿ ಮಾಡಲು ಪ್ರಾರಂಭಿಸಿತು. ಅದರಲ್ಲೂ ತನ್ನ ಕೈಗಾರಿಕೆಗಳಿಗಾಗಿ ಇಂಧನಮೂಲವಾಗಿ ಭೂಗರ್ಭದ ಪೆಟ್ರೋಲಿಯಂ ಉತ್ಪನ್ನಗಳನ್ನು ಬೇಕಾಬಿಟ್ಟಿಯಾಗಿ ಬಳಸಲು ಪ್ರಾರಂಭಿಸಿತು.

ಆದರೆ ಈ ಪೆಟ್ರೋಲಿಯಂನಂತ ಇಂಧನಗಳನ್ನು ಉರಿಸಿದಾಗ ಅಪಾರ ಪ್ರಮಾಣದಲ್ಲಿ ಕಾರ್ಬನ್ ಡೈಯಾಕ್ಸೈಡ್‌ನಂತ ಅನಿಲಗಳು ಉತ್ಪಾದನೆಯಾಗುತ್ತವೆ. ಇದು ವಾತಾವರಣದಲ್ಲಿ ಹೆಚ್ಚೆಚ್ಚು ಶೇಖರವಾಗುತ್ತಿದ್ದಂತೆ ಸೂರ್ಯನ ಶಾಖವನ್ನು ಹೆಚ್ಚೆಚ್ಚು ಹೀರಿಕೊಳ್ಳುವ ಅನಿಲವೂ ಸೇರಿಕೊಳ್ಳುತ್ತದೆ. ಇಂಥ ಅನಿಲಗಳನ್ನೇ "ಹಸಿರು ಮನೆ ಅನಿಲ"ವೆಂದು ಕರೆಯುತ್ತಾರೆ. ಅವು ಸೂರ್ಯನ ಶಾಖವನ್ನು ಹೀರಿ ಮರಳಿ ವಾತಾವರಣಕ್ಕೆ ಬಿಡುವುದನ್ನು "ಹಸಿರು ಮನೆ ಪರಿಣಾಮ"ವೆಂದು ಕರೆಯುತ್ತಾರೆ. ಹೀಗಾಗಿ ವಾತಾವರಣದಲ್ಲಿ ಕಾರ್ಬನ್ ಡೈಯಾಕ್ಸೈಡ್‌ನಂತ ಅನಿಲಗಳು ಹೆಚ್ಚಾಗುತ್ತಿದ್ದಂತೆ ಭೂಮಿಯ ತಾಪಮಾನವೂ ಹೆಚ್ಚಾಗಲು ಪ್ರಾರಂಭವಾಯಿತು. ಮೊದಲು ಇದು ಗೋಚರವಾದದ್ದು ಧ್ರುವ ಪ್ರದೇಶಗಳಲ್ಲಿ ದಿನೇದಿನೇ ಹಿಮಗಡ್ಡೆಗಳ ಪ್ರಮಾಣ ಕುಸಿಯುವುದರ ಮೂಲಕ. 1800ರಿಂದ ಭೂಮಿಯ ತಾಪಮಾನ ಮತ್ತು ಸಾಗರದ ಮೇಲ್ಮೈ ತಾಪಮಾನವನ್ನು ವೈಜ್ಞಾನಿಕವಾಗಿ ಅಂದಾಜು ಮಾಡುವುದು ಸಾಧ್ಯವಾಗಿತ್ತು. ಇದರಲ್ಲೂ ಹೆಚ್ಚಳವಾಗಿರುವುದು ಕಂಡುಬರತೊಡಗಿತು. ಆಗ ವಿಶ್ವಸಂಸ್ಥೆಯು ಜಾಗತಿಕ ತಾಪಮಾನ ಏರಿಕೆಯ ಸತ್ಯಾಸತ್ಯತೆ ಮತ್ತು ತೀವ್ರತೆಯನ್ನು ಪರಿಶೀಲಿಸಲು 1995ರಲ್ಲಿ ಅಂತರರಾಷ್ಟ್ರೀಯ ವಿಜ್ಞಾನಿಗಳ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಸಕಲ ವೈಜ್ಞಾನಿಕ ಆಧಾರಗಳೊಂದಿಗೆ ಈ ಕೆಲವು ಅಂಶಗಳನ್ನು ಜಗತ್ತಿನ ಮುಂದಿರಿಸಿತು:

1. ಜಾಗತಿಕ ತಾಪಮಾನ ಕಳೆದ ಮೂರು ದಶಕಗಳಿಂದ ಒಂದೇಸಮನೆ ಏರಿಕೆಯಾಗಿದೆ. ಈ ಅವಧಿಯಲ್ಲಿ ಭೂಮಿಯ ತಾಪಮಾನ 0.74 ಡಿಗ್ರಿಯಷ್ಟು ಏರಿದೆ.
2. ಈ ತಾಪಮಾನ ಏರಿಕೆಗೆ ಪ್ರಧಾನ ಕಾರಣ ವಾತಾವರಣದಲ್ಲಿ ಹೆಚ್ಚುತ್ತಿರುವ ಇಂಗಾಲದ ಡೈಯಾಕ್ಸೈಡ್‌ನಂತ "ಹಸಿರು ಮನೆ ಅನಿಲಗಳು" ಮತ್ತು ಅದರಿಂದ ಉಂಟಾಗುತ್ತಿರುವ "ಹಸಿರು ಮನೆ ಪರಿಣಾಮ."
3. ವಾತಾವರಣದಲ್ಲಿ ಈ ಪ್ರಮಾಣದಲ್ಲಿ ಹಸಿರು ಮನೆ ಅನಿಲಗಳು ಹೆಚ್ಚಾಗಲು ಕಾರಣ ಅಭಿವೃದ್ಧಿ ಹೊಂದಿದ ದೇಶಗಳ ಕೈಗಾರಿಕಾ ಚಟುವಟಿಕೆಗಳು, ಪೆಟ್ರೋಲಿಯಂನಂಥ ಇಂಧನ ಬಳಕೆ ಮತ್ತು ಜಗತ್ತಿನ ಧಾರಣಾ ಶಕ್ತಿಯ ಪರಿವಿಲ್ಲದ ಅಭಿವೃದ್ಧಿ ಹೊಂದಿದ ದೇಶಗಳ ಜನತೆಯ ಜೀವನ ವಿಧಾನ.
4. ಭೂಮಂಡಲದ ವಾತಾವರಣದಲ್ಲಿರುವ ಹಸಿರುಮನೆ ಅನಿಲಗಳಲ್ಲಿ ಶೇ.80ರಷ್ಟು ಪಾಲು ಅಮೆರಿಕ, ಐರೋಪ್ಯ ಒಕ್ಕೂಟ, ಜಪಾನ್‌ನಂತಹ ಅಭಿವೃದ್ಧಿ ಹೊಂದಿದ ದೇಶಗಳದ್ದೇ ಆಗಿದೆ.

ಚಾರ್ವಾಕ

▸ ಶಿವಸುಂದರ್

5. ಇನ್ನಾದರೂ ಈ ಹಸಿರುಮನೆ ಅನಿಲಗಳ ಉತ್ಪಾದನೆಯನ್ನು ಈ ಅಭಿವೃದ್ಧಿ ಹೊಂದಿದ ದೇಶಗಳು ಕಡಿಮೆ ಮಾಡಿಕೊಳ್ಳದೇ ಹೋದರೆ ಜಗತ್ತಿನ ತಾಪಮಾನ ಇನ್ನು ಐವತ್ತು ವರ್ಷಗಳಲ್ಲಿ 6 ಡಿಗ್ರಿಯಷ್ಟು ಏರುತ್ತದೆ.
6. ಇದರ ಪರಿಣಾಮವಾಗಿ ಸಾಗರದ ಮಟ್ಟ ಒಂದು ಮೀಟರ್‌ಗಿಂತಲೂ ಹೆಚ್ಚಾಗುತ್ತದೆ. ಸಾಗರದ ಮೇಲ್ಮೈ ತಾಪಮಾನ ಹೆಚ್ಚಾಗುತ್ತದೆ. ಇದರಿಂದಾಗಿ ಮಾಲ್ದೀವ್ಸ್ ಇನ್ನಿತ್ಯಾದಿ ದೇಶಗಳು ಸಂಪೂರ್ಣವಾಗಿ ಮುಳುಗಿ ಹೋಗುತ್ತವೆ. ತಾಪಮಾನದ ಏರುಪೇರಿನಿಂದ ಹವಾಮಾನ ವೈಪರೀತ್ಯ ಸಂಭವಿಸುತ್ತದೆ. ನೆರೆ, ಪ್ರವಾಹ, ಸುನಾಮಿ, ಬರದ ಸಂಭವಗಳು ಹೆಚ್ಚಾಗುತ್ತವೆ.
7. ಭೂ ತಾಪಮಾನ ಏರಿಕೆಯಿಂದ ಕೃಷಿ ಹಾಳಾಗುತ್ತದೆ. ಹೀಗಾಗಿ ಅದನ್ನೇ ಆಧರಿಸಿದ ಬಡದೇಶಗಳ ಬಡಜನರ ಬದುಕಿನ ಮೇಲೆ ಪ್ರಭಾವ ಬೀರುತ್ತದೆ ಮತ್ತು ಸಾಗರ ತಾಪಮಾನ ಏರಿಕೆಯಿಂದಾಗಿ ಮೀನುಗಾರಿಕೆಗೆ ದೊಡ್ಡ ಪೆಟ್ಟು ಬೀಳುತ್ತದೆ.

ಅಂತರರಾಷ್ಟ್ರೀಯ ವಿಜ್ಞಾನಿಗಳ ಸಮಿತಿ ಅನುಮಾನಕ್ಕೆಡೆಯಿಲ್ಲದಂತೆ ರುಜುವಾತು ಪಡಿಸಿದಂತೆ ಜಾಗತಿಕ ತಾಪಮಾನ ಏರಿಕೆಗೆ ಬಂಡವಾಳಶಾಹಿ ದೇಶಗಳು ಕಾರಣವಾದರೂ ಅದರ ಪರಿಣಾಮವನ್ನು ಅನುಭವಿಸುತ್ತಿರುವವರು ಮಾತ್ರ ಬಡದೇಶಗಳು ಮತ್ತು ಆ ದೇಶಗಳಲ್ಲಿರುವ ಬಡಜನರು!

1997ರಲ್ಲಿ ಜಪಾನಿನ ಕ್ಯೋಟೋದಲ್ಲಿ ಜಗತ್ತಿನ ರಾಷ್ಟ್ರಗಳೆಲ್ಲಾ ಈ ಅಪಾಯವನ್ನು ಪರಿಗಣಿಸಿ ಜಾಗತಿಕ ತಾಪಮಾನವನ್ನು ಕಡಿಮೆ ಮಾಡುವ ಒಪ್ಪಂದಕ್ಕೆ ಸಹಿಹಾಕಿದವು. ಅಮೆರಿಕ ಹೊರತುಪಡಿಸಿ! ಅದಕ್ಕೆ ಅಮೆರಿಕ ಕೊಟ್ಟಕಾರಣ ಅದು ಅಮೆರಿಕದ ಹಿತಾಸಕ್ತಿಗೆ ಮತ್ತು ಅಲ್ಲಿನ ಜನರ ಜೀವನಶೈಲಿಯ ಹಿತಾಸಕ್ತಿಗೆ ವಿರುದ್ಧವಾಗಿದೆಯೆಂದು. ಕ್ಯೋಟೋ ಒಪ್ಪಂದ ಪ್ರತಿಯೊಂದು ರಾಷ್ಟ್ರವು ತನ್ನ ಇಂಗಾಲದ ಉತ್ಪಾದನೆಯನ್ನು ಕಡಿಮೆ ಮಾಡಲು ತಾಕೀತು ಮಾಡುತ್ತದೆ. ಏಕೆಂದರೆ ಅದಾಗದೆ ಭೂತಾಯಿಯ ಒಡಲ ಉರಿ ಕಡಿಮೆಯಾಗುವುದಿಲ್ಲ. ಇಂಗಾಲದ ಬಳಕೆ ಕಡಿಮೆಯಾಗಬೇಕೆಂದರೆ ಪೆಟ್ರೋಲಿಯಂ ಬಳಕೆ ಕಡಿಮೆ ಮಾಡಿಕೊಳ್ಳಬೇಕು. ಅಥವಾ ಇಂಗಾಲವನ್ನು ಹೊರಹಾಕದ ಬದಲೀ ಇಂಧನ ಮೂಲವನ್ನು ಬಳಸಿಕೊಳ್ಳಬೇಕು. ಆದರೆ ವಿಶ್ವದಲ್ಲಿ ಈ ಬಂಡವಾಳಶಾಹಿ ದೇಶಗಳು ನಡೆಸುತ್ತಿರುವ ಕೈಗಾರಿಕೋದ್ಯಮಗಳ ಶಕ್ತಿಯ ಎಲ್ಲಾ ಅಗತ್ಯವನ್ನು ಪೂರೈಸಬಲ್ಲಷ್ಟು ಬದಲೀ ಇಂಧನಮೂಲ ಸದ್ಯಕ್ಕಂತೂ ಇಲ್ಲ. ಹೀಗಾಗಿ ಅಲ್ಲಿಯ ತನಕ ಜಗತ್ತಿನ ತಾಪಮಾನ ಕಡಿಮೆ ಮಾಡಬೇಕೆಂದರೆ ಈ ಬಂಡವಾಳಶಾಹಿಗಳು ತಮ್ಮ ಉತ್ಪಾದನಾ ಚಟುವಟಿಕೆಯನ್ನು ಕಡಿಮೆ ಮಾಡಬೇಕಷ್ಟೆ. ತಮ್ಮ ಐಷಾರಾಮಿ ಬದುಕಲ್ಲಿ ಸರಳತೆ ತಂದುಕೊಳ್ಳಬೇಕು. ಅರ್ಥಾತ್ ಅವು ಲಾಭದ ದುರಾಸೆಯನ್ನು ಮತ್ತು ಅದಕ್ಕಾಗಿ ಪ್ರಪಂಚದ ಮೇಲೆ ಅವು ನಡೆಸುತ್ತಿರುವ ಆಕ್ರಮಣವನ್ನು ನಿಲ್ಲಿಸಬೇಕು. ಇಲ್ಲವೇ ಕಡಿಮೆಯಾಗಬೇಕು. ಆದರೆ ಬಂಡವಾಳಶಾಹಿ ಜಗತ್ತು ನಡೆಯುವುದೇ ಲಾಭವೆಂಬ ಇಂಧನದ ಮೇಲೆ. ದುರಾಸೆಯೆಂಬ ಪ್ರೇರಣೆಯಿಂದ. ಹಾಗೂ ಐಷಾರಾಮಿ ಬದುಕೆಂಬ ಗುರಿಗಾಗಿ.



ಆದ್ದರಿಂದಲೇ ಕ್ಯೋಟೋ ಒಪ್ಪಂದವನ್ನು ಸಾರಾಂಶದಲ್ಲಿ ಯಾವ ಬಂಡವಾಳಶಾಹಿ ದೇಶಗಳೂ ಮಾನ್ಯ ಮಾಡಲೇ ಇಲ್ಲ. ಬದಲಿಗೆ ಹೆಚ್ಚೆಚ್ಚು ವಿಷವನ್ನು ವಾತಾವರಣಕ್ಕೆ ಸೇರಿಸುತ್ತಲೇ ಹೋದವು. ಆದರೆ ಪ್ರಕೃತಿ ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆಯನ್ನು ಸುನಾಮಿ, ಚಂಡಮಾರುತ, ಹಿಮಗಡ್ಡೆಗಳ ಕುಸಿತ, ಸಾಗರದ ಏರಿಕೆಯಲ್ಲಿ ತೋರುತ್ತಾ ಹೋದಂತೆ ಜಾಗತಿಕ ತಾಪಮಾನವನ್ನು ನಿಯಂತ್ರಿಸಲೇಬೇಕಾದ ತುರ್ತು ಅಜೆಂಡಾವನ್ನು ಅದು ಜಾಗತಿಕ ಸಮುದಾಯದ ಎದುರು ಇರಿಸಿದೆ. ಹೀಗಾಗಿಯೇ ವಿಶ್ವಸಂಸ್ಥೆ ಡೆನ್ಮಾರ್ಕಿನ ಕೋಪನ್‌ಹೆಗನ್‌ನಲ್ಲಿ ಜಗತ್ತಿನ ತಾಪಮಾನ ಕಡಿಮೆ ಮಾಡುವುದಕ್ಕೆ ಕಾನೂನುಬದ್ಧ ಒಪ್ಪಂಡವನ್ನು ರೂಢಿಸಲು ಡಿಸೆಂಬರ್‌ನಲ್ಲಿ ವಿಶ್ವದ 193 ರಾಷ್ಟ್ರಗಳ ಸಮಾವೇಶವನ್ನು ಕರೆದಿತ್ತು.

ಈ ಸಮಾವೇಶ ಯಶಸ್ವಿಯಾಗಬೇಕಿದ್ದರೆ ಕನಿಷ್ಟ ಈ ಮೂರು ಒಪ್ಪಂದಗಳಿಗೆ ಜಗತ್ತಿನ ಎಲ್ಲಾ ದೇಶಗಳು ಒಪ್ಪಿಕೊಂಡು ಕಾನೂನುಬದ್ಧತೆಯುಳ್ಳ ಒಪ್ಪಂದಕ್ಕೆ ಸಹಿಹಾಕಬೇಕಿತ್ತು.

1. ಜಗತ್ತಿನ ತಾಪಮಾನವನ್ನು ಇನ್ನು 1.5 ಡಿಗ್ರಿಗಿಂತ ಹೆಚ್ಚಾಗದಂತೆ ತಡೆಹಿಡಿಯಲು ಕಾರ್ಯಸೂಚಿ.
2. ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಇಂಗಾಲದ ಹೊರಸೂಸುವಿಕೆಗೆ ಗರಿಷ್ಠ ಮಿತಿಯನ್ನು ಹಾಕಿಕೊಳ್ಳಬೇಕು. ಅದೇ ರೀತಿ ಇತರ ದೇಶಗಳು ಸಹ ತಮ್ಮ ಪಾಲು ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಇಂಗಾಲದ ಪ್ರಮಾಣದ ಗರಿಷ್ಟ ಮಿತಿಯನ್ನು ಹಾಕಿಕೊಳ್ಳಬೇಕು.
3. ಶ್ರೀಮಂತ ದೇಶಗಳು ಬಡದೇಶಗಳು ಸಹ ತಮ್ಮ ಇಂಗಾಲದ ಹೊರಸೂಸುವಿಕೆಯ ಪ್ರಮಾಣ ತಡೆಗಟ್ಟಲು ಪರ್ಯಾಯ ತಂತ್ರಜ್ಞಾನವನ್ನು ಬಳಸಲು ಬೇಕಾದ ಹಣಕಾಸನ್ನು ಮುಂದಿನ 20 ವರ್ಷಗಳವರೆಗೆ ಅಂದಾಜು 100 ಬಿಲಿಯನ್ ಡಾಲರಷ್ಟನ್ನು ಒದಗಿಸಬೇಕು.
4. ಅಮೆರಿಕ ಹಾಗೂ ಶ್ರೀಮಂತ ದೇಶಗಳು 2020ರೊಳಗೆ ತಮ್ಮ ಇಂಗಾಲದ ಪ್ರಮಾಣವನ್ನು 1990ರ ಪ್ರಮಾಣಕ್ಕೆ ಇಳಿಸಿಕೊಳ್ಳಬೇಕು.
5. ಈ ಒಪ್ಪಂದಕ್ಕೆ ಕಾನೂನುಬದ್ಧ ಮಾನ್ಯತೆಯನ್ನು ನೀಡಲು ಕೋಪನ್‌ಹೆಗನ್ ಸಮಾವೇಶದಲ್ಲಿ ಎಲ್ಲಾ ದೇಶಗಳು ಒಪ್ಪಿಕೊಳ್ಳಬೇಕು.

ಅಂದರೆ ಇದರ ಸಾರಾಂಶವಿಷ್ಟೆ. ವಾತಾವರಣದಲ್ಲಿ ಅತಿ ಹೆಚ್ಚು ಇಂಗಾಲ ಸೇರಲು ಕಾರಣವಾದ ಅಮೆರಿಕ ಹಾಗೂ ಇನ್ನಿತರ "ಅಭಿವೃದ್ಧಿ ಹೊಂದಿದ" ದೇಶಗಳು ಕೂಡಲೇ ತಮ್ಮ ಅಭಿವೃದ್ಧಿ ದರವನ್ನು ಕಡಿಮೆ ಮಾಡಿಕೊಳ್ಳಬೇಕು. ಇಷ್ಟು ವರ್ಷ ಭೂಮಿಯ ಮೇಲೆ ನಡೆಸಿದ ಅತ್ಯಾಚಾರಕ್ಕೆ ಪ್ರಾಯಶ್ಚಿತ್ತ ರೂಪದಲ್ಲಿ ಪರ್ಯಾಯ ಪ್ರಯತ್ನಗಳಿಗೆ ಸಹಕರಿಸಬೇಕು.

ಆದರೆ ಕೋಪನ್‌ಹೆಗನ್ ಸಮಾವೇಶದಲ್ಲಿ ಈ ದೇಶಗಳು ಮಾಡಿದ್ದೇನು? ಅವು ಸಾರಾಂಶದಲ್ಲಿ ಈ ಯಾವ ಜವಾಬ್ದಾರಿಯನ್ನೂ ಒಪ್ಪಲಿಲ್ಲ. ಕೋಪನ್‌ಹೆಗನ್ ಸಮಾವೇಶ ಹತ್ತಿರಕ್ಕೆ ಬರುತ್ತಿದ್ದಂತೆ ಶ್ರೀಮಂತ ದೇಶಗಳು ಈವರೆಗಿನ ಇಂಗಾಲದ ಹೊರಸೂಸುವಿಕೆಯ ಪ್ರಮಾಣದಲ್ಲಿ ಯಾರ ಪಾಲು ಎಷ್ಟೇ ಇದ್ದರೂ ಎಲ್ಲರೂ ಸಮಾನವಾಗಿಯೇ ತಮ್ಮತಮ್ಮ ಇಂಗಾಲದ ಇಳಿಕೆ ಮಿತಿಯನ್ನು ಹಮ್ಮಿಕ್ಕೊಳ್ಳಬೇಕೆಂದು ರಾಗಹಾಡತೊಡಗಿದವು. ಅಂದರೆ ಇಂದು ಅಮೆರಿಕಕ್ಕೆ ಹೋಲಿಸಿದಲ್ಲಿ ಭಾರತದ ಆರ್ಥಿಕತೆ ಅದರ ಶೇ.10ರಷ್ಟು ಇಲ್ಲ. ಹೀಗಾಗಿಯೇ ಇಂಗಾಲ ಹೊರಸೂಸುವಿಕೆಯಲ್ಲಿ ಅಮೆರಿಕದ ಪಾಲು ಶೇ.24ರಷ್ಟಿದ್ದರೆ ಭಾರತದ ಪಾಲು ಕೇವಲ ಶೇ.4. ಹೀಗಾಗಿ ತಾಪಮಾನ ಕಡಿಮೆಯಾಗಬೇಕಿದ್ದರೆ ಸಹಜವಾಗಿಯೇ ಅಮೆರಿಕ ತನ್ನ "ಅಭಿವೃದ್ಧಿ" ಚಟುವಟಿಕೆಗಳನ್ನು ಭಾರತಕ್ಕಿಂತ ಹತ್ತುಪಟ್ಟು ಕಡಿಮೆ ಮಾಡಿಕೊಳ್ಳಬೇಕು. ಆದರೆ ಅಮೆರಿಕವು ಭಾರತ, ಚೀನಾ ಇನ್ನಿತ್ಯಾದಿ ದೇಶಗಳು ಸಹ ತಮ್ಮಷ್ಟೇ ಇಂಗಾಲ ಇಳಿತಾಯ ಮಾಡ ಬೇಕೆಂದು ಹಠ ಹಿಡಿಯಿತು. ಇದರರ್ಥ ಏನೆಂದರೆ ಭಾರತ ಇನ್ನಷ್ಟು ಹಿಂದುಳಿದು ಅಮೆರಿಕದ ಮೇಲೆ ಶಾಶ್ವತ ಅವಲಂಬಿತವಾಗಬೇಕು ಎಂದಾಯಿತು. ಹೀಗೆ ಮನೆಗೆ ಬೆಂಕಿ ಬಿದ್ದರೂ ಅಮೆರಿಕ ಅದರಲ್ಲಿ ಗಳ ಅರಸುವ ಕುತಂತ್ರ ಮಾಡುತ್ತಿದೆ. ಅಷ್ಟು ಮಾತ್ರವಲ್ಲ, ಬಡದೇಶಗಳಿಗೆ ಶ್ರೀಮಂತ ದೇಶಗಳು ಕೊಡುವ ಹಣವನ್ನು ಅವರು ಹೇಗೆ ವೆಚ್ಚ ಮಾಡುತ್ತಾರೆ ಎಂಬ ವರದಿಯನ್ನು ಪಡೆಯುವ, ಪರಿಶೀಲಿಸುವ ಮತ್ತು ಮೇಲ್ವಿಚಾರಣೆಯನ್ನು ನಡೆಸುವ ಅಧಿಕಾರ ತಮಗಿರ ಬೇಕೆಂದು ಶ್ರೀಮಂತ ದೇಶಗಳು ಆಗ್ರಹಪಡಿಸಲು ಪ್ರಾರಂಭಿಸಿವೆ.

ಅಂದರೆ ಈ ಭೂಮಂಡಲ ಮತ್ತು ಮನುಕುಲವೇ ಬಿಕ್ಕಟ್ಟಿನಲ್ಲಿರುವಾಗ ಈ ಶ್ರೀಮಂತ ಬಂಡವಾಳಶಾಹಿ ದೇಶಗಳು ಇಡೀ ಜಗತ್ತನ್ನು ತಮ್ಮ ಸಾಮ್ರಾಜ್ಯಶಾಹಿ ಹಿಡಿತದಲ್ಲಿರಿಸಿಕೊಳ್ಳಲು ಇನ್ನಷ್ಟು ತಂತ್ರಗಳನ್ನು ರೂಪಿಸಲು ಮುಂದಾದವು. ಭಾರತದ ಜೈರಾಮ್ ರಮೇಶ್‌ನಂತಹ ಪರಿಸರ ಮಂತ್ರಿ, ಮನಮೋಹನ್ ಸಿಂಗನಂತ ಪ್ರಧಾನಿ ಒಂದು ಹಂತದಲ್ಲಿ ಈ ಗುಲಾಮಗಿರಿಗೂ ಒಪ್ಪಿಕೊಂಡಿದ್ದರು. ಆದರೆ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ ದೇಶಗಳ ಸ್ವಾಭಿಮಾನೀ ಪ್ರತಿರೋಧದಿಂದಾಗಿ ಇಂಥ ಮಾತೃಘಾತ್ಯಾ ಒಪ್ಪಂದವೊಂದಕ್ಕೆ ಸಹಿಬೀಳಲಿಲ್ಲ. ಪ್ರಾಯಶಃ ಅಮೆರಿಕದಂತ ದೇಶಗಳ ಉದ್ದೇಶವೂ ಇದೇ ಇದ್ದಂತೆ ತೋರುತ್ತದೆ.

ಹೀಗೆ ಜಗತ್ತನ್ನೂ, ಮನುಕುಲವನ್ನೂ ಉಳಿಸಬಹುದಾಗಿದ್ದ ಮತ್ತೊಂದು ಅವಕಾಶವನ್ನು ಈ ನಾಯಕರು ಜಗತ್ತಿನ ಜನತೆಗೆ ಇಲ್ಲವಾಗಿಸಿದ್ದಾರೆ. ಕೋಪನ್‌ಹೆಗನ್ ಸಮಾವೇಶ ಹೀಗೆ ವಿಫಲಗೊಳ್ಳಲು ಕಾರಣವೇನು?

ಜಗತ್ತಿನ ತಾಪಮಾನ ಹೆಚ್ಚಾಗಲು ಮೂಲ ಕಾರಣರಾದ ಜಗತ್ತಿನ ಶ್ರೀಮಂತ ದೇಶಗಳ ಬೃಹತ್ ಉದ್ಯಮಿಗಳೇ, ಬಂಡವಾಳಶಾಹಿ ಸಾಮ್ರಾಜ್ಯವಾದಿಗಳೇ ತಾಪಮಾನವನ್ನು ಕಡಿಮೆ ಮಾಡಬೇಕೆಂಬ ರಾಜಕಾರಣವನ್ನೂ ನಿಯಂತ್ರಿಸುತ್ತಿವೆ. ಜಗತ್ತಿನ ಎಲ್ಲಾ ರಾಜಕಾರಣವನ್ನೂ ನಿಯಂತ್ರಿಸುತ್ತಿವೆ. ಮನುಕುಲದ ಎಲ್ಲಾ ಸಂಕಟಕ್ಕೂ ಈ ಬಂಡವಾಳಶಾಹಿ ಹೇಗೆ ಕಾರಣವೋ ಭೂ ತಾಯಿಯ ಬಸಿರಿಗೆ ಬೆಂಕಿ ಹಚ್ಚಲೂ ಈ ಬಂಡವಾಳಶಾಹಿಗಳೇ ಕಾರಣ. ಹೀಗಾಗಿ ಈ ಭೂಮಂಡಲ ಉಳಿಯಬೇಕೆಂದರೂ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ನಿರ್ನಾಮವಾಗಬೇಕು. ಇದೇ ಕೋಪನ್‌ಹೆಗನ್ ನೀಡುತ್ತಿರುವ ಸಂದೇಶ. ●

ಬಿಜೆಪಿಗೀಗ ಭಾಗವತನೇ ಅಧ್ಯಕ್ಷ!



ಕಂಡಹಾಗೆ

ಗೌರಿ ಲಂಕೇಶ್

ನಿತಿನ್ ಗಡ್ಕರಿ ಎಂಬಾತನನ್ನು ತನ್ನ ನೂತನ ಅಧ್ಯಕ್ಷನಾಗಿ ...ಸುವ ಮೂಲಕ ಭಾರತೀಯ ಜನತಾ ಪಕ್ಷ ಕೊನೆಗೂ ಮುಖವಾಡವನ್ನು ಕಳಚಿ ಹಾಕಿದೆ. ಯಾಕೆಂದರೆ ...ತನಕ ಬಿಜೆಪಿ ತಾನೊಂದು ಸ್ವತಂತ್ರ ರಾಜಕೀಯ ...ಂದೂ, ಆರೆಸ್ಸೆಸ್ ತಾನೊಂದು ಸಾಂಸ್ಕೃತಿಕ ಸಂಘಟನೆ ...ಸುಳ್ಳು ಹೇಳುತ್ತಿದ್ದವು. ಆದರೀಗ ಈ 'ಸ್ವತಂತ್ರ' ...ೀಯ ಪಕ್ಷಕ್ಕೆ ತನ್ನ ನಿಷ್ಠಾವಂತ 'ಸೇವಕ' ಗಡ್ಕರಿಯನ್ನೇ ...ಸ್ಥನನ್ನಾಗಿಸಿರುವ ಆರೆಸ್ಸೆಸ್ ಆ ಮೂಲಕ ಬಿಜೆಪಿ ...ರೀತಿಯಲ್ಲೂ ಸ್ವತಂತ್ರ ಸಂಘಟನೆ ಅಲ್ಲ, ಬದಲಾಗಿ ...ಮು ದ್ವೇಷವನ್ನೇ ತನ್ನ ಬಂಡವಾಳ ಮಾಡಿಕೊಂಡಿರುವ ...ಾತ್ವವಾದಿಗಳ ಆಜ್ಞಾಪಾಲಕ ಎಂಬುದನ್ನು ...ಹಿರಂಗೊಳಿಸಿದೆ.

...ಂದಹಾಗೆ ತಾನು ಹಿಂದೂಗಳ ಪರವೆಂದು ...ಕೊಳ್ಳುವ ಬಿಜೆಪಿಯಲ್ಲಿ ಈಗ ...ಹುದ್ದೆಗಳನ್ನು ಅಲಂಕರಿಸಿರು... ಯಾರ್‍ಯಾರು ಎಂದು ಒಂದುಕ್ಷಣ ...ಸಿ. ಬಿಜೆಪಿಯ ಅಧ್ಯಕ್ಷ ನಿತಿನ್ ... ಲೋಕಸಭೆಯಲ್ಲಿ ಬಿಜೆಪಿ ...ಕಿ ಸುಷ್ಮಾ ಸ್ವರಾಜ್ ಮತ್ತು ...ಭೆಯಲ್ಲಿ ಅವರ ನಾಯಕ ಅರುಣ್ ...ಎಲ್ಲರೂ ಬ್ರಾಹ್ಮಣರೇ. ಹಾಗೆಯೇ ...ನಂತೆ ಆರೆಸ್ಸೆಸ್‌ನ ಪ್ರಸ್ತುತ ಮುಖ್ಯಸ್ಥ ...ಹನ್ ಭಾಗವತ್ ಕೂಡ ಅಪ್ಪಟ ...ಾರಿಯೇ! ಅಂದಮೇಲೆ ಬಿಜೆಪಿ ...ದೆ ಬ್ರಾಹ್ಮಣರ ಜನತಾ ಪಕ್ಷವೇ ...ತು ಅದು ಶೂದ್ರರ ಅಥವಾ ...ರ ಪಕ್ಷ ಅಲ್ಲ ಎಂದಾಯಿತಲ್ಲವೇ. ...ಸ್ ಮತ್ತು ಬಿಜೆಪಿಯ ಮುಖ್ಯ ...ಶ ಪುರೋಹಿತಶಾಹಿ ವ್ಯವಸ್ಥೆಯನ್ನು ...ಡಿ, ಪ್ರೋತ್ಸಾಹಿಸಿ, ಪುನರ್ ...ಸುವುದೇ ಆಗಿರುವುದರಿಂದ ಇದು ಅಚ್ಚರಿಯ ಸಂಗತಿ ...ಬಿಡಿ.

...ಅದೇನೇ ಇರಲಿ, ಇವತ್ತು ಬಿಜೆಪಿ ಎಷ್ಟರಮಟ್ಟಿಗೆ ...ತುಸುಣ್ಣವಾಗಿದೆ ಎಂದರೆ ಸ್ವತಃ ಶ್ರೀರಾಮನೇ ಬಂದರೂ ...ದ ಅದನ್ನು ರಿಪೇರಿ ಮಾಡಲಾಗುವುದಿಲ್ಲ, ಒಂದೆಡೆ ...ನಾಗಲಿ, ಆತನ ಮಂದಿರವಾಗಲಿ ಮತ ಪೆಟ್ಟಿಗೆಗಳನ್ನು ...ಸುತ್ತಿಲ್ಲ, ಇನ್ನೊಂದೆಡೆ ಅಭಿವೃದ್ಧಿಯ ಹೆಸರಲ್ಲಿ ಗುಳುಂ ...ಿದ ಹಣವನ್ನು ಜೀರ್ಣಿಸಿಕೊಳ್ಳಲಾಗುತ್ತಿಲ್ಲ. ...ನ್ನೊಂದೆಡೆ ಆಂತರಿಕ ಕಿತ್ತಾಟಗಳಿಗೆ ಅದೆಷ್ಟೇ ತೇಪೆ ಹಾಕಿದರೂ ಅವು ಬಗೆಹರಿಯುತ್ತಿಲ್ಲ. ವೃದ್ಧ ಆಡ್ವಾಣಿಯ ನೇತೃತ್ವದಲ್ಲಿ ಚುನಾವಣೆಗಳನ್ನು ಗೆಲ್ಲಲಾಗಲಿಲ್ಲ. ಇನ್ನು ಸುಷ್ಮಾ, ಅನಂತ್‌ಕುಮಾರ್, ಅರುಣ್ ಜೇಟ್ಲಿ ಮತ್ತು ವೆಂಕಯ್ಯ ನಾಯ್ಡು ತರಹದವರ ನೇತೃತ್ವದಲ್ಲಿ ಬಿಜೆಪಿಯನ್ನು ಮುನ್ನಡೆಸುವುದು ಹೇಗೆ ಎಂಬ ಪ್ರಶ್ನೆ ಬೃಹದಾಕಾರವಾಗಿ ಎದ್ದು ನಿಂತಿತ್ತು. ಅಂತಹ ಪರಿಸ್ಥಿತಿಯಲ್ಲಿ ಆರೆಸ್ಸೆಸ್‌ನ ಮುಖ್ಯಸ್ಥ ಭಾಗವತ್ ಬಿಜೆಪಿ ಅಧ್ಯಕ್ಷನಾಗಿ ಕರೆದು ಕೂರಿಸಿರುವುದು ಗಡ್ಕರಿ ಎಂಬ ಆಸಾಮಿಯನ್ನು. ಈ ಗಡ್ಕರಿ ಬಗ್ಗೆ ಇತ್ತೀಚಿನತನಕ ಮಹಾರಾಷ್ಟ್ರದ ಗಡಿಯಾಚೆ ಯಾರಿಗೂ ತಿಳಿದಿರಲಿಲ್ಲ. ಅಷ್ಟೇ ಯಾಕೆ, ಈ ಗಡ್ಕರಿ ಇಲ್ಲಿಯತನಕ ಸಂಸದ ಚುನಾವಣೆಯಲ್ಲಾಗಲಿ, ವಿಧಾನಸಭೆಯ ಚುನಾವಣೆಯಲ್ಲಾಗಲಿ, ಕನಿಷ್ಠ ಕಾರ್ಪೊರೇಷನ್ನಿನ ಚುನಾವಣೆಯಲ್ಲಾಗಲಿ ಎಂದೂ ಸ್ಪರ್ಧಿಸಿಲ್ಲ. ಆತ ಇಲ್ಲಿಯತನಕ ಗೆದ್ದಿರುವುದು ಪದವೀಧರರ ಕ್ಷೇತ್ರದಿಂದ ಮಹಾರಾಷ್ಟ್ರದ ವಿಧಾನ ಪರಿಷತ್ತಿಗೆ. ಅಂತಹ ವ್ಯಕ್ತಿ ಇವತ್ತು ಭಾರತದ ಎರಡನೆ ಅತಿದೊಡ್ಡ ಪಕ್ಷದ ಅಧ್ಯಕ್ಷ!



ಇಂತಹ 'ಅದ್ಭುತ ಸಾಧನೆ' ಸಾಧ್ಯವಾಗಿದ್ದು ಎರಡು ಕಾರಣಗಳಿಂದ. ಮೊದಲನೆ ಕಾರಣ, 'ಇಂಕಿ ಪಿಂಕಿ ಪಾಂಕಿ, ಹೂ ಈಸ್ ದಿ ಡಾಂಕಿ' ಎಂದು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನು ಹುಡುಕಿದಾಗ ಆರೆಸ್ಸೆಸ್‌ಗೆ ಸಿಕ್ಕಿದವನೇ ಗಡ್ಕರಿ. ಎರಡನೆ ಕಾರಣ, ಬಿಜೆಪಿಯ ಪ್ರಸ್ತುತ ಚಿಂತಾಜನಕ ಸ್ಥಿತಿ ಮತ್ತು ಎರಡನೆ ಸ್ತರದ ನಾಯಕರ ನಡುವಿನ ಗುದ್ದಾಟ.

ಈ ಬಾರಿ ಬಿಜೆಪಿಯ ರಾಷ್ಟ್ರಾಧ್ಯಕ್ಷ ಯಾರಾಗಬೇಕೆಂಬ ಚರ್ಚೆಯಾಗಲಿ, ಪೈಪೋಟಿಯಾಗಲಿ ಪ್ರಾರಂಭವಾಗುವುದಕ್ಕೆ ಮುನ್ನವೇ ಅದಕ್ಕೆ ಹಲವು ಷರತ್ತುಗಳನ್ನು ಹಾಕಿದ್ದು ಆರೆಸ್ಸೆಸ್‌ನ ದೊಣ್ಣೆನಾಯಕ ಭಾಗವತ್. "ಯಾವುದೇ ಕಾರಣಕ್ಕೂ ಈ ಹುದ್ದೆಗೆ ದೆಹಲಿಯಲ್ಲಿರುವ ನಾಯಕರನ್ನು ಪರಿಗಣಿಸುವುದಿಲ್ಲ" ಎಂದು ಸ್ಪಷ್ಟವಾಗಿ, ಬಹಿರಂಗವಾಗಿ ಭಾಗವತ್ ಹೇಳಿದರು. ಅವರ ಮಾತಿನ ಅರ್ಥ ದೆಹಲಿಯಲ್ಲೇ ಠಿಕಾಣಿ ಹೂಡಿರುವ ಅನಂತ್‌ಕುಮಾರ್, ಸುಷ್ಮಾ, ಜೈಟ್ಲಿ ಮತ್ತು ವೆಂಕಯ್ಯ ನಾಯ್ಡು ಎಂಬ ನಾಲ್ವರು ಅಧ್ಯಕ್ಷರಾಗುವುದಿಲ್ಲ. ಅವರು ಹೀಗೆ ಹೇಳುತ್ತಿದ್ದಂತೆ ದೆಹಲಿಯ ಪತ್ರಕರ್ತರ ನಡುವೆ ಇವರೆಲ್ಲರಿಗೆ ಬಗ್ಗೆ D-4 (ದೆಹಲಿಯ ನಾಲ್ವರು) ಮತ್ತು B-4 (ಬ್ಲಾಕ್‌ಲಿಸ್ಟ್ ಆದ ನಾಲ್ವರು) ಎಂಬ ಅಡ್ಡಹೆಸರು ಪ್ರಾಪ್ತಿಯಾದವು.

ಇನ್ನು ಈ ನಾಲ್ವರ ನಂತರದ ಸ್ಥಾನದಲ್ಲಿ ಇದ್ದವರು ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿ, ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಾನ್, ಗೋವಾದ ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕರ್ ಮತ್ತು ಕೊನೆಯದಾಗಿ ಮಹಾರಾಷ್ಟ್ರದ ಬಿಜೆಪಿ ಅಧ್ಯಕ್ಷ ಗಡ್ಕರಿ.


2010 ರಲ್ಲಿ ಗುಜರಾತ್ ರಾಜ್ಯ ಅನುಷ್ಠಾನಕ್ಕೆ ಬಂದು 59 ವರ್ಷಗಳಾಗುವುದರಿಂದ ಅದ್ದೂರಿ ಸಂಭ್ರಮಗಳನ್ನು ಆಚರಿಸುವ ಉದ್ದೇಶ ಒಂದೆಡೆಯಾದರೆ ಈಗ ಪಾಳುಬಿದ್ದಿರುವ ಬಿಜೆಪಿಯ ಹೊಣೆಯನ್ನು ಹೊತ್ತುಕೊಳ್ಳುವ ಹಿಂಜರಿಕೆ ಇನ್ನೊಂದೆಡೆ ಮೋದಿಗೆ ಇದ್ದಿದ್ದರಿಂದ ಆತ ಬಿಜೆಪಿಯ ನಾಯಕತ್ವವನ್ನು ನಿರಾಕರಿಸಿದನಂತೆ. ಇನ್ನು ಮಧ್ಯಪ್ರದೇಶವನ್ನೇ ನಿಭಾಯಿಸಲು ತಿಣುಕಾಡುತ್ತಿರುವ ಚೌಹಾನ್ ಬಿಜೆಪಿಯ ಅಧ್ಯಕ್ಷ ಪದವಿಯನ್ನು ಕಂಡು ಎಷ್ಟು ಭಯಭೀತನಾದನೆಂದರೆ ತನ್ನ ವಿರುದ್ಧ ತಾನೇ ಪ್ರಚಾರಾಂದೋಲನವನ್ನೇ ಶುರು ಮಾಡಿದ. ಇತ್ತೀಚೆಗೆ ಅಡ್ವಾಣಿಯನ್ನು "ಹಳಸಿರುವ ಉಪ್ಪಿನಕಾಯಿ" ಎಂದು ಪರಿಕರ್ ಬಣ್ಣಿಸಿದ್ದರಿಂದ ಆತನ ಬಗ್ಗೆ ಭಾಗವತನಿಗೆ ಅಷ್ಟೇನೂ ಆಸಕ್ತಿ ಇರಲಿಲ್ಲ. ಹೀಗಾಗಿ, ಯಾರಲ್ಲೂ ಅಸೂಯೆ, ಹೊಟ್ಟೆಕಿಚ್ಚು ಹುಟ್ಟಿಸದಂತಹ 'ಭಾಗ್ಯ' ಗಡ್ಕರಿಯ ಪಾಲಾಗಿದೆ.

ಈ ಗಡ್ಕರಿ ವಿಚಿತ್ರ ಆಸಾಮಿ. ರಾಜಕೀಯವಾಗಿ ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದಂತಹ ಆಸಾಮಿ. ಈತ ವಿರೋಧ ಪಕ್ಷಗಳ ನಾಯಕರೊಂದಿಗೂ ಆತ್ಮೀಯ ಸಂಬಂಧ ಹೊಂದಿರುವಾತ. ಆದರೆ ವ್ಯವಹಾರಿಕ ವಿಷಯಕ್ಕೆ ಬಂದರೆ ಈತ ಅಪ್ಪಟ ಮಾರ್ವಾಡಿ. ಉದಾಹರಣೆಗೆ ಈತನ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ನಿಯಮದಂತೆ ಸರ್ಕಾರಕ್ಕೆ ಮಾರುವುದಿಲ್ಲ. ಬದಲಾಗಿ ಆ ವಿದ್ಯುತ್ ಅನ್ನು ಗಡ್ಕರಿ ರಿಲಯನ್ಸ್ ಕಂಪನಿಗೆ ಮಾರಿ ಶ್ರೀಮಂತನಾಗಿದ್ದಾನೆ.

ವೈಯಕ್ತಿಕ ಚರಿಷ್ಮವಾಗಲಿ, ಜನ ಬೆಂಬಲವಾಗಲಿ, ಜಾತಿ ಬಲವಾಗಲಿ ಇಲ್ಲದ ಗಡ್ಕರಿ ನೇತೃತ್ವದಲ್ಲಿ ಮಹಾರಾಷ್ಟ್ರದಲ್ಲಿ ಬಿಜೆಪಿ ಕೇವಲ 46 ಸ್ಥಾನಗಳನ್ನು ಗೆದ್ದಿತು. (2004 ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ 54 ಕ್ಷೇತ್ರಗಳಲ್ಲಿ ಜಯ ಸಾಧಿಸಿತು). ಇಂತಹ ರಾಜಕೀಯ ಶಕ್ತಿಯನ್ನು ಹೊಂದಿರುವ ಗಡ್ಕರಿಯನ್ನು ಬಿಜೆಪಿ ಅಧ್ಯಕ್ಷನನ್ನಾಗಿಸಿದೆ ಆರೆಸ್ಸೆಸ್. ನಾಗ್ಪುರ್‌ದಲ್ಲಿರುವ ಆರೆಸ್ಸೆಸ್‌ನ ಕೇಂದ್ರ ಕಚೇರಿಯಲ್ಲಿ ಹಿಂದೊಮ್ಮೆ ಜಮಖಾನಗಳನ್ನು ಹಾಸುತ್ತಿದ್ದ ವ್ಯಕ್ತಿಗೆ ಇವತ್ತು ಭಾಗವತ್ ರತ್ನಗಂಬಳಿ ಹಾರಿಸಿದ್ದಾರೆ.

ಇದೆಲ್ಲ ನಮ್ಮಂಥವರಿಗೆ ಸಂತೋಷ ನೀಡುವ ವಿಚಾರವಾದ್ದರಿಂದ ಒಮ್ಮೆಯಾದರೂ ಆರೆಸ್ಸೆಸ್ ಜಿಂದಾಬಾದ್ ಎನ್ನೋಣವೇ?! ●

ಅಧೀನತೆಯನ್ನು ಮೀರಿದ ಸಾರ್ಥಕತೆಯ ಹುಡುಕಾಟದ ಲೇಖಕಿ



● ಡಾ. ಎಂ.ಎಸ್. ಆಶಾದೇವಿ

"ಪುರುಷರಿಗೆ ನಾವು ಸಮರಲ್ಲ, ಅದಕ್ಕಿಂತ ...ಮುಖ್ಯವಾಗಿ ನಮ್ಮ ಸಮಕ್ಕೆ ಪುರುಷರು ಎಂದೂ ...ರು ನಿಲ್ಲಲಾರರು. ಎಲ್ಲಿ ಸಮಾನ ಅವಕಾಶಗಳನ್ನು ...ಯಲಾರೆವೋ ಅಲ್ಲಿ ಹೋರಾಡಿಯಾದರೂ ಒಂದಲ್ಲ ...ಮು ದಿನ ಸಮಾನ ಅವಕಾಶಗಳನ್ನು ಗಳಿಸಿಕೊಂಡೇವು. ...ತೆ ತಂತಾನೇ ಲಭ್ಯವಾಗುವ ನಮ್ಮದೇ ಅನುಭವಗಳನ್ನು ...ತಿಸುತ್ತಾ, ಗೌರವಿಸುವುದನ್ನು ಬಿಟ್ಟು ಧಿಕ್ಕರಿಸುವು...ಲ್ಲಿ ಏನು ಬಂತು? ನಾವೇ ಏಕೆ ಪುರುಷಧ್ವನಿಯಲ್ಲಿ ...ಹಾಡಬೇಕು? ನಾವು ನಮ್ಮ ಕಂಠದಲ್ಲಿ ಹಾಡೋಣ. ... ಜೋ ರಾಗವಿರಲಿ, ಪ್ರೇಮರಾಗವಿರಲಿ, ಇನ್ನಾವ ...ಯ ರಾಗ-ವಿರಾಗಗಳೇ ಇರಲಿ, ನಮ್ಮದೇ ದನಿ ...ರಲಿ."

ಇದು ವೈದೇಹಿಯವರ ಬದುಕು ಮತ್ತು ...ವಣಿಗೆಯ ಮೂಲಕೇಂದ್ರ.

...ಮೂಲಭೂತವಾಗಿ ಸ್ತ್ರೀವಾದ ಮತ್ತು ಸ್ತ್ರೀ ...ತ್ವಗಳನ್ನು ಎರಡು ನೆಲೆಗಳಲ್ಲಿ ಗುರುತಿಸಬಹುದು. ...ಮು ಸ್ತ್ರೀಶೋಷಣೆಯ ಅನಾವರಣ. ಮತ್ತೊಂದು, ...ಕ್ತಿ ವಿಶೇಷಗಳ ಅನಾವರಣ. ಮೊದಲ ನೆಲೆ ಸ್ತ್ರೀ ...ನದ ವಿವಿಧ ಮೂಲಗಳನ್ನು, ಅದರ ಬಹುಮುಖೀ ...ಾಮಗಳನ್ನು ಗುರುತಿಸುವ ಪ್ರಯತ್ನದ್ದು. ಬದಲಾದ ...ದ ಹಿನ್ನೆಲೆಯಲ್ಲಿಯೂ ಸ್ತ್ರೀ ಶೋಷಣೆ ...ಮುಂದುವರೆದಿರುವ ಕಟುವಾಸ್ತವದ ಬೆನ್ನುಹತ್ತಿರುವುದು. ...ಎರಡನೆಯ ನೆಲೆ ಈ ಕಟುವಾಸ್ತವದಾಚೆಗೂ ಹೆಣ್ಣು ...ದಿಂದ ಕಾಪಾಡಿಕೊಂಡು ಬಂದಿರುವ ಜೀವಚೈತನ್ಯದ ...ಲವನ್ನು ಹುಡುಕುವಂತಹದ್ದು. ಈ ಚೈತನ್ಯ ...ಲದ ಆವಿಷ್ಕಾರದಲ್ಲಿ ಹೆಣ್ಣಿನ ವ್ಯಕ್ತಿತ್ವದ ಶಕ್ತಿ ...ದರ್ಯಗಳಿರುವನ್ನೂ ಗುರುತಿಸಿ ಹೆಣ್ಣಿನ ಬದುಕಿಗೆ ...ಮ ಅರ್ಥವನ್ನು, ಅದರ ಚಹರೆಗಳನ್ನು ಹುಡುಕುವ ...ಲದ್ದು, ಅಧೀನ ಬದುಕಿನೊಳಗೂ ಇರಬಹುದಾದ ...ಬದುಕಿನ ಸಾರ್ಥಕ ಗಳಿಗೆಗಳನ್ನು ಹಿಡಿಯುವ ...ಯತ್ನದ್ದು. ಅಂತಿಮವಾಗಿ ಈ ಎರಡೂ ನೆಲೆಗಳ ...ಶವೂ ಒಂದೇ. ಸ್ತ್ರೀಲೋಕದ ಅನಾವರಣ. ಆದರೆ ...ಕೋನಗಳ ಭಿನ್ನತೆಯಿಂದಾಗಿ ಫಲಿತಾಂಶವೂ ಬೇರೆಯೇ ಆಗುತ್ತದೆ. ವೈದೇಹಿ ನಿಸ್ಸಂದೇಹವಾಗಿ ಎರಡನೇ ನೆಲೆಗೆ ಸೇರುವ ಲೇಖಕಿ. ಅವರು ಈ ಮಾದರಿಯ ಅತ್ಯುತ್ತಮ ಪ್ರತಿನಿಧಿಯೂ ಆಗಿದ್ದಾರೆ. ಈ ಎರಡರಲ್ಲಿ ಯಾವುದು ಹೆಚ್ಚು ಪ್ರಸ್ತುತ ಅಥವಾ ಮುಖ್ಯ ಎನ್ನುವ ಚರ್ಚೆಯಿಲ್ಲಿ ಅನವಶ್ಯಕ. ಆದರೆ ಸ್ತ್ರೀ ಶಕ್ತಿಯ ವಿವಿಧ ಮುಖಗಳ ಹುಡುಕಾಟವು ಸ್ತ್ರೀವಾದಿ ಹೋರಾಟಕ್ಕೆ ಮೊದಲನೆಯದಕ್ಕಿಂತ ಹೆಚ್ಚು ಚೈತನ್ಯವನ್ನು, ಆತ್ಮಗೌರವವನ್ನು ತುಂಬುತ್ತದೆ ಎನಿಸುತ್ತದೆ ನನಗೆ. ವೈದೇಹಿ ನಮ್ಮ ಕಾಲದ ಪ್ರಮುಖ ಲೇಖಕಿಯಾಗುವುದು ಈ ಕಾರಣಕ್ಕೆ ಎಂದು ನಾನು ತಿಳಿದಿದ್ದೇನೆ.

ಮೊದಲು ಉದ್ಧರಿಸಿದ ವೈದೇಹಿಯವರ ಮಾತುಗಳನ್ನೇ ಆಧಾರವಾಗಿಟ್ಟುಕೊಂಡು ಮುಂದುವರೆಯುವುದಾದರೆ, ಆಧುನಿಕ ಸ್ತ್ರೀವಾದಿ ತಾತ್ವಿಕ ನೆಲೆಗಳಿಗಿಂತ ಭಿನ್ನವಾದ ಸ್ತ್ರೀವಾದಿ ಚಿಂತನಾ ಕ್ರಮವೊಂದನ್ನು ವೈದೇಹಿ ಗುರುತಿಸಿ ಕಟ್ಟಲು ಪ್ರಯತ್ನಿಸುವಂತೆ ತೋರುತ್ತದೆ. ಇದನ್ನು 'ಆದಿಮ ಸ್ತ್ರೀವಾದ' ಎಂದೂ ಗುರುತಿಸಲು ಸಾಧ್ಯ ಎನಿಸುತ್ತದೆ. ಸಮಾನತೆಯ ಹೋರಾಟ ಅಥವಾ ಪ್ರಕ್ರಿಯೆಗಿಂತ ಹೆಚ್ಚಾಗಿ ವಿಭಿನ್ನತೆಯಲ್ಲೇ ಮಹತ್ವವನ್ನು, ವೈಶಿಷ್ಟ್ಯತೆಯನ್ನು ಗುರುತಿಸುವ ಮೂಲಕವೇ ಗಂಡು ಮತ್ತು ಹೆಣ್ಣಿನ ವ್ಯಕ್ತಿತ್ವಗಳ ಅನನ್ಯತೆಯನ್ನು ಕಂಡುಕೊಳ್ಳುವ ಪ್ರಯತ್ನವೂ ಇಲ್ಲಿದೆ. ಗಂಡು ಮತ್ತು ಹೆಣ್ಣು ಇಬ್ಬರಿಗೂ ಅವರವರಿಗೆ ಮಾತ್ರ ಸಾಧ್ಯವಾಗುವ ಅನುಭವ ವಿಶೇಷಗಳಿವೆ ಮತ್ತು ಈ ಅನುಭವ ವಿಶೇಷಗಳ ದೃಷ್ಟಿಯಿಂದ ಹೆಣ್ಣು ಹೆಚ್ಚು ಅದೃಷ್ಟವಂತಳು ಎನ್ನುವುದು ವೈದೇಹಿಯವರ ನಿಲುವು.

ಬದುಕನ್ನು ಕುರಿತ ಹೆಣ್ಣಿನ ಪ್ರೀತಿ, ಬದ್ಧತೆ ಮತ್ತು ಶ್ರದ್ಧೆ ಇವುಗಳಿಗೆ ವೈದೇಹಿ ಉದ್ದಕ್ಕೂ ಹೆಚ್ಚಿನ ಒತ್ತು ಕೊಡುತ್ತಾ ಹೋಗುತ್ತಾರೆ. ಅವರ ಕತೆಗಳಲ್ಲಿ ಬರುವ ಪುಟ್ಟಮ್ಮತ್ತೆ, ಶಕುಂತಲೆ, ಅಕ್ಕು-ಹೀಗೆ ಯಾರೂ ಇರಬಹುದು... ಹೆಣ್ಣು ಗಂಡಿಗಿಂತ ಹೆಚ್ಚು ಶಕ್ತಿವಂತಳು, ಚೈತನ್ಯದಾಯಕಳೂ ಆಗಿ ಕಾಣಿಸುವುದು ಪ್ರಧಾನವಾಗಿ ಈ ಅಂಶದಿಂದ. ಆದ್ದರಿಂದಲೇ ಬದುಕಿನ ಮೇಲೆ ಹೆಣ್ಣಿಗಿರುವ ಹಿಡಿತ ಅಪಾರವಾದುದು. ಆಯ್ಕೆಯ ಬದುಕಿಲ್ಲದ, ಮನ್ನಣೆಯಿಲ್ಲದ, ಅಧಿಕೃತತೆಯಿಲ್ಲದ ಬದುಕನ್ನು ಕುರಿತು ಹೆಣ್ಣಿಗೆ ಇಂತಹ ಜೀವದ ಪ್ರೀತಿ ಹೇಗೆ ಸಾಧ್ಯವಾಗುತ್ತದೆ ಎನ್ನುವ ಕುತೂಹಲ, ಅದನ್ನು ಕುರಿತ ಹೆಮ್ಮೆ, ಮೆಚ್ಚುಗೆ, ವಿಷಾದ, ಅವುಡುಗಚ್ಚಿದ ಕೋಪ-ಎಲ್ಲವೂ ಇದೆ. ಪುರುಷರನ್ನು ಕುರಿತ ಅಸೀಮ ವ್ಯಂಗ್ಯದ, ತಿರಸ್ಕಾರದ ಎಳೆಯೊಂದು ಇವರ ಕತೆಗಳಲ್ಲಿ ಉದ್ದಕ್ಕೂ ಹರಿಯುತ್ತಿರುತ್ತದೆ. ಅದು ಅಪ್ಪ, ಗಂಡ, ಅಣ್ಣ, ತಮ್ಮ ಯಾರೇ ಇರಬಹುದು. ಆದರೆ ಅದು ಎಲ್ಲಿಯೂ ಪುರುಷದ್ವೇಷದ ರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ ಎನ್ನುವುದನ್ನು ಗಮನಿಸಬೇಕು. ಇದೊಂದು ಕಷ್ಟಸಾಧ್ಯವಾದ ದೃಷ್ಟಿಕೋನ. ಇದನ್ನು ವೈದೇಹಿ ಸಾಧಿಸುವುದು 'ಪ್ರತಿಸ್ಪರ್ಧಿ ದಾರಿ'ಯನ್ನು ಹಿಡಿಯದೇ ಇರುವುದರ ಮೂಲಕ. ಹೆಣ್ಣನ್ನು ಅವಳ ಎಲ್ಲ ಸಾಧ್ಯತೆಯಲ್ಲಿ ಪರೀಕ್ಷಿಸುತ್ತಲೇ ಬದುಕು ಒಡ್ಡುವ ಎಲ್ಲ ಸವಾಲುಗಳನ್ನು ಅವಳು ಎದುರಿಸುವ ಕ್ರಮಗಳನ್ನು ಖಚಿತವಾಗಿ ಮಂಡಿಸುತ್ತಲೇ ಪರೋಕ್ಷವಾಗಿ ವ್ಯವಸ್ಥೆಯನ್ನು ಪ್ರಶ್ನಿಸುತ್ತಾ ಹೋಗುತ್ತಾರೆ.

'ಮಲ್ಲಿನಾಥನ ಧ್ಯಾನ'ದಲ್ಲಿ ಇವರಿಗೆ ಮೊದಲ ಮಗು ಹುಟ್ಟಿದ ಗಳಿಗೆಯ ವಿವರಗಳಿವೆ. ಹೆರಿಗೆ ಮಾಡಿಸಿದ ಸೂಲಗಿತ್ತಿ ಹೇಳುತ್ತಾಳೆ, 'ಅದು ಎಂತಾದರೂ ಬೇಕು, ಈ ಹೆಣ್ಣು ಜನ್ಮ ಬೇಡ' ಎಂದು. ಹೆರಿಗೆ ನೋವಿನ ಪರಾಕಾಷ್ಠೆಯ ಗಳಿಗೆಯಲ್ಲಿ ಹೆಣ್ಣಿಗೆ ಹುಟ್ಟುವ ಸಹಜ ಮಾತಾದರೂ, ಉದ್ದಕ್ಕೂ ಹೆಣ್ಣಿನ ಅನಾದರದ ಬದುಕನ್ನು ಕುರಿತ ತೀರ್ಮಾನವೂ ಹೌದು.


ಆದರೆ ಇದಕ್ಕೆ ಪ್ರತಿಕ್ರಿಯೆಯಾಗಿ ವೈದೇಹಿಯವರಿಗೆ ಅನಿಸುತ್ತದೆ, 'ಜನ್ಮಗಳು ಇರುವುದು ಹೌದಾದರೆ, ಎಲ್ಲ ಜನ್ಮಗಳಲ್ಲಿಯೂ ಹೆಣ್ಣೇ ಆಗಬೇಕು ಎಂದು ಪ್ರಾರ್ಥಿಸುತ್ತಿದ್ದುದ್ದು ಆಕೆಗೆ ಕೇಳುವಂತಿರಲಿಲ್ಲ.'

ಹೆಣ್ಣಿನ ಜನ್ಮವನ್ನು ಕುರಿತ, ಬದುಕನ್ನು ಕುರಿತ ವೈದೇಹಿಯವರ ಈ ಅಸೀಮವಾದ ಪ್ರೀತಿ ಮತ್ತು ಆತ್ಮವಿಶ್ವಾಸ ಎಲ್ಲ ಪೀಳಿಗೆಯ ಲೇಖಕರಿಗೆ ಸ್ಫೂರ್ತಿ.

ಎಂದೋ ಸಲ್ಲಬೇಕಾಗಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಈಗಲಾದರೂ ಅವರಿಗೆ ಸಂದಿರುವುದು ಸಂತೋಷದ, ಸಮಾಧಾನದ ಸಂಗತಿ. ಅವರಿಗೆ ಅಭಿನಂದನೆಗಳು.... ●

ನಮ್ಮದೆಷ್ಟು ಸಮರ್ಥ ಸರ್ಕಾರ?

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಎಷ್ಟು ಸಮರ್ಥವಾಗಿದೆ ಎಂದು ಬಿಜೆಪಿಗಳನ್ನು ಕೇಳಿದರೆ 'ಬಿಜೆಪಿ ಅಧಿಕಾರಕ್ಕೇರಿದ ಮೇಲೆ ಏನೆಲ್ಲಾ ಸಾಧನೆಗಳನ್ನು ಮಾಡಿದೆ' ಎಂಬ ದೊಡ್ಡ ಪಟ್ಟಿಯನ್ನೇ ಕೊಡುತ್ತಾರೆ. ನೀವು ಕೇಳದಿದ್ದರೂ 'ನಾವು ಇದನ್ನೆಲ್ಲಾ ಮಾಡಿದ್ದೇವೆ' ಎಂದು ಗೇಣುದ್ದಾ ಮಾಡಿದ್ದನ್ನೆಲ್ಲಾ ಮಾರುದ್ದ ಎಂಬಂತೆ ತೋರಿಸುತ್ತಾರೆ. 'ಯಶಸ್ವಿ ನೂರು ದಿನ ಪೂರೈಸಿದ್ದೇವೆ', 'ಯಶಸ್ವಿ ಒಂದು ವರ್ಷ ಪೂರೈಸಿದ್ದೇವೆ', 'ಇಷ್ಟೆಲ್ಲಾ ಸಾಧನೆ ಮಾಡಿದ್ದೇವೆ' ಎಂದೆಲ್ಲಾ ಪತ್ರಿಕೆಗಳಲ್ಲಿ, ಟಿವಿಗಳಲ್ಲಿ ಈಗಾಗಲೇ ಸಾಕಷ್ಟು ಬೊಂಬಡಾ ಹೊಡೆದಿದ್ದಾರೆ. ಈ ಸರ್ಕಾರ ಎಷ್ಟು ಸಮರ್ಥವಾಗಿದೆ, ಜನರಿಗೆ ಇದರಿಂದ ಎಷ್ಟು ಪ್ರಯೋಜನವಾಗಿದೆ ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕೆಂದರೆ ನೇರವಾಗಿ ಸಾಮಾನ್ಯ ಜನರನ್ನು ಹೋಗಿ ಕೇಳಬೇಕು. ಅಲ್ಲದೇ, ಅದು ಇದುವರೆಗೆ ಮಾಡಿರುವ ಅಭಿವೃದ್ಧಿಯ ಕುರಿತಂತೆ ದಾಖಲಾತಿಗಳನ್ನು ಅಧ್ಯಯನ ಮಾಡಬೇಕು. ಆಗ ಮಾತ್ರವೇ ನಿಜವಾಗಿಯೂ ಈ ಸರ್ಕಾರ ಎಷ್ಟು ಸಮರ್ಥವಾಗಿ ಕಾರ್ಯನಿರ್ವಹಿಸಿದೆ ಎಂಬುದು ಗೊತ್ತಾಗುತ್ತದೆ.



ಅಂಥ ಕೆಲಸವೊಂದನ್ನು ದಕ್ಷ ಎಂಬ ಸರ್ಕಾರೇತರ ಸಂಸ್ಥೆಯೊಂದು ಮಾಡಿ ತನ್ನ ಪ್ರಾಥಮಿಕ ವರದಿಯನ್ನು ಹೊರತಂದಿದೆ. ಅದರಲ್ಲಿ ಸರ್ಕಾರದ ಸಾಧನೆ ಮತ್ತು ವೈಫಲ್ಯ ಎರಡನ್ನೂ ಪಟ್ಟಿ ಮಾಡಿದೆ. ಸಾಧನೆಯ ಬಗ್ಗೆ ನಾವು ಕೇಳದಿದ್ದರೂ ನಮ್ಮ ಮುಖ್ಯಮಂತ್ರಿಗಳು, ಮಂತ್ರಿ ಮಹೋದಯರು ಬೇಕಾದಷ್ಟು ಪ್ರಚಾರ ಮಾಡಿದ್ದರಿಂದ ದಕ್ಷ ಪಟ್ಟಿ ಮಾಡಿರುವ ವೈಫಲ್ಯವನ್ನೊಮ್ಮೆ ನೋಡಬೇಕಿದೆ. ಅಂತೆಯೇ ನಾವು ಆರಿಸಿ ಕಳಿಸಿದ ಎಮ್ಮೆಲ್ಲೆಗಳು ವಿಧಾನಸೌಧದಲ್ಲಿ ಕುಳಿತು ನಿದ್ದೆ ಮಾಡುತ್ತಿದ್ದಾರಾ ಅಥವಾ ತಂತಮ್ಮ ಕ್ಷೇತ್ರಗಳ ಅಭಿವೃದ್ಧಿಗಾಗಿ ಚರ್ಚಿಸುತ್ತಿದ್ದಾರಾ ಎಂಬುದನ್ನೂ ಈ ವರದಿಯ ಬೆಳಕಿನಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ.

ಬಿಜೆಪಿ ಸರ್ಕಾರ ಸ್ಥಾಪನೆಯಾದ ಮೇಲೆ ಇಲ್ಲಿಯತನಕ ಒಟ್ಟು ಮೂರು ವಿಧಾನಸಭೆ ಅಧಿವೇಶನಗಳು ನಡೆದಿವೆ. ಇವುಗಳ ಒಟ್ಟು ಅವಧಿ 46 ದಿನಗಳು. ನಮ್ಮ 225 ಜನ ಎಮ್ಮೆಲ್ಲೆಗಳಲ್ಲಿ ಈ ನಲವತ್ತಾರೂ ದಿನ ತಪ್ಪದೇ ಅಧಿವೇಶನದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಎಷ್ಟು ಗೊತ್ತೆ? ಕೇವಲ ಹನ್ನೆರಡು ಜನ ಮಾತ್ರ! ಉಳಿದವರಿಗೆ ಪಾಪ ತಮ್ಮ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ, ರಾಜ್ಯದ ಒಟ್ಟಾರೆ ಅಭಿವೃದ್ಧಿಯ ಬಗ್ಗೆ ಚರ್ಚಿಸುವುದಕ್ಕೆ ಪುರುಸೊತ್ತಿರಲಿಲ್ಲ ಎನ್ನಿಸುತ್ತದೆ! ಬಹಳಷ್ಟು ಎಮ್ಮೆಲ್ಲೆಗಳು ಅಧಿವೇಶನದ ಸಮಯದಲ್ಲಿ ಬಂದು ಹಾಜರಾತಿ ಹಾಕಿ ಒಂದೆರಡು ನಿಮಿಷ ಇದ್ದು ಆರಾಮಾಗಿ ಮನೆಗೆ ಹೋಗುತ್ತಾರೆ. ಆದರೂ ಅವರು ಪೂರ್ತಿ ದಿನ ಅಧಿವೇಶನದಲ್ಲಿದ್ದರು ಎಂದೇ ಪರಿಗಣಿತವಾಗುತ್ತದೆ. ಹಾಗಿದ್ದಾಗಲೂ ಮೂವರು ಎಮ್ಮೆಲ್ಲೆಗಳು ಕೇವಲ 15 ದಿನ ಮಾತ್ರ ಅಧಿವೇಶನದಲ್ಲಿ ಪಾಲ್ಗೊಂಡಿದ್ದಾರೆ!


ಅಧಿವೇಶನದಲ್ಲಿ ಪಾಲ್ಗೊಂಡವರು ತಮ್ಮ ಕ್ಷೇತ್ರದ ಬಗ್ಗೆ ಅಥವಾ ಒಟ್ಟಾರೆ ರಾಜ್ಯದ ಅಭಿವೃದ್ಧಿಯ ಬಗ್ಗೆ ಎಷ್ಟರಮಟ್ಟಿಗೆ ತಲೆಕೆಡಿಸಿಕೊಂಡು ಚರ್ಚಿಸಿದ್ದಾರೆ ಎಂಬ ವಿಚಾರವನ್ನೂ ನೋಡಿ. ಈ ನಲ್ವತ್ತಾರು ದಿನಗಳ ಅಧಿವೇಶನಗಳ ಅವಧಿಯಲ್ಲಿ 225 ಎಮ್ಮೆಲ್ಲೆಗಳ ಪೈಕಿ 75 ಎಮ್ಮೆಲ್ಲೆಗಳು ಒಂದೇಒಂದು ಪ್ರಶ್ನೆ ಕೇಳಿಲ್ಲ! ಅಂದರೆ ಒಟ್ಟು ವಿಧಾನಸಭೆಯ ಶೇ.40 ಭಾಗ ಚೆನ್ನಾಗಿ ನಿದ್ರೆ ಮಾಡುತ್ತಿತ್ತು ಎಂದರ್ಥವಲ್ಲವೆ? 31 ಎಮ್ಮೆಲ್ಲೆಗಳು ಐದಕ್ಕಿಂತ ಕಡಿಮೆ ಪ್ರಶ್ನೆಗಳನ್ನು ಕೇಳಿದ್ದಾರೆ. 20ಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಕೇಳಿದ ಎಮ್ಮೆಲ್ಲೆಗಳ ಸಂಖ್ಯೆ ಕೇವಲ 35. ಕೇವಲ ಒಬ್ಬ ಜನಪ್ರತಿನಿಧಿ ಮಾತ್ರ 100 ಪ್ರಶ್ನೆಗಳನ್ನು ಕೇಳಿದ್ದಾನೆ!

ಈ ಅಂಕಿಅಂಶಗಳನ್ನು ನೋಡಿದರೆ ಜನ ಇವರನ್ನೆಲ್ಲಾ ಆಯ್ಕೆ ಮಾಡಿ ಕಳಿಸಿರುವುದು ತಮ್ಮ ಕ್ಷೇತ್ರದ, ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸುವುದಕ್ಕೋ ಅಥವಾ ಬೆಂಗಳೂರು ಸುತ್ತುವುದಕ್ಕೋ, ರೆಸಾರ್ಟ್‌ಗಳಲ್ಲಿ ಮಜಾ ಮಾಡುವುದಕ್ಕೋ, ವಿಧಾನಸೌಧಕ್ಕೆ ಹೋಗಿ ನಿದ್ರೆ ಮಾಡುವುದಕ್ಕೋ ಎಂಬ ಅನುಮಾನ ಬಾರದಿರದು. ಯಾವುದೋ ಒಂದು ಸಮಸ್ಯೆಯ ಬಗ್ಗೆ ಪ್ರಶ್ನೆ ಕೇಳಿದಾಕ್ಷಣವೇ ಅದು ಬಗೆಹರಿದುಬಿಡುತ್ತದೆಂದೇನೂ ಇಲ್ಲ. ಆದರೂ ನಮ್ಮ ಜನಪ್ರತಿನಿಧಿಗಳು ಪ್ರಶ್ನೆ ಕೇಳಿ ಚರ್ಚೆ ಮಾಡದಷ್ಟು ಸೋಂಭೇರಿಗಳಾಗಿದ್ದಾರೆಂಬುದು ಇದರಿಂದ ಗೊತ್ತಾಗುತ್ತದೆ.

ಇನ್ನು ಸರ್ಕಾರದ ಆಡಳಿತವನ್ನು ಕುರಿತಂತೆಯೂ ದಕ್ಷ ವರದಿಯಲ್ಲಿ ವಿವರವಾದ ವಿಶ್ಲೇಷಣೆಗಳಿವೆ. ರಾಜ್ಯದಲ್ಲಿ ಶೇ.65ಕ್ಕಿಂತ ಹೆಚ್ಚು ಜನ ವಾಸಿಸುವುದು ಗ್ರಾಮೀಣ ಪ್ರದೇಶದಲ್ಲಿ, ಹೆಚ್ಚೂಕಡಿಮೆ ಅವರೆಲ್ಲರೂ ಕೃಷಿ ಅಥವಾ ಅದರ ಆಧಾರಿತ ಕಸುಬುಗಳಲ್ಲಿ ತೊಡಗಿಕೊಂಡಿದ್ದಾರೆ. ಯಡಿಯೂರಪ್ಪನವರು ಹಸಿರುಶಾಲು ಹೊದ್ದು ಅನ್ನದಾತನ ಹೆಸರಿನಲ್ಲೇ ಅಧಿಕಾರ ಸ್ವೀಕರಿಸಿದ್ದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಅಧಿಕಾರಕ್ಕೆ ಬಂದ ಮೇಲೆ ಅನ್ನದಾತರನ್ನೂ, ಅವರ ಗ್ರಾಮೀಣ ಪ್ರದೇಶವನ್ನೂ ಕಡೆಗಣಿಸಿರುವುದು ದಕ್ಷ ವರದಿಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಕೆಲವು ಅಂಕಿಅಂಶಗಳನ್ನೇ ನೋಡಿ. ಈ ಅವಧಿಯಲ್ಲಿ ಬಿಜೆಪಿ ಸರ್ಕಾರ ಗ್ರಾಮೀಣಾಭಿವೃದ್ಧಿಗೆ ಬಿಡುಗಡೆ ಮಾಡಿರುವ ಒಟ್ಟು ಹಣ ಹತ್ತು ಕೋಟಿ ರೂಪಾಯಿಗಳು. ಅಂದರೆ ಒಟ್ಟು ಯೋಜನೆಯ ಶೇ.4ರಷ್ಟು ಮಾತ್ರ! ಅದೇ ವೇಳೆಯಲ್ಲಿ ಶೇ.35ರಷ್ಟು ಜನ ವಾಸಿಸುವ ನಗರಗಳ ಅಭಿವೃದ್ಧಿಗೆ ಬಿಡುಗಡೆ ಮಾಡಿದ್ದು 40 ಕೋಟಿ ರೂಪಾಯಿಗಳನ್ನು! ಅಂದರೆ ಒಟ್ಟು ಯೋಜನೆಯ ಶೇ.16ರಷ್ಟು!

ಹೇಗೆ ಗ್ರಾಮೀಣ ಪ್ರದೇಶವನ್ನು ಕಡೆಗಣಿಸಿ ನಗರಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತಿದೆ ಎಂಬುದಕ್ಕೆ ಬೆಂಗಳೂರಿನ ಮೂಲಸೌಕರ್ಯಕ್ಕಾಗಿ ಅದು ಹಸಿರು ನಿಶಾನೆ ತೋರಿಸಿರುವ ಯೋಜನೆಗಳೇ ನಿದರ್ಶನದಂತಿವೆ. ಮಾನೋ ರೈಲು ಯೋಜನೆಗೆ 4,000 ಕೋಟಿ ರೂ., ಮೊದಲ ಹಂತದ ಮೆಟ್ರೋ ಯೋಜನೆಗೆ 14,000 ಕೋಟಿ ರೂ., ಬಿಡಿಎ ವತಿಯಿಂದ ನಿರ್ಮಿಸ ಲಾಗುವ ಹೊರ ವರ್ತುಲ ರಸ್ತೆಗೆ 800 ಕೋಟಿ ರೂ. – ಹೀಗೆ ಬೆಳೆಯುತ್ತಾ ಹೋಗುತ್ತದೆ ಪಟ್ಟಿ. ಅದೇ ಹೊತ್ತಿನಲ್ಲಿ ಗ್ರಾಮೀಣ ಮೂಲ ಸೌಕರ್ಯ ವೃದ್ಧಿಗಾಗಿ ಇಷ್ಟೊಂದು ದೊಡ್ಡ ವೆಚ್ಚದ ಒಂದೇ ಒಂದು ಯೋಜನೆಯನ್ನೂ ಘೋಷಿಸಿಲ್ಲ!

ನಾವು ನೀವೆಲ್ಲ ನಮ್ಮ ಬೆವರಿನ ಹಣವನ್ನು ತೆರಿಗೆ ಕಟ್ಟಿದರೆ ಅದನ್ನು ಮಂತ್ರಿಮಹೋದಯರು ಹೇಗೆ ಚೆಲ್ಲುತ್ತಾರೆ ಎಂಬುದನ್ನೂ ದಕ್ಷ ವರದಿ ಎತ್ತಿ ತೋರಿಸಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರು ತಮ್ಮ ಮನೆಯನ್ನು ನವೀಕರಿಸಿಕೊಳ್ಳಲು ಬರೊಬ್ಬರಿ ಒಂದು ಕೋಟಿ ಎಪ್ಪತ್ತು ಲಕ್ಷ ಖರ್ಚು ಮಾಡಿದ್ದಾರೆ! ಗೃಹಮಂತ್ರಿ ವಿ.ಎಸ್.ಆಚಾರ್ಯ ಅವರು 61 ಲಕ್ಷ ಖರ್ಚು ಮಾಡಿ ತಮ್ಮ ಮನೆ ರಿಪೇರಿ ಮಾಡಿಸಿಕೊಂಡಿದ್ದಾರೆ. ಜಗದೀಶ್ ಶೆಟ್ಟರ್ 25 ಲಕ್ಷ, ಶೋಭಾ ಕರಂದ್ಲಾಜೆ 38 ಲಕ್ಷ, ಕರುಣಾಕರ ರೆಡ್ಡಿ 88 ಲಕ್ಷ ರೂಪಾಯಿಗಳನ್ನು ತಮ್ಮ ತಮ್ಮ ಮನೆಗಳ ದುರಸ್ತಿಗಾಗಿ ಖರ್ಚು ಮಾಡಿದ್ದಾರೆ. ಹೀಗೆ, ಮಂತ್ರಿಗಳು ತಮ್ಮ ಬಂಗಲೆಗಳನ್ನು ರಿಪೇರಿ ಮಾಡುವುದಕ್ಕೆ ಖರ್ಚು ಮಾಡಿದ ನಮ್ಮನಿಮ್ಮೆಲ್ಲರ ಹಣ ಹತ್ತು ಕೋಟಿಯನ್ನು ದಾಟುತ್ತದೆ!



▸▸ಕುಮಾರ್ ಬುರಡಿಕಟ್ಟಿ

ಈ ಸಂದರ್ಭದಲ್ಲಿ ಒಂದು ವಿಚಾರವನ್ನು ನೆನಪಿಸಿಕೊಳ್ಳಿ. ಉತ್ತರ ಕರ್ನಾಟಕದಲ್ಲಿ ಪ್ರವಾಹ ಬಂದು ಸಾವಿರಾರು ಮನೆಗಳು ಕೊಚ್ಚಿಹೋಗಿವೆಯಲ್ಲ? ಅವರಲ್ಲಿ ಬಹುತೇಕರಿಗೆ ಒಂದು ಬಿಡಿಗಾಸೂ ಕೊಟ್ಟಿಲ್ಲ, ಕೆಲವರಿಗೆ ಮುನ್ನೂರು, ನಾನೂರು, ಐನೂರು ರೂಪಾಯಿ ಚೆಕ್ ಕೊಟ್ಟಿದ್ದಾರಂತೆ!

ಇನ್ನು ಅಧಿಕಾರಕ್ಕೇರಿದ ಒಂದೇ ತಿಂಗಳೊಳಗೆ ಗೊಬ್ಬರ ಕೇಳಿದ ರೈತನಿಗೆ ಗುಂಡೇಟು ಕೊಟ್ಟು ಸಾಯಿಸಿದ್ದು, ಭಜರಂಗಿಗಳು ಚರ್ಚುಗಳ ಮೇಲೆ ಮುಸ್ಲಿಮರ ಮೇಲೆ ದಾಳಿ ಮಾಡುತ್ತಾ ಅಲ್ಪಸಂಖ್ಯಾತ ಸಮುದಾಯದಲ್ಲಿ ಆತಂಕ ಸೃಷ್ಟಿಸುತ್ತಿದ್ದರೂ ಕೈಕಟ್ಟಿ ಕುಳಿತಿದ್ದು, ನ್ಯಾಯಬದ್ಧ ಹಕ್ಕುಗಳಿಗಾಗಿ ಪ್ರತಿಭಟನೆ ನಡೆಸುವ ಜನರ ಮೇಲೆ ಪೊಲೀಸರನ್ನು ಛೂಬಿಟ್ಟು ಲಾಠಿಚಾರ್ಜ್ ಮಾಡಿಸಿದ್ದು, ಕರಾವಳಿ ಅಲೆಯಂಥ ಪತ್ರಿಕೆಗಳ ಮೇಲೆ ಕೋಮುವಾದಿಗಳು ದಾಳಿ ಮಾಡಿದರೂ ಸರ್ಕಾರ ಏನೂ ಮಾಡದೇ ಮೌನವಾಗಿ ಬೆಂಬಲಿಸಿದ್ದು, ಕೋಮುದಳ್ಳುರಿ ಹಚ್ಚಿ ಸಮಾಜದ ಶಾಂತಿ ಕದಡುವಲ್ಲಿ ನಿಸ್ಸೀಮರಾಗಿರುವ ಭಜರಂಗದಳದ ಗೂಂಡಾಗಳ ಮೇಲಿದ್ದ ಕೇಸುಗಳನ್ನು ವಾಪಸ್ ತೆಗೆದುಕೊಂಡದ್ದು, ಬಾಬಾಬುಡನ್‌ಗಿರಿಯಲ್ಲಿ ಯಥಾಸ್ಥಿತಿ ಕಾಪಾಡಬೇಕೆಂಬ ಸುಪ್ರೀಂಕೋರ್ಟ್ ಆದೇಶವಿದ್ದರೂ ಪೂಜೆ, ಹೋಮಹವನಗಳಿಗೆ ಅವಕಾಶ ಕೊಟ್ಟು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೇ ಉಲ್ಲಂಘಿಸಿದ್ದು, ಜನಾರ್ದನ ರೆಡ್ಡಿಯಂಥ ಗಣಿಕಳ್ಳರು ಕಾನೂನು, ನೀತಿನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಅಕ್ರಮವಾಗಿ ಭೂಗರ್ಭ ಬಗೆದು ನಾಡಿನ ಸಂಪತ್ತನ್ನು ಕೊಳ್ಳೆ ಹೊಡೆಯುವುದಕ್ಕೆ ಅವಕಾಶ ಕೊಟ್ಟಿರುವುದು, ಅತ್ತ ಉತ್ತರ ಕರ್ನಾಟಕದಲ್ಲಿ ಜನ ಪ್ರವಾಹದಿಂದ ತತ್ತರಿಸಿ ಸಹಾಯಕ್ಕಾಗಿ ಹಪಹಪಿಸುತ್ತಿದ್ದಾಗ ಸರ್ಕಾರದ ಎಲ್ಲಾ ಸಚಿವರು, ಬಿಜೆಪಿಯ ಎಮ್ಮೆಲ್ಲೆಗಳು ಹೈದರಾಬಾದ್, ಗೋವ, ಬೆಂಗಳೂರಿನ ರೆಸಾರ್ಟ್‌ಗಳಲ್ಲಿ ಮಜಾ ಮಾಡುತ್ತಿದ್ದುದು – ಹೀಗೆ ಹೇಳುತ್ತಾ ಹೋದರೆ ಬಿಜೆಪಿ ಸರ್ಕಾರದ ದುರಾಡಳಿತ ಕುರಿತಂತೆ ಒಂದು ಉದ್ಗ್ರಂಥವನ್ನೇ ಬರೆಯಬಹುದೇನೋ? ●





ಕಡೆಗೂ ಕಳಚಿತು 'ಪಿಪಿಪಿ'ಯ ಪೊರೆ!

ಇತ್ತೀಚೆಗಂತೂ ನಮ್ಮ ಸರ್ಕಾರಗಳಿಗೆ ಪಿಪಿಪಿ ಎಂಬ ಗರ ಬಡಿದುಬಿಟ್ಟಿದೆ. ಅಭಿವೃದ್ಧಿಯ ಮಾತು ಬಂತೆಂದರೆ ಸಾಕು ಪಿಪಿಪಿ ಅಡಿಯಲ್ಲಿ ಮಾಡುತ್ತೇವೆ ಎನ್ನುತ್ತಾರೆ. ಪಿಪಿಪಿ ಎಂದರೆ ಪಬ್ಲಿಕ್-ಪ್ರೈವೇಟ್ ಪಾರ್ಟನರ್‌ಶಿಪ್. ಅಂದರೆ ಅಭಿವೃದ್ಧಿ ಯೋಜನೆಯೊಂದನ್ನು ಕೈಗೆತ್ತಿಕೊಂಡು ಕಾರ್ಯಗತ ಮಾಡುವುದಕ್ಕೆ ಸರ್ಕಾರ ಮತ್ತು ಖಾಸಗಿ ಕಂಪೆನಿಗಳು ಇಬ್ಬರೂ ಕೈಜೋಡಿಸುವುದು. ಈ ಯೋಜನೆಗೆ ಇಬ್ಬರೂ ದುಡ್ಡು ಹಾಕುತ್ತಾರೆ. ಸರ್ಕಾರ ನಮ್ಮ ನಿಮ್ಮೆಲ್ಲರಿಂದ ತೆರಿಗೆಯ ರೂಪದಲ್ಲಿ ವಸೂಲಿ ಮಾಡಿದ ದುಡ್ಡನ್ನು ಸುರಿಯುತ್ತದೆ, ಖಾಸಗಿ ಕಂಪೆನಿಗಳು ತಮ್ಮದೇ ಬಂಡವಾಳ ಹೂಡುತ್ತವೆ. ಲಾಭ ಬಂದರೆ ಹಾಕಿದ ಬಂಡವಾಳಕ್ಕನುಗುಣವಾಗಿ ಇಬ್ಬರೂ ಹಂಚಿಕೊಳ್ಳುತ್ತಾರೆ. ಇದು ಪಿಪಿಪಿ.

ನೋಡೋದಕ್ಕೆ, ಕೇಳೋದಕ್ಕೆ ಈ ಪಿಪಿಪಿ ಬಹಳ ಹಿತವಾಗಿರುತ್ತದೆ. ಆದರೆ ಸ್ವಲ್ಪ ಆಳಕ್ಕಿಳಿದರೆ ಸಾಕು, ಇದು ಸರ್ಕಾರಿ ದುಡ್ಡನ್ನು ದೋಚುವುದಕ್ಕೆ, ಖಾಸಗಿ ಕಂಪೆನಿಗಳಿಗೆ ಅನುವು ಮಾಡಿಕೊಡುವುದಕ್ಕಾಗಿಯೇ ಭ್ರಷ್ಟ ಸರ್ಕಾರ ಮತ್ತು ಲಾಭಕೋರ ಖಾಸಗಿ ಮನಸ್ಸುಗಳು ಸೇರಿಕೊಂಡು ರೂಪಿಸಿದ ಷಡ್ಯಂತ್ರ ಎಂದು ಅರ್ಥವಾಗುತ್ತದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣವೇ ಇದಕ್ಕೊಂದು ತಾಜಾ ಉದಾಹರಣೆ. ಇದಕ್ಕೆ ಸಂಬಂಧಿಸಿದಂತೆ ಮೊನ್ನೆ ಜಂಟಿ ಸದನ ಸಮಿತಿ ಕೊಟ್ಟ ವರದಿಯನ್ನು ನೋಡಿದರೆ ಪಿಪಿಪಿಯ ಅಸಲಿ ಚಿತ್ರಣ ಗೊತ್ತಾಗುತ್ತದೆ. ಒಟ್ಟಾರೆ ಯೋಜನೆಯಿಂದ ಸರ್ಕಾರ ಅರ್ಥಾತ್ ಈ ನಾಡಿನ ಜನರು ಕಳೆದುಕೊಂಡದ್ದೆಷ್ಟು, ಗಳಿಸಿದ್ದೆಷ್ಟು ಎಂಬುದು ಹಾಗೂ ಅದೇ ಹೊತ್ತಿನಲ್ಲಿ ನಿರ್ಮಾಣ ಕಾರ್ಯದಲ್ಲಿ ಭಾಗಿಯಾದ ಖಾಸಗಿಯವರು ಕಳೆದುಕೊಂಡದ್ದೆಷ್ಟು, ಗಳಿಸಿದ್ದೆಷ್ಟು ಎಂಬುದನ್ನು ನೋಡಿದರೆ ನಿಜಕ್ಕೂ ಪಿಪಿಪಿ ಗಾಬರಿ ಹುಟ್ಟಿಸುತ್ತದೆ.

ಬೆಂಗಳೂರು ಹೊರವಲಯದ ದೇವನಹಳ್ಳಿಯಲ್ಲಿ ತಲೆಯೆತ್ತಿರುವ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ನಿರ್ಮಾಣ ಮತ್ತು ನಿರ್ವಹಣೆಗಾಗಿಯೇ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿ.ಐ.ಎ.ಎಲ್) ಎಂಬ ಕಂಪೆನಿಯನ್ನು ರೂಪಿಸಲಾಗಿದೆ. ಇದರಲ್ಲಿ ಸಿಮೆನ್ಸ್, ಲಾರ್ಸನ್ ಅಂಡ್ ಟಬ್ರೋ ಮತ್ತು ಯೂನಿಕ್ ಜೂರಿಚ್ ಏರ್‌ಪೋರ್ಟ್ ಎಂಬ ಮೂರು ಖಾಸಗಿ ಕಂಪೆನಿಗಳು ಹಾಗೂ ಕರ್ನಾಟಕ ಸರ್ಕಾರ ಪಾಲುದಾರನಾಗಿವೆ. ಈ ಯೋಜನೆಯ ಒಟ್ಟು ವೆಚ್ಚ 2500 ಕೋಟಿ ರೂಪಾಯಿಗಳು. ಇದರಲ್ಲಿ ಸರ್ಕಾರ ಸುಮಾರು ಆರುನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಆದರೆ ಒಟ್ಟಾರೆ ಬಂಡವಾಳದಲ್ಲಿ ಸರ್ಕಾರದ ಷೇರು ಮಾತ್ರ ಶೇ.13 ಮಾತ್ರ!

ಇನ್ನೊಂದಿಷ್ಟು ಆಳಕ್ಕಿಳಿದು ನೋಡಿ. ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಸರ್ಕಾರ 4000 ಎಕರೆ ಜಮೀನನ್ನು ರೈತರಿಂದ ಕಿತ್ತುಕೊಂಡು ಅದನ್ನು ಬಿ.ಐ.ಎ.ಎಲ್‌ಗೆ ಒಪ್ಪಿಸಿದೆ. ಇದಕ್ಕಾಗಿ ಸರ್ಕಾರ ಖರ್ಚು ಮಾಡಿದ್ದು 175 ಕೋಟಿ ರೂಪಾಯಿಗಳನ್ನು. ಒಂದು ವಿಚಾರವನ್ನಿಲ್ಲಿ ಗಮನಿಸಿ. ಮೊಟ್ಟ ಮೊದಲನೆಯದಾಗಿ ಒಂದು ವಿಮಾನ ನಿಲ್ದಾಣ ಕಟ್ಟುವುದಕ್ಕೆ ಇಷ್ಟೊಂದು ಜಮೀನಿನ ಅವಶ್ಯಕತೆಯಿಲ್ಲ. ವಿಶ್ವದ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣ ಎಂದೇ ಪ್ರಸಿದ್ಧವಾಗಿರುವ ಲಂಡನ್ನಿನ ವಿಮಾನ ನಿಲ್ದಾಣಕ್ಕೆ ಬಳಕೆಯಾಗಿರುವ ಒಟ್ಟು ಜಮೀನು ಎರಡು ಸಾವಿರ ಎಕರೆ. ವಿಶ್ವದ ಅತ್ಯಂತ ಕೆಟ್ಟ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರು ಸಂಪಾದಿಸುತ್ತಿರುವ ಬೆಂಗಳೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ನಾಲ್ಕು ಸಾವಿರ ಎಕರೆ ಯಾಕೆ ಬೇಕಿತ್ತು? ಸರ್ಕಾರ ರೈತರಿಂದ ಜಮೀನು ಕಿತ್ತುಕೊಂಡು ಯಾಕೆ ಕೊಟ್ಟಿತು?

ಪಿಪಿಪಿಯ ಅಸಲೀಯತ್ತು ಇರೋದೇ ಅಲ್ಲಿ, ವಾಸ್ತವದಲ್ಲಿ ವಿಮಾನ ನಿಲ್ದಾಣವನ್ನು ಒಂದು ಸಾವಿರ ಎಕರೆ ಜಮೀನಿನಲ್ಲಿ ನಿರ್ಮಾಣ ಮಾಡಿ ಉಳಿದ ಮೂರು ಸಾವಿರ ಎಕರೆಯಲ್ಲಿ ಐಷಾರಾಮಿ ತಾರಾ ಹೋಟೇಲ್‌ಗಳನ್ನು, ಶಾಪಿಂಗ್ ಮಾಲ್‌ಗಳನ್ನು ಕಟ್ಟುವುದು ಅದರ ಹಿಂದಿರುವ ನಿಜವಾದ ಉದ್ದೇಶ. ನಾಲ್ಕು ಸಾವಿರ ಎಕರೆ ಖರೀದಿಸುವುದಕ್ಕೆ ಸರ್ಕಾರ ಖರ್ಚು ಮಾಡಿರುವುದು 175 ಕೋಟಿಯಾದರೂ ಈಗ ಆ ಜಮೀನಿನ ಬೆಲೆ ಕಮ್ಮಿಯೆಂದರೂ ಹತ್ತು ಸಾವಿರ ಕೋಟಿಯಾಗುತ್ತದೆ ಎಂದು ಜಂಟಿ ಸದನ ಸಮಿತಿಯೇ ಹೇಳಿದೆ. ಹೋಗಲಿ ಸರ್ಕಾರವೂ ಈ ಪ್ರಾಜೆಕ್ಟಿನಲ್ಲಿ ಪಾಲುದಾರನಾಗಿರುವುದರಿಂದ ಬರುವ ಲಾಭದಲ್ಲಿ ಅದಕ್ಕೂ ಲಾಭ ಇರುತ್ತೆ ಎಂದುಕೊಂಡರೆ ಅದೂ ಇಲ್ಲ, ಏಕೆಂದರೆ ಒಟ್ಟಾರೆ ಹೂಡಿರುವ ಬಂಡವಾಳದಲ್ಲಿ ಸರ್ಕಾರದ ಪಾಲಿರುವುದು ಶೇ.13 ಮಾತ್ರ. ಉಳಿದ ಶೇ.87ರಷ್ಟು ಪಾಲು ಮೇಲೆ ತಿಳಿಸಿರುವ ಮೂರು ಖಾಸಗಿ ಕಂಪೆನಿಗಳದ್ದು. ಹಾಗಾಗಿ ಲಾಭದಲ್ಲಿ ಮುಕ್ಕಾಲು ಭಾಗ ಆ ಕಂಪೆನಿಗಳಿಗೇ ಹೋಗುತ್ತದೆ, ಸರ್ಕಾರಕ್ಕೆ ಅರ್ಥಾತ್ ಜನತೆಗೆ ಮೂರು ಕಣ್ಣಿನ ಚಿಪ್ಪೆ ಗತಿ. ಅಷ್ಟೇ ಅಲ್ಲ ಸರ್ಕಾರವು ಬಿಐಎಎಲ್‌ಗೆ ಬಡ್ಡಿ ರಹಿತವಾಗಿ 350 ಕೋಟಿ ರೂಪಾಯಿಗಳನ್ನು ಕೊಟ್ಟಿದೆ!

ಇದು ಪಿಪಿಪಿ ಷಡ್ಯಂತ್ರದ ಸಾರಾಂಶ. ಪೂರ್ತಿಯಾಗಿ ಖಾಸಗಿಯವರಿಗೆ ಕೊಟ್ಟು ಬಿಟ್ಟರೆ ಜನ ಬೊಬ್ಬೆ ಹೊಡೆಯುತ್ತಾರೆ ಎಂದುಕೊಂಡು ಸರ್ಕಾರವೂ ಪಾಲುದಾರನಾಗುವುದು ನಾಮಕಾವಾಸ್ತೆಗೆ ಮಾತ್ರ. ಲೂಟಿಯಲ್ಲಿ ಸಿಂಹಪಾಲು ಹೋಗುವುದು ಖಾಸಗಿಯವರಿಗೆನೇ. ವಾಸ್ತವದಲ್ಲಿ ಸರ್ಕಾರದ ಉಸ್ತುವಾರಿಯಲ್ಲೇ ಈ ಲೂಟಿ ನಡೆಯುತ್ತದೆ ಎಂದರೂ ತಪ್ಪಲ್ಲ. ಪಿಪಿಪಿಯ ಬಗ್ಗೆ ಭಾರಿ ಪ್ರಚಾರ ಮಾಡಲಾಗಿತ್ತು. ಹಾಗೆ ನೋಡಿದರೆ ಪಿಪಿಪಿ ವಿಧಾನದಡಿಯಲ್ಲಿ ಎರಡೂವರೆ ಸಾವಿರ ಕೋಟಿ ರೂಪಾಯಿಯಷ್ಟು ದೊಡ್ಡ ಮೊತ್ತದ ಯೋಜನೆಯೊಂದು ಪ್ರಾರಂಭವಾಗಿ ಪೂರ್ತಿಗೊಂಡಿದ್ದು ಇದೇ ಮೊದಲು. ಮೊದಲನೇಯ ಯೋಜನೆಯೇ ಈ ಪ್ರಮಾಣದ ಲೂಟಿಗೆ ಅವಕಾಶ ಕೊಟ್ಟಿದೆ. ಇನ್ನೂ ಕನಿಷ್ಠ 20,000 ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತದ ವಿವಿಧ ಯೋಜನೆಗಳು ಪಿಪಿಪಿಯಡಿಯಲ್ಲಿ ಮುಂದುವರೆಯುತ್ತಿವೆ. ಅಂದರೆ ಲೂಟಿ ಇನ್ಯಾವ ಮಟ್ಟದಲ್ಲಿ ನಡೆಯಲಿದೆ ಎಂಬುದನ್ನು ಸುಲಭವಾಗಿ ಅಂದಾಜಿಸಬಹುದು. ●

ಮೈತ್ರಿ ಪವಾಡ ಬಿಜೆಪಿಗೆ ಬ್ರೇಕ್!

ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಫಲಿಸಿದೆ. ಕೋಮುವಾದಿ ಬಿಜೆಪಿಯ ಗೆಲುವಿನ ಓಟಕ್ಕೆ ಬ್ರೇಕ್ ಬಿದ್ದಿದೆ. ಇದು ಬರೀ ವಿಧಾನ ಪರಿಷತ್ ಚುನಾವಣೆಗೆ ಸಂಬಂಧಿಸಿದ ರಾಜಕೀಯ ವಾಗಬಾರದು, ರಾಜ್ಯ ರಾಜಕೀಯದ ಮುಂದಿನ ನಡೆಯ ದಿಕ್ಸೂಚಿಯಾಗಬೇಕೆಂಬ ಮಾತು ಈಗ ಕಾಂಗ್ರೆಸ್ ಮತ್ತು ಜೆಡಿಎಸ್ ವಲಯದಲ್ಲಿ ಬಲವಾಗಿ ಕೇಳಿಬರುತ್ತಿದೆ.

'ಈ ಚುನಾವಣೆಯಲ್ಲಿ ಏನಿಲ್ಲವೆಂದರೂ 16 ಕಡೆ ಗೆಲ್ಲುತ್ತೇವೆ. 18ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವುದು ನಮ್ಮ ಗುರಿ' ಎಂದು ಮುಖ್ಯಮಂತ್ರಿ ಯಡ್ಡಿ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹಲ್ಲುಖಿ ಗೌಡ ಹೋದಲ್ಲಿ ಬಂದಲ್ಲಿ ಒದರುತ್ತಿದ್ದರು. ದುಡ್ಡು ಸುರಿದರೆ ಮತಗಳು ಬಂದು ಬೀಳುತ್ತವೆ ಎಂಬ ಹುಂಬತನ ಅವರ ಪ್ರತಿ ಮಾತಿನಲ್ಲಿಯೂ ವ್ಯಕ್ತವಾಗುತ್ತಿತ್ತು. ಇವರಿಗೆ ಮರ್ಮಾಘಾತವಾಗುವಂತೆ ರಾಜ್ಯದ ಚುನಾಯಿತ ಪ್ರತಿನಿಧಿಗಳು ಏಟು ಕೊಟ್ಟಿದ್ದಾರೆ. ಸುಧಾರಿಸಿಕೊಳ್ಳಲು ಯಡ್ಡಿ ಹೆಣಗಾಡುತ್ತಿದ್ದರೆ, ಹಲ್ಲುಖಿಗೌಡ ನಾಪತ್ತೆ!

ಒಟ್ಟು 25 ಸ್ಥಾನಗಳ ಪೈಕಿ ಹತ್ತು ಕಡೆ ಬಿಜೆಪಿ ಮತ್ತು ಕಾಂಗ್ರೆಸ್ ಗೆದ್ದಿವೆ. ಇನ್ನು ಐದು ಕಡೆ ಜೆಡಿಎಸ್ ಗೆದ್ದಿದೆ. ಒಟ್ಟು ಮೈತ್ರಿಕೂಟ 15 ಸ್ಥಾನಗಳಲ್ಲಿ ಗೆದ್ದಿದೆ. ಈ ಮಧ್ಯೆ ಕೆಲ ತಪ್ಪು ನಿರ್ಧಾರ ಮತ್ತು 'ಫ್ರೆಂಡ್ಲಿ ಫೈಟ್' ಎಂಬಂತಹ ರಾಜಕೀಯ 'ಜೋಕ್'ನಿಂದಾಗಿ ಕಾಂಗ್ರೆಸ್-ಜೆಡಿಎಸ್ ಮೈತ್ರಿಕೂಟ ಕನಿಷ್ಠ ಮೂರು ಕಡೆ ಸೋಲು ತಂದುಕೊಂಡಿವೆ. ಅಕಸ್ಮಾತ್ ಆ ಕ್ಷೇತ್ರಗಳಲ್ಲೂ ಜಂಟಿಯಾಗಿ ಸ್ಪರ್ಧಿಸಿದ್ದರೆ ಬಿಜೆಪಿಗೆ ಕೇವಲ ಏಳು ಸ್ಥಾನಗಳು ದೊರಕುತ್ತಿದ್ದವು. ಹೀಗಾಗಿ ಯಾವ ರೀತಿಯಲ್ಲಿ ಲೆಕ್ಕ ಹಾಕಿದರೂ ಬಿಜೆಪಿಗೆ ಭಾರಿ ಮುಖಭಂಗವಾಗಿರುವುದಂತೂ ಸ್ಪಷ್ಟ.

ಆದರೆ ಇದನ್ನು ಒಪ್ಪಿಕೊಳ್ಳುವ ಸೌಜನ್ಯವೂ ಬಿಜೆಪಿ ನಾಯಕರಿಗಿಲ್ಲ. 'ಐದು ವರ್ಷಗಳ ಹಿಂದೆ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದವರು ಮತದಾರರಾಗಿದ್ದರಿಂದ ಈ ಹಿನ್ನಡೆ' ಎಂದು ಅವರೀಗ ವಾದಿಸುತ್ತಿದ್ದಾರೆ. ಆದರೆ ಅದೇ ಪಂಚಾಯತ್ ಚುನಾವಣೆ ನಡೆದಾಗ ರಾಜ್ಯದಲ್ಲಿ ಹೆಚ್ಚಿನ ಕ್ಷೇತ್ರ ಗೆದ್ದಿದ್ದವರು ಬಿಜೆಪಿ ಶಾಸಕರೇ. ಅಂದು ಒಟ್ಟು 79 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದ್ದರೆ, ಕಾಂಗ್ರೆಸ್ 64 ಮತ್ತು ಜೆಡಿಎಸ್ 57 ಕ್ಷೇತ್ರದಲ್ಲಿ ಗೆದ್ದಿದ್ದವು. ಆಗ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರದಲ್ಲಿತ್ತಾದರೂ, ಬಿಜೆಪಿಯೇ ಹೆಚ್ಚು ಶಾಸಕರನ್ನು ಹೊಂದಿತ್ತು. ಅದೆಲ್ಲ ಈಗ ಇತಿಹಾಸ, ಬಿಡಿ.

ಇನ್ನು ವಿಧಾನ ಪರಿಷತ್‌ನ ಇತಿಹಾಸ ಕೆದಕಿದರೆ ಇದುವರೆಗೆ ನಡೆದ ಎಲ್ಲ ಚುನಾವಣೆಗಳಲ್ಲಿಯೂ ಚುನಾಯಿತ ಪ್ರತಿನಿಧಿಗಳೆಲ್ಲಾ ಅಧಿಕಾರದಲ್ಲಿದ್ದ ಪಕ್ಷಕ್ಕೇ ಭಾರಿ ಬೆಂಬಲ ನೀಡುತ್ತಾ ಬಂದಿದ್ದಾರೆ. ಇದೇ ಮೊದಲ ಬಾರಿಗೆ ಅಧಿಕಾರದಲ್ಲಿರುವ ಬಿಜೆಪಿಯನ್ನು ಬಹುತೇಕ ಮತದಾರರು ತಿರಸ್ಕರಿಸಿದ್ದಾರೆ. ಮುಖ್ಯಮಂತ್ರಿ ಯಡ್ಡಿಯ ತವರು ಕ್ಷೇತ್ರ ಶಿವಮೊಗ್ಗದಲ್ಲಿಯೇ ಬಿಜೆಪಿಗೆ (ಹಣದ ಹೊಳೆ ಹರಿಸಿದಾಗ್ಯೂ) ಭಾರಿ ಮುನ್ನಡೆ ಸಾಧಿಸಲು ಸಾಧ್ಯವಾಗಿಲ್ಲ. ಇದು ಸರ್ಕಾರ ಹೇಗೆ ಜನ ಬೆಂಬಲ ಕಳೆದುಕೊಳ್ಳುತ್ತಿದೆ ಎಂಬುದಕ್ಕೆ ಹಿಡಿದ ಕನ್ನಡಿ.

ಬಿಜೆಪಿಯ ಭದ್ರಕೋಟೆ ಎನಿಸಿದ್ದ ಕೊಡಗು, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಜೆಪಿ ಸೋತಿದೆ. ಉತ್ತರ ಕರ್ನಾಟಕದ ಕೆಲ ಕ್ಷೇತ್ರಗಳಲ್ಲಿ ಬಂಗಾರದ ಉಂಗುರ, ಹಣ ಹಂಚಿ, ಮತದಾರರನ್ನು ರೆಸಾರ್ಟ್‌ನಲ್ಲಿ ಕೂಡಿ ಹಾಕಿ ಪಕ್ಷ ಗೆಲುವು ಸಾಧಿಸಿದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆದಿದ್ದಲ್ಲಿ ಬಿಜೆಪಿ ಮೂರು ಕ್ಷೇತ್ರಗಳಲ್ಲಿ ಗೆಲ್ಲುವುದೂ ಕಷ್ಟವಿತ್ತು.

ಮೈತ್ರಿಗೇ ಗೆಲುವು

ಅಧಿಕಾರದಲ್ಲಿರುವ ಬಿಜೆಪಿ ಗ್ರಾಮಮಟ್ಟದಲ್ಲೂ ಚುನಾವಣಾ ವ್ಯವಸ್ಥೆಯನ್ನೇ ಭ್ರಷ್ಟಗೊಳಿಸಿದ್ದರೂ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಜಂಟಿ ಹೋರಾಟ ಇದಕ್ಕೆ ತಕ್ಕ ಉತ್ತರ ನೀಡಿದೆ. ಮೈತ್ರಿಯಿಂದಾಗಿಯೇ 15 ಕ್ಷೇತ್ರಗಳಲ್ಲಿ ಗೆಲ್ಲಲು ಸಾಧ್ಯವಾಯಿತು ಎಂದು ಎರಡೂ ಪಕ್ಷದ ನಾಯಕರು ತೆರೆಮರೆಯಲ್ಲಿ ಒಪ್ಪಿಕೊಳ್ಳುತ್ತಿದ್ದಾರಾದರೂ ಬಹಿರಂಗವಾಗಿ ಇದನ್ನು ಒಪ್ಪಿಕೊಳ್ಳಲು ಅವರ ಬಿಗುಮಾನ ಬಿಡುತ್ತಿಲ್ಲ. ಇದ್ದುದ್ದರಲ್ಲಿ ಜೆಡಿಎಸ್ ನಾಯಕರು ಒಂದಿಷ್ಟು ಮೈತ್ರಿ ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ



ಕಾಂಗ್ರೆಸ್ಸಿಗರಿಗೆ ಜೆಡಿಎಸ್‌ನಿಂದಾಗಿಯೇ ಈ ಮುನ್ನಡೆ ಸಾಧ್ಯವಾಯಿತು ಎಂದು ಒಪ್ಪಿಕೊಳ್ಳಲು ಇನ್ನೂ ಸಾಧ್ಯವಾಗುತ್ತಿಲ್ಲ. ಕೇಂದ್ರ ಸಚಿವ ಎಸ್.ಎಂ. ಕೃಷ್ಣ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತಿತರರು ಒಲ್ಲದ ಮನಸ್ಸಿನಿಂದಲೇ ಈ ಕುರಿತು ಮಾತನಾಡುತ್ತಿದ್ದಾರೆ.

ಈ ಹಿಂದೆ ನಡೆದ ಉಪಚುನಾವಣೆಯಲ್ಲಿ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳದೇ ಕಾಂಗ್ರೆಸ್ ಹೀನಾಯ ಸೋಲುಂಡಿತ್ತು. ಈಗ ಮೈತ್ರಿ ಮಾಡಿಕೊಂಡು ಮರ್ಯಾದೆ ಉಳಿಸಿಕೊಂಡಿದೆ. ಆದರೂ ಮೈತ್ರಿಯ ಬಗ್ಗೆ ಕಾಂಗ್ರೆಸ್ ನಾಯಕರು ಹಿಂದೆ-ಮುಂದೆ ಯೋಚಿಸುತ್ತಿರುವುದೇಕೋ ಅರ್ಥವಾಗುತ್ತಿಲ್ಲ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಕಾಂಗ್ರೆಸ್‌ಗಿಂತ ಕಡಿಮೆ (ಶೇ.33.9) ಶೇಕಡವಾರು ಮತ ಪಡೆದಿದ್ದರೂ 110 ಕ್ಷೇತ್ರಗಳಲ್ಲಿ ಗೆದ್ದು, ಪಕ್ಷೇತರರ ಬೆಂಬಲ ಮತ್ತು ಆಪರೇಷನ್ ಕಮಲ ನಡೆಸಿ ಅಧಿಕಾರ ಹಿಡಿದಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಅದೇ ಚುನಾವಣೆಯಲ್ಲಿ ಶೇ.34.6 ಮತ ಪಡೆದಿದ್ದ ಕಾಂಗ್ರೆಸ್ ಕೇವಲ 64 ಕ್ಷೇತ್ರಗಳಲ್ಲಿ ಗೆದ್ದಿತ್ತು. ಜೆಡಿಎಸ್ ಶೇ.19.1 ಮತ ಪಡೆದು 28 ಕ್ಷೇತ್ರಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿತ್ತು. ಒಟ್ಟಾರೆಯಾಗಿ ಹೇಳುವುದಾದರೆ ಜಾತ್ಯತೀತ ಮತಗಳು ಹಂಚಿಹೋಗಿದ್ದರಿಂದ ಬಿಜೆಪಿ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವಂತಾಗಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಒಟ್ಟಾಗಿ ಕಣಕ್ಕಿಳಿದಿದ್ದಲ್ಲಿ ಶೇ.53ಕ್ಕೂ ಹೆಚ್ಚು ಮತ ಪಡೆದು ಸುಭದ್ರ ಸಮ್ಮಿಶ್ರ ಸರ್ಕಾರ ರಚಿಸಬಹುದಿತ್ತು. ಆದರೆ ಆಗ ಹೊಂದಾಣಿಕೆಯ ವಾತಾವರಣ ನಿರ್ಮಾಣವಾಗಿರಲಿಲ್ಲ. ಜೆಡಿಎಸ್ 'ವಚನಭ್ರಷ್ಟ' ಆರೋಪ ಎದುರಿಸುತ್ತಿದ್ದುದ್ದರಿಂದ ಈ ಬಗ್ಗೆ ಕಾಂಗ್ರೆಸ್‌ನಲ್ಲಿ ಹೆಚ್ಚಿನ ಒಲವೂ ಕಂಡುಬಂದಿರಲಿಲ್ಲ.

ಆದರೆ ಈಗ ಪರಿಸ್ಥಿತಿ ಬೇರೆಯಾಗಿದೆ. ಕೋಮುವಾದಿ ಬಿಜೆಪಿ ಈ ಹಿಂದೆ ಯಾವ ಸರ್ಕಾರವೂ ನಡೆಸದಷ್ಟು ಭ್ರಷ್ಟಾಚಾರ ನಡೆಸುತ್ತಿದೆ. ಗಣಿಧಣಿಗಳ ಹಗಲು ದರೋಡೆಗೆ ಹಸಿರು ಬಾವುಟ ಹಿಡಿದು ನಿಂತಿದೆ. ಮುಖ್ಯವಾಗಿ ಒಂದೊಂದಾಗಿ ಕೋಮುವಾದಿ ಅಜೆಂಡಾವನ್ನು ಜಾರಿಗೆ ತರುತ್ತಾ, ರಾಜ್ಯದ ಜಾತ್ಯತೀತ ವ್ಯವಸ್ಥೆಗೆ ಕೊಡಲಿ ಏಟು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬಲಿಷ್ಠವಾಗಿ ಬೇರೂರಲು ಹೊರಟಿರುವ ಬಿಜೆಪಿಯನ್ನು ಒಮ್ಮೆ ಬೇರು ಸಹಿತ ಕಿತ್ತೊಗೆಯಬೇಕಾದ ಅನಿವಾರ್ಯತೆ ಬಹಳವಾಗಿದೆ. ಹೀಗಾಗಿ ಎರಡೂ ಪಕ್ಷಗಳು ರಾಜ್ಯದ ಒಳಿತಿಗಾಗಿ ಮತ್ತು ತಮ್ಮ ಪಕ್ಷಗಳ ಹಿತಾಸಕ್ತಿಗಾಗಿ ಇನ್ನು ಮುಂದಾದರೂ ಒಗ್ಗಟ್ಟಿನಿಂದ ಹೋರಾಟ ಮಾಡಬೇಕಾದುದು ಅನಿವಾರ್ಯವಾಗಿದೆ.

ಸದ್ಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ರಾಜಕೀಯ ತಂತ್ರಗಾರಿಕೆ ರೂಪಿಸುವಲ್ಲಿ ದೇವೇಗೌಡ ಅ್ಯಂಡ್ ಫ್ಯಾಮಿಲಿ ಒಂದು ಹೆಜ್ಜೆ ಮುಂದಿದೆ. ಕಳೆದ ಉಪಚುನಾವಣೆಯಲ್ಲಿಯೇ ಜೆಡಿಎಸ್ ಹೊಂದಾಣಿಕೆಗೆ ಕೈಚಾಚಿದ್ದರೂ, ಕಾಂಗ್ರೆಸ್ ನಾಯಕರು ಬೇಡ ಎಂದಿದ್ದರು. ಆಗ ಕಾಂಗ್ರೆಸ್ ಹೀನಾಯವಾಗಿ ಸೋತಿದ್ದು ಹೈಕಮಾಂಡ್‌ನ ಕಣ್ಣು ತೆರೆಸಿತ್ತು. ಹೀಗಾಗಿ ಈ ವಿಧಾನ ಪರಿಷತ್ ಚುನಾವಣೆ ಸಂದರ್ಭದಲ್ಲಿ ಕುಮಾರಸ್ವಾಮಿ ಹೊಂದಾಣಿಕೆಯ ಮಾತೆತ್ತಿದ ಕೂಡಲೇ ಪಕ್ಷದ ಹೈಕಮಾಂಡ್ ದಿಲ್ಲಿಗೆ ಅವರನ್ನು ಕರೆಸಿಕೊಂಡು ಮೈತ್ರಿಗೆ ಜೈ ಎಂದಿತ್ತು. ಆದ್ದರಿಂದ ದೇವೇಗೌಡರ ವಿರುದ್ಧ ದ್ವೇಷ ಕಾರುವುದನ್ನೇ ರಾಜಕಾರಣ ಮಾಡಿಕೊಂಡಿರುವ ಕೆಲ ಕಾಂಗ್ರೆಸ್ ನಾಯಕರಿಗೆ ಇದನ್ನು ಒಪ್ಪಿಕೊಳ್ಳದೆ ಬೇರೆ ದಾರಿಯೇ ಇರಲಿಲ್ಲ. ಈ ಹೊಂದಾಣಿಕೆಗೆ ವಿರೋಧ ವ್ಯಕ್ತಪಡಿಸಲು ಹೋಗಿ ಕಾಂಗ್ರೆಸ್ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ತಮ್ಮ ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡಿದ್ದಾರೆ.

ಜೆಡಿಎಸ್‌ನ ಚತುರ ತಂತ್ರ

ದುಡ್ಡು ಮತ್ತು ಅಧಿಕಾರದ ಬಲ ಹೊಂದಿರುವ ಬಿಜೆಪಿಯನ್ನು ಈ ಚುನಾವಣೆಯಲ್ಲಿ ಸೋಲಿಸುವುದು ಸುಲಭದ ಮಾತೇನೂ ಆಗಿರಲಿಲ್ಲ. ಆದರೆ ಜೆಡಿಎಸ್ ನಾಯಕರು ಅಂದರೆ ದೇವೇಗೌಡ ಮತ್ತು ಅವರ ಪುತ್ರ ಕುಮಾರಸ್ವಾಮಿ ಅನುಸರಿಸಿದ ಚತುರ ತಂತ್ರಕ್ಕೆ ಬಿಜೆಪಿ ಸೋಲೊಪ್ಪಿಕೊಳ್ಳಲೇಬೇಕಾಯಿತು.

ಚುನಾವಣಾ ಮೈತ್ರಿ ಏರ್ಪಡುತ್ತಿದ್ದಂತೆಯೇ ಕುಮಾರಸ್ವಾಮಿ ರಾಜ್ಯದಲ್ಲಿ ನೂತನ ಸಮ್ಮಿಶ್ರ ಸರ್ಕಾರ ರಚಿಸುವ ಕುರಿತು ಮಾತನಾಡಲಾರಂಭಿಸಿದರು. ಬಿಜೆಪಿಯಲ್ಲಿನ ಭಿನ್ನಮತವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಬಿಜೆಪಿ ನಾಯಕರ ತಲೆಗೆ ಹುಳ ಬಿಡಲಾರಂಭಿಸಿದರು.

ಇದಕ್ಕೆ ಅಪ್ಪ ದೇವೇಗೌಡ ಕೂಡ ಸಾತ್ ನೀಡಿದರು. ನೂತನ ಸರ್ಕಾರ ರಚನೆಗೆ ವೇದಿಕೆಯೇ ಸಿದ್ಧವಾಗಿರದಿದ್ದರೂ, "ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಲು ನಮ್ಮ ಅಭ್ಯಂತರ ಇಲ್ಲ" ಎಂದು ಗೌಡರು ಸುಖಾಸುಮ್ಮನೆ ಘೋಷಿಸಿದರು. ಹೀಗಾಗಿ ಬಿಜೆಪಿ ನಾಯಕರು ಕೂಡ ಈ ಹೇಳಿಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳತೊಡಗಿದರು. ಕೆಲ ಶಾಸಕರು ಭಿನ್ನಮತದ ಬಾವುಟ ಹಿಡಿದು ಯಾವ ಕ್ಷಣವಾದರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಸರ್ಕಾರವನ್ನು ಉರುಳಿಸಬಹುದು ಎಂಬ ಅನುಮಾನ ಕೂಡ ಹೆಚ್ಚಾಯಿತು.

ಒಟ್ಟಾರೆ ಸುಮಾರು ಒಂದು ತಿಂಗಳ ಕಾಲ ಅಪ್ಪ-ಮಗನ ವ್ಯವಸ್ಥಿತ ಪ್ರಚಾರ ಕೆಲಸ ಮಾಡಿತು. ಬಿಜೆಪಿಯಲ್ಲಿನ ಕೆಲ ಅವಕಾಶವಾದಿಗಳು ಇದನ್ನೇ ನಿಜವೆಂದು ನಂಬಿ, ರೆಸಾರ್ಟ್‌ನಿಂದ ರೆಸಾರ್ಟ್‌ಗೆ ಓಡಾಡಲಾರಂಭಿಸಿದರು. ಬಿಜೆಪಿ ಸರ್ಕಾರ ಬಿದ್ದು ಮತ್ತೆ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಅಧಿಕಾರಕ್ಕೆ ಬಂದರೆ ತಮಗೆ ಯಾವ ಸ್ಥಾನ ನೀಡುತ್ತೀರಿ ಎಂದು ಜೊಲ್ಲು ಸುರಿಸಲಾರಂಭಿಸಿದರು. ಈ ಎಲ್ಲ ಬೆಳವಣಿಗೆಗಳಿಂದ ಬಿಜೆಪಿಯ ಬಗ್ಗೆ ಮತದಾರರಿಗೆ ಇದ್ದ ಭರವಸೆ ಮತ್ತು ಬಿಜೆಪಿ ನಾಯಕರ ಆತ್ಮವಿಶ್ವಾಸವನ್ನೇ ಮಣ್ಣು ಮಾಡಿತು. ಆಗಲೇ ಬಿಜೆಪಿ ಸೋತಿತು.

ಸರ್ಕಾರ ಒಂದೇ ಒಂದು ಒಳ್ಳೆಯ ಕೆಲಸ ಮಾಡಿಲ್ಲ. ಮುಂದೆ ಉಳಿದುಕೊಳ್ಳುವುದೂ ಗ್ಯಾರಂಟಿ ಇಲ್ಲ. ಹೀಗಿರುವಾಗ ಬಿಜೆಪಿಗೆ ಏಕೆ ಮತ ಹಾಕಬೇಕೆಂದು ಬಿಜೆಪಿಯೇತರ ಚುನಾಯಿತ ಪ್ರತಿನಿಧಿಗಳು ಯೋಚಿಸಿ, ಕಾಂಗ್ರೆಸ್ ಮತ್ತು ಜೆಡಿಎಸ್ ಬೆಂಬಲಿಸಿದರು. ಬಿಜೆಪಿಯ ಸದಸ್ಯರು, ತಮ್ಮನ್ನು ದುಡ್ಡಿಗೆ ಮತ್ತು ಬಂಗಾರದ ಉಂಗುರಗಳಿಗೆ ಮಾರಿಕೊಂಡವರು, ರೆಸಾರ್ಟ್ ವಾಸ ಮತ್ತು ಇತರೆ ಆಮಿಷಗಳಿಗೆ ಬಲಿಯಾದವರಷ್ಟೇ ಬಿಜೆಪಿಯನ್ನು ಬೆಂಬಲಿಸಿದರು. ಹೀಗಾಗಿ ಕೇವಲ ಹತ್ತು ಸ್ಥಾನಗಳಲ್ಲಿ ಬಿಜೆಪಿ ಗೆದ್ದಿತು.

ಈ ಚುನಾವಣೆಯಲ್ಲಿ ನೂತನ ಸರ್ಕಾರ ರಚಿಸುವ ಹುಳ ಬಿಡುವ ಮೂಲಕ ದೇವೇಗೌಡ ಅ್ಯಂಡ್ ಟೀಮ್ ಒಂದೇ ಏಟಿಗೆ ಮೂರು ಹಕ್ಕಿಗಳನ್ನು ಹೊಡೆದಿದೆ. ಒಂದೆಡೆ ವಿಧಾನ ಪರಿಷತ್‌ನಲ್ಲಿ ತಮ್ಮ ಬಲವನ್ನು ಹೆಚ್ಚಿಸಿಕೊಂಡಿದ್ದಾರೆ. ಇನ್ನೊಂದೆಡೆ ಯಾರೂ ನಿರೀಕ್ಷಿಸಿರದ ಕ್ಷೇತ್ರಗಳಲ್ಲಿ ಗೆದ್ದಿದ್ದಾರೆ. ಮತ್ತೊಂದೆಡೆ ಅಧಿಕಾರದ ಮದದಿಂದ ಬೀಗುತ್ತಿದ್ದ ಬಿಜೆಪಿ ಸರ್ಕಾರ ಪ್ರತಿ ಕ್ಷಣವೂ ಭಯದಿಂದ ನಡೆಯುವಂತೆ ಮಾಡಿದ್ದಾರೆ. ಇದಲ್ಲದೆ - ಕಾಂಗ್ರೆಸ್ ನಾಯಕರು ಏನೇ ಹೇಳಲಿ - ಮತ್ತೆ ದೇವೇಗೌಡರು ಕಾಂಗ್ರೆಸ್ ಹೈಕಮಾಂಡ್‌ಗೆ ಇನ್ನಷ್ಟು ಹತ್ತಿರವಾಗಿದ್ದಾರೆ.

ಐದು ಕ್ಷೇತ್ರದಲ್ಲಿ ಗೆದ್ದಿರುವ ಜೆಡಿಎಸ್ ಶಕ್ತಿ ಸಹಜವಾಗಿಯೇ ಹೆಚ್ಚಿದೆ. ಹೀಗಾಗಿ ಮುಂದೆ ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳುವಾಗಲೂ ಚೌಕಾಸಿ ಮಾಡುವ ಅವಕಾಶವನ್ನು ಇನ್ನಷ್ಟು ಹೆಚ್ಚಿಸಿಕೊಂಡಂತಾಗಿದೆ.

ಬರಲಿರುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಕಾಂಗ್ರೆಸ್ ನಾಯಕಲ್ಲಿ ಒಮ್ಮತವಿಲ್ಲ. ಎಲ್ಲರದ್ದೂ 'ತಾವು ಹೇಳಿದ್ದೇ ಸರಿ' ಎಂಬ ಮನೋಭಾವ. ಪರಿಸ್ಥಿತಿಯನ್ನು ಸರಿಯಾಗಿ ಅಂದಾಜಿಸಿ, ಹೀಗೇ ಆಗಬೇಕು ಎಂದು ಪಕ್ಷ ಹೈಕಮಾಂಡ್‌ಗೆ ಸೂಚಿಸುವ, ವಿವರಿಸುವ ಛಾತಿ ಯಾರಿಗೂ ಇಲ್ಲ. ಹೀಗಾಗಿ ಚುನಾವಣಾ ದಿನಾಂಕ ಪ್ರಕಟವಾಗುತ್ತಿದ್ದಂತೆಯೇ ಮತ್ತೆ ಮೈತ್ರಿಯ ಪ್ರಸ್ತಾಪ ಮುಂದೆ ಬರುತ್ತದೆ. ಎಂದಿನಂತೆ ಕೆಲವರು ಬೆಂಬಲಿಸುತ್ತಾರೆ, ಮತ್ತೆ ಕೆಲವರು ವಿರೋಧಿಸಿಕೊಂಡು ಓಡಾಡುತ್ತಾರೆ. ಒಗ್ಗಟ್ಟಿನ ಪ್ರಚಾರ ನಡೆಸದೆ, ಏನೋ ಒಂದು ಮಾಡಿ, ಒಂದಷ್ಟು ಸ್ಥಾನಗಳಲ್ಲಿ ಗೆಲ್ಲುತ್ತಾರೆ.

ಭ್ರಷ್ಟ ಹಣದಿಂದ ತನ್ನ ಸೈದ್ಧಾಂತಿಕ ನೆಲೆಗಟ್ಟನ್ನು ಬಿಜೆಪಿ ವಿಸ್ತರಿಸಿಕೊಳ್ಳುತ್ತಾ ಹೋದಲ್ಲಿ ಅದನ್ನು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಎದುರಿಸುವುದು ಎಷ್ಟು ಕಷ್ಟ ಎಂಬುದು ರಾಜ್ಯ ಕಾಂಗ್ರೆಸ್ ನಾಯಕರಿಗೆ ಇನ್ನೂ ಅರ್ಥವಾದಂತಿಲ್ಲ. ಹಾಗೊಮ್ಮೆ ಅವರಿಗೆ ಅರ್ಥವಾಗಿದ್ದರೆ ರಾಜ್ಯದ ವಿವಿಧೆಡೆ ನಡೆಯುತ್ತಿರುವ ರೈತರ ಹೋರಾಟವನ್ನೇ ಬಳಸಿಕೊಂಡು ಹೇಗೆ ಬಿಜೆಪಿಯನ್ನು ಎಕ್ಸ್‌ಪೋಸ್ ಮಾಡಬಹುದು ಎಂಬ ಸಣ್ಣ ಲೆಕ್ಕಾಚಾರವನ್ನಾದರೂ ಹಾಕುತ್ತಿದ್ದರು.

ಒಟ್ಟಾರೆಯಾಗಿ ಜೆಡಿಎಸ್- ಕಾಂಗ್ರೆಸ್ ಮೈತ್ರಿ ರಾಜಕಾರಣ ಕಾಂಗ್ರೆಸ್‌ನಲ್ಲಿನ ಎರಡು ಬಣಗಳ ನಡುವಿನ ಗೆರೆ ಇನ್ನಷ್ಟು ಸ್ಪಷ್ಟವಾಗಿ ಕಾಣಿಸುವಂತೆ ಮಾಡುತ್ತಿದೆ. ದೇವೇಗೌಡರ ಜೆಡಿಎಸ್‌ಗೂ ಈ ಬೆಳವಣಿಗೆ ಖುಷಿ ನೀಡಿದೆ. ಹೀಗಾಗಿಯೇ ದೇವೇಗೌಡರು, ತಮ್ಮ ರಾಜಕೀಯ ವಿರೋಧಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾದರೂ ಅಡ್ಡಿಯಿಲ್ಲ ಎಂದು ಬಹಿರಂಗವಾಗಿ ಹೇಳಿಕೆ ನೀಡುತ್ತಾ, ಆಟ ನೋಡುತ್ತಿದ್ದಾರೆ. ಮುಂದಿನ ಚುನಾವಣೆಯ ದಿನಾಂಕ ಪ್ರಕಟವಾಗುವವರೆಗೂ ಕಾಂಗ್ರೆಸ್ ನಾಯಕರು ಕಚ್ಚಾಡುವುದನ್ನು ಬಿಟ್ಟು ಬೇರೆ ಕೆಲಸ ಮಾಡುವಂತೆ ಕಾಣುತ್ತಿಲ್ಲ. ಆದರೆ ಆಗಲೇ ಗೌಡರು ಎಚ್ಚೆತ್ತು ಕುಳಿತಿದ್ದಾರೆ. ಬಿಜೆಪಿಯ ನಾಯಕರ ನಿದ್ರೆಗೆಡಿಸುತ್ತಿದ್ದಾರೆ.

● ನೀರದ ಬೆಂಗಳೂರು

ಇಟಾಸ್ಕಾ -ಕೆಐಎಡಿಬಿ ಜಂಟಿ ಲೂಟಿ
ಕಟ್ಟಾನ ಫೋರ್ಜರಿ ರ್‍ಯಾಕೆಟ್


ಜಗ್ಗ

ರೈತನ ಭೂಮಿ ಕಿತ್ತು ಪರಿಹಾರಕ್ಕಾಗಿ ಆತನ ಜೀವ ಹಿಂಡುವ ಕೆಐಎಡಿಬಿ ಕಟ್ಟಾನ ಇಟಾಸ್ಕಾ ಹೆಸರಲ್ಲಿ ರೈತರೇ ಅಲ್ಲದ ನಕಲಿಗಳಿಗೆ, ಬ್ರೋಕರ್‌ಗಳಿಗೆಲ್ಲ ಕೋಟಿಗಟ್ಟಲೇ ಪರಿಹಾರದ ದುಡ್ಡು ಪಾವತಿಸಿದೆ. ಅದೂ ನಕಲಿ ದಾಖಲೆಗಳ ಆಧಾರದ ಮೇಲೆ! ಜಮೀನೇ ಇಲ್ಲದಿದ್ದರೂ ಕಪಟ ದಾಖಲೆ ಸೃಷ್ಟಿಸಿ, ಕೆಐಎಡಿಬಿ ಅಂದರೆ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅದನ್ನು ಸ್ವಾಧೀನಪಡಿಸಿಕೊಂಡಂತೆ ಲೆಕ್ಕ ತೋರಿಸಿ ಹತ್ತು ಕೋಟಿಗೂ ದೊಡ್ಡ ಮೊತ್ತದ ಸರ್ಕಾರಿ ಖಜಾನೆ ಡಕಾಯತಿಯೊಂದನ್ನು ಹೇಗೆ ಮಾಡಬಹುದೆಂಬುದನ್ನು ಕಟ್ಟಾ ಗ್ಯಾಂಗ್ ತೋರಿಸಿಕೊಟ್ಟಿದೆ.

● ರಾ.ಸೋಮನಾಥ್



"ಇಲ್ಲದ ಭೂಮಿಗೆ ಸರ್ಕಾರ ಕೋಟಿಗಟ್ಟಲೇ ಪರಿಹಾರ ಕೊಡಲು ಹೇಗೆ ಸಾಧ್ಯ? ಸಂಬಂಧವೇ ಇಲ್ಲದ, ರೈತರೂ ಅಲ್ಲದ ಅನಾಮಧೇಯರಿಗೆ ಕೋಟಿಗಟ್ಟಲೇ ಸರ್ಕಾರಿ ದುಡ್ಡು ಏಕೆ ಮಂಜೂರಾಗುತ್ತದೆ? ಹಾಗೇ ರಾಜ್ಯ ಬೊಕ್ಕಸ ದಿಂದ ಬಟವಾಡೆಯಾಗುವ ದುಡ್ಡು ಮುಂದೆ ಏನಾಗುತ್ತದೆ ಮತ್ತು ಯಾರ ಕೈ ಸೇರುತ್ತದೆ?


ಇತ್ಯಾದಿ ಅನೇಕಾನೇಕ ನಿಗೂಢಗಳ ಮೊತ್ತವೇ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಒಡೆತನದ ಇಟಾಸ್ಕಾ ಕಂಪೆನಿಯ ಹಗಲುದರೋಡೆಯಾಗುತ್ತದೆ. ರೈತನ ಭೂಮಿ ಕಿತ್ತು ಪರಿಹಾರಕ್ಕಾಗಿ ಆತನ ಜೀವ ಹಿಂಡುವ ಕೆಐಎಡಿಬಿ ಕಟ್ಟಾನ ಇಟಾಸ್ಕಾ ಹೆಸರಲ್ಲಿ ರೈತರೇ ಅಲ್ಲದ ನಕಲಿಗಳಿಗೆ, ಬ್ರೋಕರ್‌ಗಳಿಗೆಲ್ಲ ಕೋಟಿಗಟ್ಟಲೇ ಪರಿಹಾರದ ದುಡ್ಡು ಪಾವತಿಸಿದೆ. ಅದೂ ನಕಲಿ ದಾಖಲೆಗಳ ಆಧಾರದ ಮೇಲೆ!

ಜಮೀನೇ ಇಲ್ಲದಿದ್ದರೂ ಕಪಟ ದಾಖಲೆ ಸೃಷ್ಟಿಸಿ, ಕೆಐಎಡಿಬಿ ಅಂದರೆ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅದನ್ನು ಸ್ವಾಧೀನಪಡಿಸಿಕೊಂಡಂತೆ ಲೆಕ್ಕ ತೋರಿಸಿ ಹತ್ತು ಕೋಟಿಗೂ ದೊಡ್ಡ ಮೊತ್ತದ ಸರ್ಕಾರಿ ಖಜಾನೆ ಡಕಾಯತಿಯೊಂದನ್ನು ಹೇಗೆ ಮಾಡಬಹುದೆಂಬುದನ್ನು ಕಟ್ಟಾ ಗ್ಯಾಂಗ್ ತೋರಿಸಿಕೊಟ್ಟಿದೆ. ಪತ್ರಿಕೆ ಈ ಹಿಂದೆಯೇ ಕಟ್ಟಾ ಒಡೆತನದ ಇಟಾಸ್ಕಾ ಕಂಪೆನಿಯ ಬಗ್ಗೆ ಬರೆದಿದೆ. ಅದೊಂದು ಕಂಪೆನಿಯೇ,ಹೊರತು ಕೈಗಾರಿಕಾ ಉದ್ದೇಶವಾಗಲಿ, ಐಟಿ ಪರಿಣತಿಯಾಗಲಿ, ನೆಟ್ಟಗೊಂದು ಆಫೀಸು, ಅಡ್ರೆಸ್ಸು ಯಾವುದೂ ಇಲ್ಲದ ಗೋಲ್‌ಮಾಲ್ ಕಂಪೆನಿಯೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ.

ಇಂಥ ಲೆಟರ್‌ಹೆಡ್ ಕಂಪೆನಿಗೆ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹಿಂಭಾಗದ ಬಂಡಿಕೋಡಿಗೆ ಹಳ್ಳಿಯ ಮುನ್ನೂರೈವತ್ತು ಎಕರೆ ರೈತರ ಭೂಮಿ ಕಿತ್ತುಕೊಟ್ಟ ಕೆಐಎಡಿಬಿಯ ವಿರುದ್ಧ ವಿರೋಧೀ ಕಾಂಗ್ರೆಸ್ಸಾಗಲಿ, ಜೆಡಿಎಸ್ಸಾಗಲೀ, ಜನಪರ ಸಂಘಟನೆ ಗಳಾಗಲೀ ಯಾರೂ ಸೊಲ್ಲೆತ್ತಲಿಲ್ಲ. ಡಿ.ಎಸ್ ಗೌಡನಂಥ ಒಂದಿಬ್ಬರು ಸೋಕಾಲ್ಡ್ ರೈತಮುಖಂಡರು ಕೂಗು ಹಾಕಿ ರೊಕ್ಕ ತಿಂದು ತೆಪ್ಪಗಾದರೇ ಹೊರತು ಕಟ್ಟಾ ಹಗಲುದರೋಡೆಯ ವಿರುದ್ಧ ಕ್ರಮೇಣ ದಲಿತ ಸಂಘಟನೆ ಗಳೂ ಬಾಲ ಮುದುರಿಕೊಂಡವು.

ಗೋಲ್‌ಮಾಲ್ ಇಟಾಸ್ಕಾ ಕಂಪೆನಿಗಾಗಿ ತಮ್ಮ ಜೀವನಾಧಾರವಾಗಿದ್ದ ಭೂಮಿಯನ್ನು ಕಳಕೊಂಡ ರೈತರಿಗೆ ಕನಿಷ್ಠ ಪರಿಹಾರವನ್ನಾದರೂ ಕೊಡಬೇಕಲ್ಲ-ಹೀಗೆ ಕೆಐಎಡಿಬಿಯ ಮೂಲಕ ರೈತರ ಕೈಸೇರಬೇಕಿದ್ದ ಕೋಟಿ ಗಟ್ಟಲೇ ರೂಪಾಯಿಗಳ ಪರಿಹಾರವನ್ನು ಲಪಟಾಯಿಸ ಲೆಂದೇ ಕಟ್ಟಾ ಗ್ಯಾಂಗ್ ಹಗಲು ಡಕಾಯತಿಯೊಂದಕ್ಕೆ ಕೈ ಇಟ್ಟ ಕತೆಯಿದು.

ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಈ ಪ್ರಕರಣದ ಮೊದಲ ಆರೋಪಿಯಾದರೆ ಆತನ ಮಗ ಕಟ್ಟಾ ಜಗದೀಶ್ ಎರಡನೇ ಆರೋಪಿ. ಕಟ್ಟಾ ಬಲಗೈ ಬಂಟ ಮತ್ತು ಬಂಡಿ ಕೋಡಿಗೆ ಹಳ್ಳಿಯ ನಟೋರಿಯಸ್ ರೌಡಿ ಬೀಕೆ ಮಂಜ, ಭೂಡಕಾಯತಿಯಲ್ಲಿ ಮಂತ್ರಿ ಕಟ್ಟಾನ ಬೇನಾಮಿಗಳಾದ ಎಸ್.ವಿ. ಶ್ರೀನಿವಾಸ್ ಬದ್ರಿ ಪ್ರಸಾದ್ ನಿಟ್ಟೂರು, ಆತನ ಪತ್ನಿ ವಂದನಾ ಇತ್ಯಾದಿ ಎಲ್ಲರೂ ಸಮಾನ ಆರೋಪಿಗಳೇ.


ಮುನಿಕೃಷ್ಣಪ್ಪ

ಇಲ್ಲದ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿದ್ದಾರೆ. ಅಂಥ ನಕಲಿ ದಾಖಲೆಗಳ ಆಧಾರದ ಮೇಲೆ ನಕಲಿ ರೈತರನ್ನು ಹುಟ್ಟುಹಾಕಿ ಕೆಐಎಡಿಬಿಯಿಂದ ಕೋಟಿಗಟ್ಟಲೇ ಪರಿಹಾರ ಪಡೆದಿದ್ದಾರೆ. ಹಾಗೇ ನಕಲಿ ರೈತರ ಹೆಸರಲ್ಲಿ ಪಡೆದ ಕೋಟಿ ಲೆಕ್ಕದ ಪರಿಹಾರವನ್ನು ವ್ಯವಸ್ಥಿತವಾಗಿ ತಮ್ಮ ಜೇಬಿಗಿಳಿಸಿದ್ದಾರೆ. ಕೆಐಎಡಿಬಿಯ ಒಂದು ಹಿಂಡು ಖದೀಮ ಅಧಿಕಾರಿಗಳು ಈ ವಂಚನೆಯಲ್ಲಿ ಕಟ್ಟಾ ಗ್ಯಾಂಗಿನ ಜೊತೆ ಕೈಜೋಡಿಸಿದ್ದಾರೆ. ಜಮೀನೇ ಇಲ್ಲದೇ, ರೈತರೇ ಅಲ್ಲದ ರಿಯಲ್ ಎಸ್ಟೇಟ್ ಬ್ರೋಕರ್‌ಗಳಿಗೆ ಯಾವ ಕಾನೂನಿನಪ್ರಕಾರ, ಯಾವ ಆಧಾರದ ಮೇಲೆ ಕೆಐಎಡಿಬಿ ಕೋಟಿಗಟ್ಟಲೇ ಪರಿಹಾರ ನೀಡುತ್ತದೆ?


ಮುರುಗೇಶ್ ನಿರಾಣಿ

ಸದ್ಯ ಪತ್ರಿಕೆಯ ಗಮನಕ್ಕೆ ಬಂದ ರೂ. ಒಂದು ಕೋಟಿ ಇಪ್ಪತ್ನಾಲ್ಕು ಲಕ್ಷ (1,24,00,000)ದ ಒಂದು ಪ್ರಕರಣ ಮತ್ತು ಸೈಯದ್ ಅಬ್ದುಲ್ ಅಜೀಮ್ ಎಂಬಾತನ ಹೆಸರಲ್ಲಿ ಕಟ್ಟಾ ಗ್ಯಾಂಗ್ ದೋಚಿದ ಮೂರು ಕೋಟಿ ಹದಿಮೂರು ಲಕ್ಷದ ಎಂಬತ್ತೇಳು ಸಾವಿರದ ಐನೂರು (3,13,87,500) ರೂಪಾಯಿಗಳ ಇನ್ನೊಂದು ವಂಚನೆಯ ವಿವರಗಳೇ ಕೆಐಎಡಿಬಿಯ ಕರಾಳ ಮುಖವೊಂದನ್ನು ಬಿಚ್ಚಿಡುತ್ತದೆ.

ಅದು ನಕಲಿ ದಾಖಲೆಗಳನ್ನು ಸೃಷ್ಟಿಸಿ ರೈತರ ಪರಿಹಾರ ದೋಚುವ ದಂಧೆ. ಇಟಾಸ್ಕಾ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಎಂಬ ಬೋಗಸ್ ಕಂಪೆನಿಯೊಂದನ್ನು ಹುಟ್ಟುಹಾಕಿದ ಮಂತ್ರಿ ಕಟ್ಟಾ ನಾಯ್ಡು ಅದಕ್ಕೆಂದು ಬೆಂಗಳೂರು ಉತ್ತರ ತಾಲ್ಲೂಕು ಜಾಲಹೋಬಳಿಯ ಬಂಡಿಕೊಡಿಗೇ ಹಳ್ಳಿಯ ನಾನೂರೆಕರೆ ಕೇಳಿದ್ದು ಸರಿಯಷ್ಟೆ. ಎಸ್‌ಇಝಡ್ ಅಂದರೆ ವಿಶೇಷ ಆರ್ಥಿಕ ವಲಯ ಕಾಯ್ದೆಯಂತೆ ಕೆಐಎಡಿಬಿ ಭೂಸ್ವಾಧೀನ ಮಾಡಿಕೊಡುತ್ತದೆಯಾದರೂ ಅದಕ್ಕೆ ರೈತರ ಒಪ್ಪಿಗೆ ಕಡ್ಡಾಯ.

ಕೆಐಎಡಿಬಿ ಈ ಬಗ್ಗೆ ನೋಟೀಸ್ ಹೊರಡಿಸಿ, ಪ್ರತಿ ಎಕರೆಗೆ 31 ಲಕ್ಷದಂತೆ ಪರಿಹಾರ ನಿಗದಿಪಡಿಸಿ, ಇಂಥ 325 ಎಕರೆ ಭೂಮಿಯಲ್ಲಿ ಇಟಾಸ್ಕಾ ಕಂಪೆನಿ ಐಟಿ ಪಾರ್ಕ್ ಸ್ಥಾಪಿಸುವಂತೆ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಲು ಮುಂದಾಗಿದ್ದು ಹಳೇಕತೆಯೇ. ಹೀಗೆ ಕೆಐಎಡಿಬಿಯಿಂದ ರೈತರಿಗೆ ಮಂಜೂರಾದ ಪರಿಹಾರವನ್ನು ಲಪಟಾಯಿಸಲೆಂದೇ ಕಟ್ಟಾ ಮಗ ಜಗ್ಗನ ಕೇಡಿಗ್ಯಾಂಗ್ ಕಾರ್ಯಾಚರಣೆ ಗಿಳಿದದ್ದು ಒಂದೆಡೆಯಾದರೆ ಮತ್ತೊಂದೆಡೆ ಅಸ್ತಿತ್ವದಲ್ಲೇ

▶▶▶


ಸಿದ್ದು ಬುದ್ಧಿಗೇ ಕಟ್ಟಾ ಲದ್ದಿ?

ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಂದರೆ KIADB ತನ್ನನ್ನು ತಾನೇ ಹೇಗೆ ಭೂಕೊಳ್ಳೆಗೆ ಒಪ್ಪಿಸಿಕೊಂಡಿದೆಯೆಂಬುದಕ್ಕೆ ಇರುವ ಪುರಾವೆಗಳು ಒಂದೆರಡಲ್ಲ.



ಕಟ್ಟಾನ ನಕಲಿ ಕಂಪನಿ ಇಟಾಸ್ಕಾಗೆ ಮಂಜೂರಾಗಿರುವುದು ಕೇವಲ 325 ಎಕರೆ ಮಾತ್ರವಾದರೂ ವಿನಾಕಾರಣ ಬಂಡಿಕೊಡಿಗೇ ಹಳ್ಳಿಯ ರೈತರ 450 ಎಕರೆಗಳನ್ನು ಸ್ವಾಧೀನಪಡಿಸಿಕೊಂಡಿದೆ. ಹಾಗೇ ಸ್ವಾಧೀನಪಡಿಸಿಕೊಂಡ 450 ಎಕರೆಯಲ್ಲಿ ಇಟಾಸ್ಕಾ ಪಾಲಿನ 325 ಎಕರೆ ಕಳೆದರೆ ಉಳಿಕೆ 125 ಎಕರೆಯಿದೆಯಲ್ಲ ಅದನ್ನೂ ಕಟ್ಟಾ ಗ್ಯಾಂಗೇ ಆಕ್ರಮಿಸಿಕೊಂಡಿದೆ. ಇಂಥ ಹೆಚ್ಚುವರಿ ನೋಟಿಫೈಡ್ ಭೂಮಿಯ ರೈತರು ಕಟ್ಟಾ ಕೇಳಿದ ರೇಟಿಗೆ ಜಮೀನು ಬಿಟ್ಟುಕೊಡಬೇಕು ಮತ್ತು ಖಾಲಿ ಚೆಕ್ಕುಗಳಿಗೆ ತುಟಿಪಿಟಕೆನ್ನದೇ ಸಹಿ ಮಾಡಿಕೊಡಬೇಕು.

ಇಟಾಸ್ಕಾದ 325 ಎಕರೆಯ ವ್ಯಾಪ್ತಿಯ ಹೊರಗೂ ಏಕೆ ಮತ್ತು ಹೇಗೆ ಕಟ್ಟಾ ಪಟಾಲಮ್ ಭೂಮಿ ಖರೀದಿಸುತ್ತದೆ? KIADB ಕೈಗಾರಿಕಾ ಉದ್ದೇಶಕ್ಕೆಂದು ಸ್ವಾಧೀನಪಡಿಸಿಕೊಂಡ ಭೂಮಿಯ ಮಾರುಕಟ್ಟೆ ಬೆಲೆಯೇ ಎಕರೆಗೆ 2 ರಿಂದ 3 ಕೋಟಿ. ಇದನ್ನು ಬರೇ 31 ಲಕ್ಷಕ್ಕೆ ಆಕ್ರಮಿಸಿ ಮಾರಿಕೊಳ್ಳುವ ಕಟ್ಟಾ ದುರಾಚಾರದಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕೂಡ ಕೈಜೋಡಿಸಿದ್ದರ ವಿರುದ್ಧ ರೈತರು ಹತ್ತಾರು ಬಾರಿ ಪ್ರತಿಭಟಿಸಿದ್ದಾರೆ. ಸದ್ಯ KIADBಗೆ ಮುಖ್ಯಸ್ಥರಾದ ಶ್ಯಾಂಭಟ್ ನಿಷ್ಠುರಿ ಅಧಿಕಾರಿಯಾದರೂ ಮಂತ್ರಿ ಮುರುಗೇಶ್ ನಿರಾಣಿಗೆ ಧಮ್ಮಿಲ್ಲ.



ಬಳಿಗಾರ್

ಏಕೆಂದರೆ ಮಂತ್ರಿ ನಿರಾಣಿಯ ತೂತುಗಳೇ ಮುಚ್ಚಿಕೊಳ್ಳಲಾಗದಷ್ಟಿವೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಹೊಸ ಪ್ರಿನ್ಸಿಪಲ್ ಸೆಕ್ರೆಟರಿಯಾಗಿ ಬಂದ ವಿ.ಪಿ. ಬಳಿಗಾರ್ ಬಂದು ಬಂದಿದ್ದೇ ನಕಲಿ ದಾಖಲೆ ಸೃಷ್ಟಿಸಿ ಪರಿಹಾರ ದೋಚುತ್ತಿದ್ದ KIADB ಯ ಪರಮಭ್ರಷ್ಟ ಭೂಸ್ವಾಧೀನಾಧಿಕಾರಿ ಚಿಕ್ಕಬೆಟ್ಟಯ್ಯನನ್ನು ಒದ್ದೋಡಿಸಿ ಆ ಜಾಗಕ್ಕೆ ಹಿರೇಮಠನನ್ನು ತಂದಿದ್ದಾರಾದರೂ ಕಟ್ಟಾ ಗ್ಯಾಂಗನ್ನು ಬಗ್ಗುಬಡಿಯುವಷ್ಟು ಶಕ್ತರಲ್ಲ. ರೋಸತ್ತ ರೈತರು ಅಂತಿಮವಾಗಿ ಮೊರೆಹೊಕ್ಕಿದ್ದು ವಿರೋಧಿ ನಾಯಕ ಸಿದ್ಧರಾಮಯ್ಯಗೆ. ಇಲ್ಲಿಗೆ ಎರಡು ತಿಂಗಳ ಹಿಂದೆ ರೈತರ ಕಷ್ಟ ಕೇಳಲೆಂದೇ ಸಿದ್ದು ಬಂಡಿಕೊಡಿಗೇಹಳ್ಳಿಗೆ ಬಂದರು. ಬಲಿಯಾದ ಪ್ರತಿ ರೈತ ಕುಟುಂಬದ ಕತೆಯನ್ನೆಲ್ಲ ವಿವರವಾಗೇ ಕಲೆಹಾಕಿದ ಸಿದ್ದು ಸಾಹೇಬರು ತಾನಿದನ್ನು ವಿಧಾನಸಭೆಯಲ್ಲಿ ಪ್ರತಿಭಟಿಸಿಯೇ ತೀರುತ್ತೇನೆಂದರು. ರೈತರು ಕಾದಿದ್ದೇ ಬಂತು. ಅಧಿವೇಶನ ಮುಗಿದು ಮತ್ತೊಂದು ಅಧಿವೇಶನ ಬಂತಾದರೂ ಸಿದ್ದು ಸಾಹೇಬರು ಮಾತ್ರ ಕಟ್ಟಾ ಅಟ್ಟಹಾಸದ ವಿರುದ್ಧ ಘರ್ಜಿಸಲೇ ಇಲ್ಲ!

ಸಿದ್ದು ಕತೆಯೇ ಹೀಗಾದ ಮೇಲೆ ರೈತರಿನ್ನು ಯಾರನ್ನು ನಂಬಬೇಕು? ●

ದಲಿತನಾಯಕನ ಪಿತ್ರಾರ್ಜಿತ ಆಸ್ತಿಯನ್ನೂ ಬಿಡಲಿಲ್ಲ

ಒಂದೆಡೆ ಬಂಡಿಕೊಡಿಗೇಹಳ್ಳಿಯ ಬಡರೈತರ ಭೂಮಿಗೆ ನಾಲಿಗೆ ಹೆಟ್ಟಿದ್ದು ಸಾಲದೆಂಬಂತೆ ಕಟ್ಟಾ ತನ್ನ ಹೆಬ್ಬಾಳ ಕ್ಷೇತ್ರದಲ್ಲಿ ಮತ್ತೊಂದು ಹಾವಳಿಗಿಳಿದಿದ್ದಾನೆ. ಅದು ತನ್ನ ಹೆಬ್ಬಾಳದ ಎದುರಾಳಿ ದಲಿತ ನಾಯಕ ಮುನಿಕೃಷ್ಣರ ಆಸ್ತಿಯನ್ನೇ ಹೊಡೆಯುವ ಷಡ್ಯಂತ್ರ. ಅದಕ್ಕೆಂದು ಕಟ್ಟಾ ಛೂಬಿಟ್ಟದ್ದು ಹೆಬ್ಬಾಳದ ಎಸಿಪಿ ಮುನಿರತ್ನಂ ನಾಯ್ಡು ಎಂಬ ಹೊಟ್ಟೆಬಾಕ ಪೊಲೀಸಪ್ಪನನ್ನು. ಈ ಹಿಂದೆ ಕಬ್ಬನ್‌ಪಾರ್ಕ್, ಚಿಕ್ಕಪೇಟೆ, ಸಿಸಿಬಿಯಲ್ಲಿದ್ದು ಒಂದಲ್ಲಾ ಒಂದು ಅನಾಹುತ ಮಾಡಿಕೊಂಡೇ ಬಂದ ಎಸಿಪಿ ಮುನಿರತ್ನಂ ನಾಯ್ಡುವನ್ನು ತನ್ನ ಜಾತಿಬುದ್ಧಿಗಾಗೇ ಹೆಬ್ಬಾಳಕ್ಕೆ ಹಾಕಿಸಿಕೊಂಡ ಕಟ್ಟಾ ಮೊದಲು ಮಾಡಿದ ಕೆಲಸವೆಂದರೆ ಚೋಳನಾಯಕನಹಳ್ಳಿಯ ಸರ್ವೆ ನಂಬರ್ 34/4 ರಲ್ಲಿದ್ದ ಮುನಿಕೃಷ್ಣರ 16 ಗುಂಟೆಯ ಪಿತ್ರಾರ್ಜಿತ ಆಸ್ತಿಗೆ ರೌಡಿಗಳನ್ನು ನುಗ್ಗಿಸಿದ್ದು.



ಬಿಜೆಪಿಯ ದಲಿತ ಮೋರ್ಚಾದ ರಾಜ್ಯಾಧ್ಯಕ್ಷ ಮುನಿಕೃಷ್ಣರನ್ನು ಬೆಂಗಳೂರು ನಗರ ಸಾರಿಗೆ ಸಂಸ್ಥೆಯ ಅಧ್ಯಕ್ಷರನ್ನಾಗಿ ನೇಮಿಸುವಂತೆ ಮುಖ್ಯಮಂತ್ರಿಯೇ ಆದೇಶ ಹೊರಡಿಸಿದಾಗಲೂ ಅದನ್ನು ವ್ಯವಸ್ಥಿತವಾಗಿ ತಡೆಹಿಡಿದ ಕಟ್ಟಾ ದ್ವೇಷ, ಕೊನೆಕೊನೆಗೆ ಮುನಿಕೃಷ್ಣರ ಪಿತ್ರಾರ್ಜಿತ ಆಸ್ತಿಯನ್ನೇ ಕಿತ್ತುಕೊಳ್ಳುವ ಮಟ್ಟಕ್ಕೆ ಬೆಳೆಯುತ್ತದೆಯೆಂಬ ಲೆಕ್ಕಾಚಾರ ತಾನೇ ಯಾರಿಗಿತ್ತು?

ಕಟ್ಟಾ ಗೆದ್ದು ಮಂತ್ರಿಯಾದ ಕೆಲದಿನಕ್ಕೇ ಮುನಿರಾಜು, ಜ್ಞಾನಮಣಿ ಮತ್ತು ವೆಂಕಟಮ್ಮ ಎಂಬ ನಾಲ್ವರು ಕಟ್ಟಾ ಛೇಲಾಗಳು ಮುನಿಕೃಷ್ಣರ ಆಸ್ತಿಗೆ ನುಗ್ಗಿ ಶೆಡ್ಡು ಹಾಕುತ್ತಾರೆ. ತನ್ನ ಆಸ್ತಿಗೆ ವಕ್ಕರಿಸಿದವರ ವಿರುದ್ಧ ಮುನಿಕೃಷ್ಣ ಹೆಬ್ಬಾಳ ಪೊಲೀಸ್ ಠಾಣೆಗೆ ದೂರು ಕೊಟ್ಟರೆ ಅದನ್ನು ಎಸಿಪಿ ಮುನಿರತ್ನಂ ನಾಯ್ಡು ಮೂಲಕ ಕಸದಬುಟ್ಟಿ ಪಾಲು ಮಾಡಿದ ಕಟ್ಟಾ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಮುನಿಕೃಷ್ಣರ ವಿರುದ್ಧವೇ ಒಂದಲ್ಲ ಎರಡು ಸುಳ್ಳು ಕೇಸುಗಳನ್ನು ಹಾಕಿಸುತ್ತಾರೆ. ಅದೂ ಯಾವ್ಯಾವತ್ತು ಜಮೀನಿನ ವಿವಾದ ಕೋರ್ಟಿಗೆ ಬರುತ್ತೋ ಅವತ್ತೇ ಮುನಿಕೃಷ್ಣರ ವಿರುದ್ಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಕೇಸುಗಳು ದಾಖಲಾಗುತ್ತವೆ. ಇದರರ್ಥ ಕೋರ್ಟ್ ವಿಚಾರಣೆಗೇ ಬಾರದ ಹಾಗೆ ಮುನಿಕೃಷ್ಣರನ್ನು ಪೊಲೀಸರ ಮೂಲಕ ತಡೆಯುವುದು ಕಟ್ಟಾ ಹುನ್ನಾರ.


ತನ್ನದೇ ಪಕ್ಷದ ದಲಿತ ನಾಯಕನೊಬ್ಬನನ್ನು ರಾಜಕೀಯವಾಗಿ ತುಳಿಯುವುದೂ ಸಾಲದೆಂಬಂತೆ ಆತನ ಪಿತ್ರಾರ್ಜಿತ ಆಸ್ತಿಗೇ ರೌಡಿಗಳನ್ನು ನುಗ್ಗಿಸುವ ಕಟ್ಟಾ ದುರ್ಬುದ್ಧಿಗೆ ಏನೆನ್ನಬೇಕು? ●

ಃ ಭೂಮಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ದುಡ್ಡು ಚಲು ಇದೇ ದುಷ್ಟಕೂಟ ಅಣಿಯಾಯಿತು.

ಾದು ಎಂಥಾ ಷಡ್ಯಂತ್ರವೆಂದರೆ ಭೂಸ್ವಾಧೀನಕ್ಕೆಂದು ಡಿಬಿ ಬಂಡಿಕೊಡಿಗೇ ಹಳ್ಳಿಯ ವಿವಿಧ ಸರ್ವೆ ಮಗಳ ಇಂತಿಷ್ಟು ಎಕರೆಗಳೆಂದು ಸೂಚಿಸಿ ನೋಟೀಸು ರಡಿಸಿತ್ತಲ್ಲ; ಹಾಗೇ ಹೊರಡಿಸಿದ ನೋಟೀಸ್‌ನಲ್ಲೇ ಸವಿತ್ತು. ಅಂದರೆ ಜಮೀನೇ ಇಲ್ಲದೇ ಕಪೋಲಕಲ್ಪಿತ ನಂಬರುಗಳನ್ನೂ ಅಲ್ಲಿ ಇಂತಿಷ್ಟು ಎಕರೆ ಭೂಮಿ ಯೆಂದೂ ಕೆಐಎಡಿಬಿಯ ಅಧಿಕಾರಿಗಳೇ ಸುಳ್ಳು ಪಿದ್ದರು.

ಅದು ಪರಿಹಾರದ ದುಡ್ಡು ಲಪಟಾಯಿಸುವ ಡಿಬಿಯ ಖದೀಮ ಅಧಿಕಾರಿಗಳ ಪೂರ್ವಯೋಜಿತ ಲತ್ತಾಗಿತ್ತು. ಭೂಸ್ವಾಧೀನಕ್ಕಾಗಿ ಹೊರಡಿಸಿದ ಟೀಸಿನಲ್ಲಿ ಮೊದಲೇ ಕಪೋಲಕಲ್ಪಿತ ಸರ್ವೆ ಮಗಳನ್ನು ಕೆಐಎಡಿಬಿಯ ಅಧಿಕಾರಿಗಳು ಸೇರಿಸಿದ್ದರಲ್ಲ; ಸೇರಿಸಲ್ಪಟ್ಟ ಬೋಗಸ್ ಸರ್ವೆ ನಂಬರ್‌ಗಳ ಪೈಕಿ 310, 74/P8 ಮತ್ತು 40/820 ಇತ್ಯಾದಿಗಳೇ ಗ್ಯಾಂಗಿಗೆ ದರೋಡೆಯ ಅಸ್ತ್ರವಾಯಿತು.

ಬಂಡಿಕೊಡಿಗೇಹಳ್ಳಿಯ ಸರ್ವೆ ನಂಬರ್ 40/ ರಲ್ಲಿದ್ದ 4 ಎಕರೆ ಜಮೀನು ಮೂಲತಃ ಮುನಿ ನಪ್ಪ ಎಂಬಾತನಿಗೆ ಪಿತ್ರಾರ್ಜಿತವಾಗಿ ಬಂದಿತ್ತು. ಗೆ ಕನಿಷ್ಠ 31 ಲಕ್ಷದಂತೆ ಕೊಟ್ಟರೂ ಆತನಿಗೆ ಒಂದು ಕೋಟಿ ಇಪ್ಪತ್ನಾಲ್ಕು ಲಕ್ಷ ರೂಪಾಯಿಗಳ ಹಾರ ಕೆಐಎಡಿಬಿಯಿಂದ ಬರಬೇಕು. ಆದರೆ ಕಟ್ಟಾ ಜಗದೀಶ, ಆತನ ಪಾಲುದಾರ ಇಟಾಸ್ಕಾ ಡೈರೆಕ್ಟರ್ ವಿ.ಶ್ರೀನಿವಾಸ್ ಮತ್ತು ಏಜೆಂಟ್ ಗೋಪಿ ಕೊಂಡು ತಾವೇ ನಿಂತು ಪರಿಹಾರ ಕೊಡಿಸುತ್ತೇವೆಂದು ನಿಆಂಜನಪ್ಪನಿಂದ ಕೆಲ ಖಾಲಿ ಚೆಕ್ಕುಗಳಿಗೆ ಸಹಿ



ದರು. ಆ ರೀತಿ ಪಡೆದ ಖಾಲಿ ಚೆಕ್ಕುಗಳ ಮೇಲೆ ಹೆಸರು ಬರಕೊಂಡು ಅತ್ತ ಕೆಐಎಡಿಬಿಯ ಹಾರದ ದುಡ್ಡು ಮುನಿಆಂಜನಪ್ಪನ ಖಾತೆಗೆ ಯಾಗಿದ್ದನ್ನೇ ಕಾದು ಅಷ್ಟೂ ಒಂದುಕೋಟಿ ಇಪ್ಪತ್ನಾಲ್ಕು ನನ್ನು ಲಪಟಾಯಿಸಿಬಿಟ್ಟರು.


ಇಲ್ಲಿ ಮುನಿಆಂಜನಪ್ಪನಿಗೆ ಕಟ್ಟಾ ಗ್ಯಾಂಗ್ ಕೊಟ್ಟಿದ್ದು ಗೆ 4 ಲಕ್ಷದಂತೆ ಕೇವಲ ಹದಿನಾರು ಲಕ್ಷ ಮಾತ್ರ. ಕೆ ಒಂದು ಕೋಟಿ ಎಂಟು ಲಕ್ಷದಷ್ಟು ದುಡ್ಡನ್ನು ಲೆಗಳಲ್ಲಷ್ಟೇ ಮುನಿಆಂಜನಪ್ಪ ಪಡೆದಂತೆ ಮಾಡಿ ಟ್ಟ ಮೊತ್ತವನ್ನು ಇಟಾಸ್ಕಾ ಖದೀಮರು ನುಂಗಿ ರು. ಈ ಬಗ್ಗೆ ಮುನಿಆಂಜನಪ್ಪ ಕಟ್ಟಾ ಮಗ ಃ ವಿರುದ್ಧ ಬಾಗಲೂರು ಪೊಲೀಸ್ ಠಾಣೆಗೆ ಕೊಟ್ಟ ರು ದಾಖಲಾಗಿದೆ. ಪೊಲೀಸರು ಇಟಾಸ್ಕಾ ಕಂಪೆನಿಯ ಕ್ಟರ್‌ಗಳಾದ ಕಟ್ಟಾ ಮಗ ಜಗ್ಗ ಎಸ್.ವಿ.ಶ್ರೀನಿವಾಸ್ ತ್ತು ಗೋಪಿಯ ವಿರುದ್ಧ 2009ರ ಏಪ್ರಿಲ್ 17ರಂದು ಐಆರ್ ಕೂಡ ದಾಖಲಿಸಿದ್ದಾರೆ.

ಇಲ್ಲಿಯ ಸರ್ಕಾರಿ ದಾಖಲೆಗಳ ರ ಒಂದು ಕೋಟಿ ಇಪ್ಪತ್ನಾಲ್ಕು ದಷ್ಟು ದುಡ್ಡು ರೈತ ಮುನಿ ಆಂಜ ಃ ಕೈಸೇರಿದೆಯಾದರೂ ವಾಸ್ತವವಾಗಿ ಗೆ ಸಿಕ್ಕಿದ್ದು ಕೇವಲ 16 ಲಕ್ಷ ತ್ರ. ಮುನಿಆಂಜನಪ್ಪ ದಲಿತ. ಭೂಮಿ ಪ್ಪದೆ. ಪರಿಹಾರದ ಮೊತ್ತ ಖದೀಮರ ಪಾಗಿದೆ. ಆದರೆ ಅನ್ಯಾಯಕ್ಕೆ ಕೋರ್ಟು, ರ, ಸಮಾಜ ಯಾವುದೂ ಆತನ ಂಗಿಲ್ಲ.



ಇದು ಕಟ್ಟಾ ಪಟಾಲಂ ದರೋಡೆಯ ದಂ ಶೈಲಿಯಾದರೆ ಇದೇ ಡಿಕೊಡಿಗೇಹಳ್ಳಿಯ ಸೈಯದ್ ಅಬ್ದುಲ್ ಅಜೀಮ್ ಬಾತನದು ಮತ್ತೊಂದು ಕತೆ. ಅಸಲಿಗೆ ಈತ ರೈತನೇ , ಸರ್ವೆ ನಂಬರ್ 74/310ರಲ್ಲಿ ಒಟ್ಟು 10 ಎಕರೆ ಗುಂಟೆ ಜಮೀನಿದೆಯೆಂದೂ, ಎಕರೆಗೆ 31 ಲಕ್ಷದಂತೆ ಒಟ್ಟು 3,13,87,500 (ಮೂರು ಕೋಟಿ ಮೂರು ಲಕ್ಷದ ಎಂಬತ್ತೇಳು ಸಾವಿರದ ಐನೂರು) ಪಾಯಿಗಳಷ್ಟು ಪರಿಹಾರವನ್ನು ಪಡೆದಿದ್ದಾನೆಂದೂ ಐಎಡಿಬಿಯ ದಾಖಲೆಗಳು ಹೇಳುತ್ತವೆ.

ತಮಾಷೆಯೆಂದರೆ ವಾಸ್ತವವಾಗಿ ಸ.ನಂ.74/310 ಬುದಾಗಲಿ, ಅಲ್ಲಿ ಹತ್ತೆಕರೆಯಷ್ಟು ಭೂಮಿಯಾಗಲಿ


EXHIBIT No.:
(b) Address:
(c) In case outside limit of this Police Station, then name of P.S. District :
6. Complainant / Informant :
(a) Name : Sri. MUNIANJANAPPA
(b) Father's/Husband's Name : LATE. MUNIHANUMAIAH
(c) Date/Year Of Birth : 60 YRS
(d) Nationality : INDIA
(e) PassPort No :
(f) Date Of Issue :
(g) Place of Issue :
(h) Occupation : SOCIAL SERVANT
Address : 836, 1st CROSS, 2nd MAIN ROAD, BABA NAGARA LAYOUT, DWARAKANAGAR, BANGALORE-63
7. Details of known / suspected / unknown accused with full particulars :
1. S.V. SRINIVASA 2. GOPI 3. JAGADEESH NAIDU
Signature of the Officer-in-charge Police Station
MUNIANJANAPPA

ಇಲ್ಲವೇ ಇಲ್ಲ. ಸೈಯದ್ ಅಬ್ದುಲ್ ಅಜೀಮ್ ಎಂಬಾತ ರೈತನಂತೂ ಅಲ್ಲವೇ ಅಲ್ಲ. ಇಲ್ಲದ ಭೂಮಿಗೆ ನಕಲಿ ಸರ್ವೆ ನಂಬರುಗಳನ್ನು ಸೃಷ್ಟಿಸಿ ಅದು ಸೋಕಾಲ್ಡ್ ರೈತನಿಗೆ ಸೇರಿದಂತೆ ದಾಖಲೆ ಸೃಷ್ಟಿಸಿದ ಕಟ್ಟಾ ಗ್ಯಾಂಗ್ ಇಲ್ಲೂ ಕೂಡಾ ಸೈಯದ್ ಅಬ್ದುಲ್ ಅಜೀಮ್‌ನಿಂದ ಮೊದಲೇ ಖಾಲಿ ಚೆಕ್‌ಗಳನ್ನು ಪಡೆದು, ಪರಿಹಾರದ ದುಡ್ಡ ಆತನ ಖಾತೆಗೆ ಜಮೆಯಾಗಿದ್ದನ್ನೇ ಕಾದು, ಮೊದಲೇ ಪಡೆದಿದ್ದ ಚೆಕ್ಕನ್ನು ಬಳಸಿ ದುಡ್ಡು ದೋಚಿದೆ. ಹಾಗೇ ಮೂರು ಕೋಟಿಗೂ ಅಧಿಕ ಮೊತ್ತದ ದುಡ್ಡು ಹೊಡೆದ ಕಟ್ಟಾ ಗ್ಯಾಂಗ್ ನಕಲಿ ರೈತ ಸೈಯದ್ ಅಬ್ದುಲ್ ಅಜೀಮ್‌ಗೆ ಕೊಟ್ಟಿದ್ದು ಕೇವಲ ಹತ್ತು ಲಕ್ಷ ಮಾತ್ರ.

ಈ ಸೈಯದ್ ಅಬ್ದುಲ್ ಅಜೀಮ್ ಬಾಗಲೂರು ಸಮೀಪದ ರಜಾಕ್ ಪಾಳ್ಯದವನಾದರೂ ಆತ ಬಿ.ಕೆ.ಹಳ್ಳಿಯ ನಿವಾಸಿಯೆಂಬಂತೆ ಕಳ್ಳ ದಾಖಲೆ ಸೃಷ್ಟಿಸಲಾಗಿದೆ. ಯಾವತ್ತು ಮೂರು ಕೋಟಿಗೂ ದೊಡ್ಡ ಮೊತ್ತದ ರೊಕ್ಕ ಆದಾಯ ತೆರಿಗೆದಾರನೇ ಅಲ್ಲದ ಅಜೀಮ್‌ನ ಖಾತೆಗೆ ಜಮೆಯಾಗಿ ಅನಂತರ ಯಾರದೋ ಹೆಸರಿಗೆ ನಗದಾಯಿತೋ ಸಹಜವಾಗೇ ಅಜೀಮ್ ಬೆನ್ನಿಗೆ ಆದಾಯ ತೆರಿಗೆ ಅಧಿಕಾರಿಗಳು ಬಿದ್ದಿದ್ದಾರೆ. ಆತನೇನಾದರೂ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳ ಕೈಗೆ ಸಿಕ್ಕನೆಂದರೆ ಮೂರುಕೋಟಿಗೆ ಲೆಕ್ಕ ಕೊಡಲೇಬೇಕು. ಆಗ ಕಟ್ಟಾ ಗ್ಯಾಂಗ್‌ನ ದರೋಡೆ ಬಯಲಾಗದೇ ಬೇರೆ ದಾರಿಯೇ ಇಲ್ಲವಲ್ಲ.


ಅದಕ್ಕೆ ಕಟ್ಟಾ ಗ್ಯಾಂಗ್ ನಕಲಿ ರೈತ ಸೈಯದ್ ಅಬ್ದುಲ್ ಅಜೀಮ್‌ನನ್ನೇ ನಾಪತ್ತೆ ಮಾಡಿ ಬಚ್ಚಿಟ್ಟಿದೆ. ಇವತ್ತಲ್ಲ ನಾಳೆ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳ ಕೈಗೆ ಅಜೀಮ್ ಸಿಕ್ಕನೆಂದರೆ ಮಂತ್ರಿ ಕಟ್ಟಾ ಆತನ ಮಗ ಜಗ್ಗ ಮತ್ತು ಇಡೀ ಇಟಾಸ್ಕಾ ಗ್ಯಾಂಗ್ ಕಂಬಿ ಎಣಿಸಲೇಬೇಕು!

ಇದಿಷ್ಟೇ ಅಲ್ಲದೇ ಕಟ್ಟಾ ಗ್ಯಾಂಗ್‌ನ ಖತರ್‌ನಾಕ್ ಪಾತಕಿ ಬಂಡಿಕೊಡಿಗೆಹಳ್ಳಿಯ ಬೀಕೆ ಮಂಜ ಎಂಬಾತ ಸ.ನಂ.40/P20ರಲ್ಲಿದ್ದ 4 ಎಕರೆ ಭೂಮಿಯ ಪರಿಹಾರದ ಮೊತ್ತವಾದ ಒಂದು ಕೋಟಿ ಇಪ್ಪತ್ನಾಲ್ಕು ಲಕ್ಷ ರೂಪಾಯಿಗಳಷ್ಟನ್ನೂ ಕಬಳಿಸಿ ಬಾಗಲೂರಿನ ಬಡ ರೈತ ಹನುಮಣ್ಣನನ್ನು ಬೀದಿಪಾಲು ಮಾಡಿದ್ದಾನೆ. ಇಲ್ಲಿ ಬಡಪಾಯಿ ಹನುಮಣ್ಣನ ಕೈಗೆ ಸಿಕ್ಕಿದ್ದು ಕೇವಲ 15 ಲಕ್ಷ ಮಾತ್ರ.

ಪರಿಹಾರದ ದುಡ್ಡು ಕೊಡಿಸುತ್ತೇನೆಂದು ಮುಗ್ಧ ರೈತರಿಂದ ಮೊದಲೇ ಖಾಲಿ ಚೆಕ್ಕುಗಳನ್ನು ಪಡೆದು ಹತ್ತಾರು ಕೋಟಿ ಮೊತ್ತದ ಪರಿಹಾರದ ದುಡ್ಡು ದೋಚಿದ್ದೂ ಅಲ್ಲದೇ ಬಡರೈತರನ್ನು ಬೀದಿಪಾಲು ಮಾಡಿದ ಇಟಾಸ್ಕಾ ಖದೀಮರ ಹಗಲು ದರೋಡೆಯನ್ನು ಪ್ರಶ್ನಿಸುವವರೇ ಇಲ್ಲವೇ?

ದೇಶದ ಯಾವ ಕಾಯ್ದೆ ಕಾನೂನುಗಳೂ ಕಟ್ಟಾ ಗ್ಯಾಂಗ್ ಹಗಲು ದರೋಡೆಗೆ ಶಿಕ್ಷೆ ಕೊಡುವುದಿಲ್ಲವೇ? ರೈತರ ಬೇಗುದಿಗೆ ಕೈಗಾರಿಕಾ ಮಂತ್ರಿ ನಿರಾಣಿ ಕೂಡಾ ನಿಸ್ಸಹಾಯಕನೇ? ●


ಯಡ್ಡಿಗೆ ಬ್ಲ್ಯಾಕ್‌ಮೇಲ್ ರೇಣುಕಾಗೆ ಸಚಿವಗಿರಿ!



ಭಿನ್ನಮತಿಯರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಯಡಿಯೂರಪ್ಪ ಕೊನೆಗೂ ತಮ್ಮ ಸಂಪುಟಕ್ಕೆ ನರ್ಸ್ ಕುಖ್ಯಾತಿ ಹಾಗೂ ಜೋಕರ್ ರೇಣುಕಾಚಾರ್ಯನನ್ನು ಸೇರಿಸಿಕೊಂಡಿದ್ದಾರೆ. ಆದರೆ ರೇಣುಕನಿಗೆ ಮಂತ್ರಿಗಿರಿಯನ್ನು ಕೊಡುವ ಮೂಲಕ ತಮ್ಮ ಪಕ್ಷದಲ್ಲೇ ಭಿನ್ನಮತೀಯರ ಹೊಸ ಗುಂಪನ್ನು ಯಡ್ಡಿ ಹುಟ್ಟುಹಾಕಿದ್ದಾರೆ.

ಗುರುವಾರ ರಾಜಭವನದಲ್ಲಿ ರೇಣುಕಾಚಾರ್ಯ ಸಚಿವನಾಗಿ ಪ್ರತಿಜ್ಞೆ ಸ್ವೀಕರಿಸಿದಾಗ ರಾಜ್ಯ ಬಿಜೆಪಿಯಲ್ಲಿ ಹುಟ್ಟಿಕೊಂಡಿರುವ ಹೊಸ ಭಿನ್ನಮತೀಯತೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಈ ಸಮಾರಂಭಕ್ಕೆ ಯಡ್ಡಿ ಸಂಪುಟದ ಹಿರಿಯ ಸಚಿವರಾದ ಆರ್. ಅಶೋಕ, ಕಟ್ಟಾ ಸುಬ್ರಮಣ್ಯ ನಾಯ್ಡು, ಸುರೇಶ್ ಕುಮಾರ್, ಮಾಜಿ ಸಚಿವೆ ಶೋಭಾ ಕರಂದ್ಲಾಜೆ ಮೊದಲಾದವರು ಗೈರುಹಾಜರಾಗಿದ್ದರು. ಅಷ್ಟೇ ಅಲ್ಲ, ಬೆಂಗಳೂರು ನಗರದಿಂದ ಶಾಸಕರಾಗಿರುವ ನಂದೀಶ್ ರೆಡ್ಡಿ, ವಿಶ್ವನಾಥ್, ಮುನಿರಾಜು ಮೊದಲಾದವರೆಲ್ಲ ಪ್ರತಿಭಟನಾ ರೂಪದಲ್ಲಿ ಪ್ರತಿಜ್ಞಾ ಸಮಾರಂಭಕ್ಕೆ ಚಕ್ಕರ್ ಹೊಡೆದರು. "ಬರೀ ಪ್ರತಿಜ್ಞೆ ಸಮಾರಂಭಕ್ಕೆ ಮಾತ್ರವಲ್ಲ ಇಂದು ಇಡೀ ದಿನ ಅಸೆಂಬ್ಲಿ ಒಳಗಡೆ ಕೂಡ ಕಾಲಿಡುವುದಿಲ್ಲ" ಎಂದೂ ಈ ಗುಂಪು ಹೇಳಿತು. ಪಕ್ಷದ ಅಧ್ಯಕ್ಷ ಸದಾನಂದಗೌಡ ಕೂಡ ಸಮಾರಂಭದಲ್ಲಿ ಕಾಣಿಸದಿರುವುದು ಪಕ್ಷದೊಳಗೆ ಸಾಕಷ್ಟು ಅಸಮಾಧಾನ ಸ್ಫೋಟಗೊಂಡಿದೆ ಎಂಬುದರ ಸಂಕೇತದಂತಿತ್ತು.

ನರ್ಸ್ ಜಯಲಕ್ಷ್ಮಿ ಪ್ರಕರಣದ ನಂತರ ರೇಣುಕಾಚಾರ್ಯನ ಇಮೇಜ್ ಮತ್ತಷ್ಟು ಕಳೆಗುಂದಿತು ಮಾತ್ರವಲ್ಲ, ಆತನ ಇಂತಹ ಹುಚ್ಚಾಟದಿಂದಾಗಿ ಬಿಜೆಪಿಯ ವರ್ಚಸ್ಸಿಗೇ ಧಕ್ಕೆ ಉಂಟಾಗಲಿದೆ ಎಂದು ಹಲವಾರು ಚೆಡ್ಡಿಗಳೇ ಅಭಿಪ್ರಾಯ ಪಟ್ಟಿದ್ದರು. ಈಗ ಅದೇ ಶಾಸಕನನ್ನು ಯಾವುದೇ ಸಂಕೋಚ, ನಾಚಿಕೆ, ಮುಜುಗರವಿಲ್ಲದೆ ಯಡಿಯೂರಪ್ಪ ತಮ್ಮ ಸಂಪುಟಕ್ಕೆ ಸೇರಿಸಿಕೊಂಡಿರುವುದು ಪಕ್ಷದಲ್ಲಿರುವ ಸಜ್ಜನರ ಕೋಪಕ್ಕೆ ಕಾರಣವಾಗಿದೆ.



ಜೋಕರ್ ರೇಣುಕಾಚಾರ್ಯ ಎದುಬಾರಿ ಬಿದ್ದ ಯಡ್ಡಿ ಕಾಲಿಗೆ..

ಜೋಕರ್ ರೇಣುಕಾಚಾರ್ಯನನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವ ಮುಖಾಂತರ ಯಡಿಯೂರಪ್ಪ ಕರ್ನಾಟಕ ರಾಜ್ಯ ಕಂಡ ಅತ್ಯಂತ ದುರ್ಬಲ ಮುಖ್ಯಮಂತ್ರಿ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಮೊನ್ನೆಮೊನ್ನೆಯ ತನಕ ಭಿನ್ನಮತೀಯ ನಾಯಕನಾಗಿ ಯಡಿಯೂರಪ್ಪನವರನ್ನು ಬಾಯಿಗೆಬಂದಂತೆ ಬೈಯುತ್ತಿದ್ದ ಈ ಆಚಾರಿಯನ್ನು ಯಾವ ಮಾನದಂಡದ ಮೇಲೆ ಸಚಿವನನ್ನಾಗಿ ಮಾಡಲಾಗಿದೆ ಎಂಬುದೇ ಪಕ್ಷದಲ್ಲಿ ಈಗ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ. ಯಡ್ಡಿ ಬಗ್ಗೆ ಈ ರೇಣುಕನಿಗೆ ಅದೇನು ಗೊತ್ತೋ, ಅದ್ಯಾವ ಸೀಕ್ರೆಟ್ ಆತ ಬಲ್ಲನೋ ಅಂತೂ ಈತ ಅವರನ್ನು ಬ್ಲಾಕ್‌ಮೇಲ್ ಮಾಡುವುದನ್ನು ಬಿಟ್ಟು ಪಕ್ಷಕ್ಕಾಗಿ ಕಡಿದುಕಟ್ಟೆಹಾಕಿದ್ದು ಅಷ್ಟರಲ್ಲೇ ಇದೆ ಎಂಬುದು ಸಾಮಾನ್ಯ ಚೆಡ್ಡಿ ಕಾರ್ಯಕರ್ತನ ಅಭಿಪ್ರಾಯವಾಗಿದೆ.

ಆರಂಭದಲ್ಲಿ ಗಣಿ ಧಣಿಗಳ ಒತ್ತಡಕ್ಕೆ ಮಣಿದು ಅವರಿಗೆ ಫಲಪ್ರದವಾದ ಖಾತೆ ನೀಡಿದ ಯಡ್ಡಿ, ಆ ನಂತರ ರೆಡ್ಡಿ ಸೋದರರ ಎರಡನೇ ಸುತ್ತಿನ ಭಿನ್ನಮತದ ಸಂದರ್ಭದಲ್ಲಿ ಮತ್ತೊಮ್ಮೆ ಅವರ ಒತ್ತಡಕ್ಕೆ ಮಣಿದು ತಮ್ಮ ಆತ್ಮೀಯ ಶೋಭಾ ಕರಂದ್ಲಾಜೆಯನ್ನು ಬಲಿಕೊಟ್ಟರಲ್ಲದೆ ತಮ್ಮ ಪರಮ ವೈರಿ ಜಗದೀಶ್ ಶೆಟ್ಟರ್‌ರನ್ನು ಸಂಪುಟಕ್ಕೆ ತೆಗೆದುಕೊಂಡರು. ಆ ನಂತರ ಆರಂಭವಾದ ಮೂರನೇ ಸುತ್ತಿನ ಭಿನ್ನಮತದ ನಾಯಕ ಜೋಕರ್ ಖ್ಯಾತಿ ರೇಣುಕಾಚಾರಿಯನ್ನೇ ಈಗ ತಮ್ಮ ಸಂಪುಟಕ್ಕೆ ತೆಗೆದುಕೊಂಡಿದ್ದಾರೆ ಯಡ್ಡಿ

▶▶▶8

ಯಡ್ಡಿಯ ನೀಲಗಣ್ಣಿನ ಹುಡುಗ!


ದೇವೇಗೌಡರಿಗೆ ವೈ.ಎಸ್.ವಿ.ದತ್ತ ಇದ್ದಂತೆ, ರಾಮಕೃಷ್ಣ ಹೆಗಡೆಗೆ ಜೀವರಾಜ್ ಆಳ್ವಾ ಇದ್ದಂತೆ ಬರುವ ದಿನಗಳಲ್ಲಿ ಯಡ್ಡಿಗೆ ರೇಣುಕಾಚಾರಿ ಆಗಲಿದ್ದಾನೆಯೇ?

ಈ ಪ್ರಶ್ನೆ ಹೌದು ಎಂದು ಕೆಲ ಚೆಡ್ಡಿಗಳು ತಲೆದೂಗುತ್ತಿದ್ದಾರೆ.

ಮೊದಲನೆಯದಾಗಿ, ರೇಣುಕನಿಗೆ ಮಂತ್ರಿ ಪದವಿ ನೀಡುವ ಮುಖಾಂತರ ಸುಮಾರು 15 ಶಾಸಕರ ಬಾಯಿ ಮುಚ್ಚಿಸುವಲ್ಲಿ ಯಡ್ಡಿ ಯಶಸ್ವಿಯಾಗಿದ್ದಾರೆ. ಇಲ್ಲದಿದ್ದಲ್ಲಿ ಈ ಭಿನ್ನಮತೀಯರೆಲ್ಲಾ ಕುಮಾರಸ್ವಾಮಿಯವರ 'ಆಪರೇಷನ್'ಗೆ ಒಳಗಾಗಿ ಬಿಜೆಪಿ ಪಕ್ಷಕ್ಕೆ ಗುಡ್ ಬೈ ಹೇಳುವ ಸಾಧ್ಯತೆ ಇತ್ತು, ಆ ಮೂಲಕ ಯಡ್ಡಿಯ ಸರ್ಕಾರವನ್ನೇ ಉರುಳಿಸುವ ಅಪಾಯವೂ ಇತ್ತು. ಆದರೀಗ ರೇಣುಕನಿಗೆ ಮಂತ್ರಿಗಿರಿ ನೀಡಿ ಆತನ ಬಾಲಂಗೋಚಿಗಳಿಗೆ ನಿಗಮ-ಮಂಡಳಿಗಳ ಅಧ್ಯಕ್ಷ ಸ್ಥಾನಗಳನ್ನು ನೀಡುವುದಾಗಿ ಮಾತು ಕೊಟ್ಟಿದ್ದಾರೆ ಯಡ್ಡಿ. ಮಾರ್ಚ್‌ನಲ್ಲಿ ಬಜೆಟ್ ಮಂಡನೆ ಮಾಡಿದ ನಂತರ ಇವರ ಅದೃಷ್ಟ ಖುಲಾಯಿಸುವುದು ಗ್ಯಾರೆಂಟಿ.

ಎರಡನೆಯದಾಗಿ ರೇಣುಕಾ ಸೇರ್ಪಡೆ ಯಡ್ಡಿ ಪಾಲಿಗೆ ವರವಾಗುವ ಸಾಧ್ಯತೆಯೂ ಇದೆ. ಯಾಕೆಂದರೆ ರೇಣುಕಾ ಒಂದು ರೀತಿಯಲ್ಲಿ ಆತ್ಮಾಹುತಿ ಬಾಂಬ್ ದಳ ಇದ್ದಂತೆ. ಯಾವುದಕ್ಕೂ ಎಂದೂ ಅಂಜದ ರೇಣುಕಾನನ್ನು ಇನ್ನುಮುಂದೆ ತನ್ನ ವೈರಿಗಳನ್ನು ಸದೆ ಬಡಿಯಲು ಯಡ್ಡಿ ಬಳಸಿಕೊಳ್ಳುವುದು ಖಂಡಿತ. ಇಂತಹ ಒಬ್ಬ ನಿಷ್ಠಾವಂತ ಸೇವಕ ಈ ತನಕ ಯಡ್ಡಿ ಜೊತೆಗೆ ಇರಲಿಲ್ಲ.

ಈಗ ರೇಣುಕಾಚಾರ್ಯ ಆ ಪಾತ್ರವನ್ನು ನಿರ್ವಹಿಸಲಿದ್ದಾನೆ. ಹೇಗಿದ್ದರೂ ಇಬ್ಬರೂ ಲಿಂಗಾಯತರು. ಮತ್ತು ತಾನು ಸಚಿವನಾಗಲಿಲ್ಲ ಎಂಬ ರೇಣುಕನ ಅತೃಪ್ತಿ ಈಗ ಶಮನವಾಗಿದೆ. ಆದ್ದರಿಂದ ಈ ಮಾಜಿ ಗುರು ಶಿಷ್ಯರು ಈಗ ಒಂದಾಗಿ ರಾಜ್ಯದ ಮೇಲೆ ದಾಳಿ ಇಡಲಾರಂಭಿಸುವ ಅಪಾಯವಂತೂ ಇದ್ದೇ ಇದೆ.




ಜೇಕೆ ನೇತೃತ್ವದಲ್ಲಿ ಜಾಣಗೆರೆ ಹೊಸ ಸಂಘಟನೆ?

"ಇದನ್ನು ಕನ್ನಡ ತಾಯಿಯ ಸೌಭಾಗ್ಯವೆಂದು ಯಾರಾದರೂ ಭಾವಿಸಿದ ಪಕ್ಷದಲ್ಲಿ ಅಂಥವರಿಗೊಂದು ಸಂತೋಷದ ಸುದ್ದಿಯಿದೆ. ಉಚ್ಚಾಟಿತ ಜಯಕರ್ನಾಟಕದ ಕಾರ್ಯಾಧ್ಯಕ್ಷ ಕಮ್ ಹಳೇ ಕನ್ನಡ ಓರಾಟಗಾರ ಜಾಣಗೆರೆ ವೆಂಕಟರಾಮಯ್ಯನವರು ಜೇಕೆ ಅರ್ಥಾತ್ ಜೇದರಹಳ್ಳಿ ಕೃಷ್ಣಪ್ಪನವರ ನೇತೃತ್ವದಲ್ಲಿ ಹೊಸ ಸಂಘಟನೆಯೊಂದನ್ನು ಹುಟ್ಟು ಹಾಕಲಿದ್ದಾರಂತೆ!

ಜೇಕೆ ಉರ್ಫ್ ಜೇದರಹಳ್ಳಿ ಕೃಷ್ಣಪ್ಪ ಅರ್ಥಾತ್ ಎಂ.ಡಿ.ಯವರು ತನ್ನ ಹೊಸ ಸಂಘಟನೆಗೆ ಗೌರವಾಧ್ಯಕ್ಷರಾಗಲು ತನುಮನ ಧನ(!)ದಿಂದ ಒಪ್ಪಿಗೆ ಸೂಚಿಸಿದ್ದಾರೆಂದು ಸ್ವತಃ ಜಾಣಗೆರೆಯವರೇ ಘೋಷಿಸಿದ್ದಾರಂತೆ. ಈ ಹಿಂದೆ ಕರ್ನಾಟಕ ರಕ್ಷಣಾ ವೇದಿಕೆಯಲ್ಲಿದ್ದು ನಾರಾಯಣಗೌಡನಿಂದ ಹೊರದಬ್ಬಿಸಿಕೊಂಡ, ಆನಂತರ ಜಯ ಕರ್ನಾಟಕ ಸೇರಿ ಉಚ್ಚಾಟನೆಗೊಂಡ ಜಾಣಗೆರೆ ಈ ಬಾರಿ ಭೀಷ್ಮ ಶಪಥಗೈದೇ ಹೊಸ ಸಂಘಟನೆ ಕಟ್ಟಲು ಜೇದರಹಳ್ಳಿ ಕೃಷ್ಣಪ್ಪನವರ ಜೊತೆ ಕೈಜೋಡಿಸಿದ್ದರ ಉದ್ದೇಶವೇನು ಗೊತ್ತೆ?

ಗಣಿ ಧಣಿಗಳ ವಿರುದ್ಧ ಇನ್ನು ಮುಂದೆ ಜಾಣಗೆರೆ ಭಯಂಕರ ಹೋರಾಟ ಶುರು ಮಾಡುತ್ತಾರಂತೆ. ರಾಜ್ಯದ ಗಣಿಸಂಪತ್ತಿನ ಲೂಟಿಯ ವಿರುದ್ಧ ಜಯಕರ್ನಾಟಕ ತೆಪ್ಪಗಿದ್ದುದ್ದನ್ನು ಪ್ರಶ್ನಿಸಿದ್ದಕ್ಕೇ ತನ್ನನ್ನು ಉಚ್ಚಾಟಿಸಲಾಯ್ತು ಎಂದು ಎಲ್ಲೆಂದರಲ್ಲಿ ಕಿಡಿ ಕಾರುತ್ತಿರುವ ಜಾಣಗೆರೆಗೆ ಹಿಂದಿದ್ದ ಜಯಕರ್ನಾಟಕದಂತೆ ಏರ್‌ಕಂಡೀಷನ್ ಆಫೀಸು, ಐಷಾರಾಮಿ ಕಾರು, ಮಾಸಿಕ ಮೂವತ್ತು ಸಾವಿರ ರೂಪಾಯಿ ಸಂಬಳದಷ್ಟು ಸೌಕರ್ಯ ಕಲ್ಪಿಸಲಿಕ್ಕಾಗದೇ ಹೋದರೂ ಪ್ರತಿ ಮಧ್ಯಾಹ್ನ ಮುದ್ದೆ ಮಾದಪ್ಪನ ಮೆಸ್ಸಿನಿಂದ ಬಿಸಿ ರಾಗಿ ಮುದ್ದೆ ಮಟನ್ ಕುರ್ಮಾ ಮತ್ತು ಸಂಜೆ ದರ್ಶಿನ್ ಬಾರಿನಲ್ಲಿ ಸಾಲ ಸೌಲಭ್ಯದ ಕಿಂಚಿತ್ತು ಪ್ರೋತ್ಸಾಹವನ್ನಾದರೂ ಜೇಕೆ ಕಲ್ಪಿಸಿದ್ದಾರಂತೆ.




ಕಾರು-ಸಂಬಳವಿಲ್ಲದೇ ಹೋದರೂ ಎಣ್ಣೆ-ಮುದ್ದೆಗೆ ಮೋಸವಿಲ್ಲವಲ್ಲ, ಎಷ್ಟು ದಿನಗಳ ಕಾಲ ಕೂಳು ಹುಟ್ಟುತ್ತೋ ಅಷ್ಟು ದಿನಗಳ ಕಾಲ ಜಾಣಗೆರೆಯ ಹೋರಾಟಕ್ಕೇನೂ ಬರವಿಲ್ಲ. ಅಂದಹಾಗೆ ಹೊಸ ಸಂಘಟನೆಯ ಹೆಸರು 'ಕೆಂಪೇಗೌಡ ರಕ್ಷಣಾ ಪಡೆ'ಯಂತೆ. ಜಾಣಗೆರೆ ಜೊತೆ ಜಯಕರ್ನಾಟಕ ತೊರೆದು ಬಂದ ದೀಪ್ತಿಗೌಡ, ಸತ್ಯನಾರಾಯಣ, ರಾಮಚಂದ್ರ, ನರಸಿಂಹಯ್ಯ ಇತ್ಯಾದಿ ಮುಂಚೂಣಿ ನಾಯಕರೇ ಹೊಸ ಸಂಘಟನೆಯ ಆಧಾರಸ್ತಂಭಗಳಂತೆ. ಜೊತೆಗೆ ಜೇಡರಹಳ್ಳಿ ಅಭಿಮಾನಿಗಳು ಮತ್ತು ಅನುಯಾಯಿಗಳು ಸೇರಿಕೊಂಡರೆ ಮಾಗಡಿ ರೋಡಷ್ಟೇ ಏಕೆ ಬೆಂಗಳೂರೇ ನಡುಗಬೇಕು?

ಹೋರಾಟ ಯಶಸ್ವಿಯಾಗಲಿ. ಜಾಣಗೆರೆಯವರ ಹೊಟ್ಟೆಯೂ ತಂಪಾಗಿರಲಿ.

-ಮಲ್ಲಿ

ಬಿಜೆಪಿ ಕಚೇರಿಯಾಗುತ್ತಿರುವ ಕೇಶವಕೃಪಾ !



"ಇದುವರೆಗೆ ಹಿಂಬಾಗಿಲಿನಿಂದ ರಾಜಕಾರಣ ಮಾಡುತ್ತಿದ್ದ ಆರ್‌ಎಸ್‌ಎಸ್ ನಾಯಕರು ಈಗ ಬಹಿರಂಗವಾಗಿಯೇ ರಾಜಕೀಯಕ್ಕಿಳಿದಿದ್ದಾರೆ. ತಮಗೆ ಬೇಕಾದವರನ್ನೇ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ನೇಮಕ ಮಾಡಿಕೊಂಡಿರುವ ಆರ್‌ಎಸ್‌ಎಸ್ ಈಗ ರಾಜ್ಯ ಸರ್ಕಾರವನ್ನೂ ನೇರವಾಗಿಯೇ ನಿಯಂತ್ರಿಸಲಾರಂಭಿಸಿದೆ. ಹೀಗಾಗಿ ರಾಜ್ಯದ ಪ್ರಮುಖ ನಿರ್ಧಾರಗಳನ್ನು ಕೇಶವಕೃಪಾದಲ್ಲಿಯೇ ತೆಗೆದುಕೊಳ್ಳಲಾಗುತ್ತಿದೆ.

ಬಿಜೆಪಿಯ ಭಿನ್ನಮತ ಬಗೆಹರಿಸುವಲ್ಲಿ, ರೇಣುಕಾಚಾರ್ಯರಿಗೆ ಸಚಿವ ಸ್ಥಾನ ನೀಡುವ ವಿಷಯದಲ್ಲಿ ಆರ್‌ಎಸ್‌ಎಸ್ ನಾಯಕರು ತೀರ್ಮಾನ ತೆಗೆದುಕೊಂಡಿದ್ದಾರೆ. ಸರ್ಕಾರದಲ್ಲಿ ಸಣ್ಣ ಸಮಸ್ಯೆ ತಲೆದೋರಿದರೂ ಮುಖ್ಯಮಂತ್ರಿ ಕೇಶವಕೃಪಾಕ್ಕೆ ಓಡೋಡಿ ಹೋಗುತ್ತಿರುವುದು ಅವರೆಷ್ಟು ದುರ್ಬಲರಾಗಿದ್ದಾರೆ ಎಂಬುದನ್ನು ಎತ್ತಿ ತೋರಿಸುತ್ತಿದೆ. ಸರ್ಕಾರದ ಸಮಸ್ಯೆ ಬಗೆಹರಿಸುತ್ತಿರುವ ಆರ್‌ಎಸ್‌ಎಸ್, ಸರ್ಕಾರದ ಆಡಳಿತದಲ್ಲಿ ಕೂಡ ಇಷ್ಟೇ ಸಲೀಸಾಗಿ ಹಸ್ತಕ್ಷೇಪ ನಡೆಸುತ್ತಿದೆ. ಇದು ತೀವ್ರ ಅಪಾಯಕಾರಿ ಬೆಳವಣಿಗೆ. ಅಲ್ಲದೆ, ಪಕ್ಷದ ರಾಜ್ಯಾಧ್ಯಕ್ಷರು ಯಾರಾಗಬೇಕೆಂಬುದನ್ನು ಕೂಡ ರಾಜ್ಯ ಆರ್‌ಎಸ್‌ಎಸ್ ನಾಯಕರೇ ತೀರ್ಮಾನಿಸುವಂತೆ ಕಾಣುತ್ತಿದೆ. ಹೀಗಾಗಿ ಪಕ್ಷದಲ್ಲಿ ಈ ಕುರಿತು ಒಂದಿಷ್ಟು ಪ್ರಜಾತಾಂತ್ರಿಕ ಪ್ರಕ್ರಿಯೆಗಳು ನಡೆಯುತ್ತಿಲ್ಲ, ಮುಂದಿನ ಅಧ್ಯಕ್ಷರು ಯಾರಾಗಬಹುದೆಂಬ ಚರ್ಚೆ ಕೂಡ ನಿಷೇಧಿಸಲ್ಪಟ್ಟಿದೆ!

ಮುಂದಿನ ತಿಂಗಳ ಮೊದಲ ವಾರದಲ್ಲಿ ರಾಜ್ಯಾಧ್ಯಕ್ಷರ ಚುನಾವಣೆ ನಡೆಯಬೇಕಿದೆ. ಪ್ರಜಾತಾಂತ್ರಿಕ ರೀತಿಯಲ್ಲಿ ಅಧ್ಯಕ್ಷರ ಆಯ್ಕೆ ನಡೆಯಲಿದೆ ಎಂದಾಗಿದ್ದಾರೆ ಆಕಾಂಕ್ಷಿಗಳು, ತಮ್ಮ ಪರ ಅಭಿಪ್ರಾಯ ರೂಪಿಸುವಲ್ಲಿ ನಿರತರಾಗಿರುತ್ತಿದ್ದರು. ಪಕ್ಷದ ನಾಯಕರು ಲಾಬಿ ನಡೆಸುತ್ತಿದ್ದರು. ಈಗ ಏನೂ ನಡೆಯುತ್ತಿಲ್ಲ, ಆರ್‌ಎಸ್‌ಎಸ್ ಗುಲಾಮಿ ರಾಜಕಾರಣಿಗಳಿಗೆ ಇನ್ನೆಲ್ಲಿಯ ಸ್ವಾತಂತ್ರ್ಯ? ಬಿಜೆಪಿಯ ಚಟುವಟಿಕೆಗಳಲ್ಲಿ ಆರ್‌ಎಸ್‌ಎಸ್ ಎಷ್ಟಾದರೂ ಹಸ್ತಕ್ಷೇಪ ಮಾಡಿಕೊಳ್ಳಲಿ, ಸರ್ಕಾರದ ಆಡಳಿತದಲ್ಲಿ ಹಸ್ತಕ್ಷೇಪ ನಡೆಸುವುದನ್ನಾದರೂ ಪ್ರಜಾತಂತ್ರ ಪ್ರೇಮಿಗಳು ಖಂಡಿಸಬೇಕಾಗಿದೆ. ●

ಗಿಟಾರ್ ಗೊತ್ತಿಲ್ಲ, ಸೆಲ್ಲೋ ನೋಡಿಲ್ಲ?

ವಾಹ್! ರಾಮನ್....



"ಇಲ್ಲಿರುವ ಚಿತ್ರವನ್ನು ನೋಡಿ. ಈ ಚಿತ್ರದೊಂದಿಗೆ ಮೊನ್ನೆ ಕನ್ನಡಪ್ರಭ ನೀಡಿದ್ದ ಶೀರ್ಷಿಕೆ ಹೀಗಿತ್ತು: 2009ರ ರಸಾಯನಶಾಸ್ತ್ರ ನೊಬೆಲ್ ಪ್ರಶಸ್ತಿ ಪುರಸ್ಕೃತ ವೆಂಕಟರಾಮನ್ ರಾಮಕೃಷ್ಣನ್ ಅವರು ತಮ್ಮ ಪುತ್ರ ರಾಮನ್ ವೆಂಕಟರಾಮನ್ ಗಿಟಾರ್ ನುಡಿಸುತ್ತಿರುವುದನ್ನು ವೀಕ್ಷಿಸುತ್ತಿರುವುದು.'

ಇದನ್ನು ಓದಿ 'ವಿಮರ್ಶಕಿ' ಎಂಬ ಬ್ಲಾಗರ್ ಇಂಟರ್‌ನೆಟ್‌ನಲ್ಲಿ ಹೀಗೆ ಪ್ರತಿಕ್ರಿಯಿಸಿದ್ದಾರೆ: ಕನ್ನಡಪ್ರಭದ ಸಂಪಾದಕೀಯ ವಿಭಾಗದವರು ಗಿಟಾರ್ ಗೊತ್ತಿಲ್ಲ, ಸೆಲ್ಲೋ ನೋಡಿಲ್ಲ ಅಂದಮೇಲೆ ಹೀಗಾಗುತ್ತೆ. ಗಿಟಾರ್ ಹೇಳಿಕೇಳಿ ಬೆಂಗಳೂರಿನ ಅತಿ ಜನಪ್ರಿಯ ವಾದ್ಯ. ಸೆಲ್ಲೋ ಗೊತ್ತಿಲ್ಲದೇ ಇರಬಹುದು, ಆದರೆ ಅದು ಗಿಟಾರ್ ಅಂತೂ ಅಲ್ಲವೇ ಅಲ್ಲ ಎಂದು ನೋಡಿದರೇ ಗೊತ್ತಾಗುತ್ತೆ ಆದರಲ್ಲೂ ಸೆಲ್ಲೋ ವಾದ್ಯವು ನಮ್ಮ ಪಿಟೀಲನ್ನೇ ಹೋಲುತ್ತದೆ. ಇಷ್ಟಾಗಿಯೂ ಕನ್ನಡಪ್ರಭದ ಸಿಬ್ಬಂದಿಯು ಇದನ್ನು ಗಿಟಾರ್ ಎಂದು ಬರೆದಿದ್ದಾರೆ ಎಂದರೆ, ಅವರಿಗೆ ವಾದ್ಯಗಳ ಪ್ರಾಥಮಿಕ ಪರಿಚಯವೇ ಇಲ್ಲವೇನೋ ಅನ್ನಿಸುತ್ತಿದೆ."

ಬೇರೆ ಏನೂ ಬೇಡ, ರಾಜ್‌ಕುಮಾರ್ ಅವರ 'ಲವ್ ಮಿ ಆರ್ ಹೇಟ್ ಮಿ' ಹಾಡನ್ನೋ, ಇತ್ತೀಚಿಗಿನ ಕೆಲ ಕನ್ನಡ ಸಿನಿಮಾಗಳನ್ನೂ ನೋಡಿದ್ದರೂ ಸಾಕಾಗಿತ್ತು ಇದು ಖಂಡಿತವಾಗಿಯೂ ಗಿಟಾರ್ ಅಲ್ಲ ಎಂದು ಅರಿಯಲು. ಹೀಗಿರುವಾಗ ಕನ್ನಡಪ್ರಭದ ಜನ ಅದ್ಯಾವ ಲೋಕದಲ್ಲಿ ವಾಸಿಸುತ್ತಿದ್ದಾರೆ?!

ರೇಣುಕಾಗೆ ಸಚಿವಗಿರಿ!


▶▶▶7

ಇದನ್ನೆಲ್ಲ ನೋಡಿದರೆ ಯಡ್ಡಿ ಸರ್ಕಾರದಲ್ಲಿ ಮಂತ್ರಿ ಆಗಲು ಬೇಕಿರುವ ಅರ್ಹತೆ ದಕ್ಷತೆಯೂ ಅಲ್ಲ, ಹಿರಿತನವೂ ಅಲ್ಲ, ಬದಲಾಗಿ ಅವರಿಗೆ ಕಾಟ ಕೊಡುವ ಶಕ್ತಿ ಎಷ್ಟು ಎಂಬಂತೆ ಕಾಣಿಸುತ್ತದೆ. ಇಲ್ಲವಾದರೆ ಕಳೆದ ಹಲವಾರು ತಿಂಗಳುಗಳಿಂದ ಭಿನ್ನಮತೀಯ ಚಟುವಟಿಕೆಯನ್ನು ನಡೆಸಿ, ಮುಖ್ಯಮಂತ್ರಿಯನ್ನು ಬ್ಲಾಕ್‌ಮೇಲ್ ಮಾಡಿ, ಯಡ್ಡಿಯ ವಿರುದ್ಧ ಸಾರ್ವಜನಿಕವಾಗಿ ಬೈಗುಳಗಳ ಸುರಿಮಳೆಯನ್ನು ಸುರಿಸಿದ ರೇಣುಕಾಚಾರಿ ತರಹದ ಆಸಾಮಿಗಳೂ ಗೂಟದ ಕಾರ್ ಮತ್ತು ಸ್ಥಾನಮಾನ ಪಡೆಯುವುದಾದರೂ ಹೇಗೇ?

ಆದರೆ ಯಡ್ಡಿಯ ದುರಾದೃಷ್ಟ ಎಂತಹದ್ದು ನೋಡಿ. ರೇಣುಕನ ಕಾಟ ತಾಳಲಾರದೆ ಆತನನ್ನು ಮಂತ್ರಿ ಮಾಡಿದರೆ ಈಗ ಅದರ ವಿರುದ್ಧವೂ ಮತ್ತೊಂದು ಭಿನ್ನಮತದ ಅಲೆ ಕಾಣಿಸಿಕೊಂಡಿದೆ. ಇದರ ನೇತೃತ್ವವನ್ನು ಚಿಕ್ಕಮಗಳೂರಿನ ಶಾಸಕ ಸಿ.ಟಿ. ರವಿ ವಹಿಸಿಕೊಂಡಿದ್ದಾನೆ. ಅಷ್ಟೇ ಅಲ್ಲ, ಈಗ ಬೆಂಗಳೂರಿನ ಶಾಸಕರೆಲ್ಲಾ ರವಿಯ ಬೆಂಗಾವಲಿಗೆ ನಿಂತಿದ್ದಾರೆ.

ಮೇಲ್ನೋಟಕ್ಕೆ ಇದು ಹೊಟ್ಟೆಕಿಚ್ಚಿನಿಂದ ಹುಟ್ಟಿಕೊಂಡಿರುವ ಭಿನ್ನಮತದಂತೆ ಕಾಣಿಸಿದರೂ ಇದರ ಆಳದಲ್ಲಿ ಜಾತಿಯ ವಾಸನೆ ಇದೆ. ಅವಕಾಶ ಸಿಕ್ಕಾಗಲೆಲ್ಲ ಯಡ್ಡಿ ತುಂಬಾ ಜಾಣತನದಿಂದ ಲಿಂಗಾಯತರಿಗೇ ಮಣೆ ಹಾಕುತ್ತಿದ್ದಾರೆ ಎಂಬುದೇ ಈ ಭಿನ್ನಮತೀಯರ ಆಪಾದನೆ. "ಶೋಭಾ ಕರಂದ್ಲಾಜೆಯನ್ನು ಸಚಿವ ಸ್ಥಾನದಿಂದ ಇಳಿಸಿದಾಗ ಆ ಸ್ಥಾನವನ್ನು ಒಕ್ಕಲಿಗ ಶಾಸಕರಿಗೆ ನೀಡುವ ಬದಲಿಗೆ ಲಿಂಗಾಯತ ಕೋಮಿನ ಜಗದೀಶ್ ಶೆಟ್ಟರಿಗೆ ನೀಡಿದರು. ಇದಕ್ಕಿಂತ ಮೊದಲು ಆರ್ಯ ಸಮಾಜಕ್ಕೆ ಸೇರಿದ ಕೃಷ್ಣಯ್ಯ ಶೆಟ್ಟಿ ರಾಜೀನಾಮೆ ನೀಡಬೇಕಾದ ಸಂದರ್ಭದಲ್ಲಿಯೂ ಲಿಂಗಾಯತ ಸಮುದಾಯದ ವಿ.ಸೋಮಣ್ಣ ಅವರನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಂಡರೇ ವಿನಃ ಆರ್ಯ ಸಮಾಜದ ಅಥವಾ ಬೇರೆ ಜನಾಂಗದ ಶಾಸಕರು ಯಡ್ಡಿಗೆ ನೆನಪಾಗಲಿಲ್ಲ. ಸೋಮಣ್ಣ, ಜಗದೀಶ್ ಶೆಟ್ಟರ್, ಸಚಿವರಾದ ನಂತರ ಈಗ ರೇಣುಕಾಚಾರ್ಯನಿಗೆ ಸಚಿವ ಸ್ಥಾನ ನೀಡುವ ಮುಖಾಂತರ ಯಡಿಯೂರಪ್ಪ ಸ್ವಜಾತಿ ಪ್ರೇಮವನ್ನು ಮೆರೆಯುತ್ತಿದ್ದಾರೆ' ಎಂಬುದೇ ಒಕ್ಕಲಿಗ ಜನಾಂಗದ ಶಾಸಕರೆಲ್ಲರ ಒಕ್ಕೊರಲಿನ ಅಭಿಪ್ರಾಯವಾಗಿದೆ.

ಹೀಗಾಗಿ ಈ ಬಾರಿಯ ಭಿನ್ನಮತೀಯ ಚಟುವಟಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ಶಾಸಕರೇ ಇದ್ದಾರೆ. ಇವರೆಲ್ಲರಿಗೆ ತೆರೆಮರೆಯಿಂದಲೇ ಸಾರಿಗೆ ಸಚಿವ ಆರ್. ಅಶೋಕ್ ಅವರ ಆಶೀರ್ವಾದವೂ ಇದೆ. ಆ ಕಾರಣಕ್ಕಾಗಿಯೇ



ಅಶೋಕ್ ಗುರುವಾರ ನಡೆದ ಪ್ರಮಾಣ ವಚನ ಸಮಾರಂಭಕ್ಕೆ ಗೈರುಹಾಜರಾದರು ಎಂಬುದು ಕೆಲವರ ಲೆಕ್ಕಾಚಾರ. ಇನ್ನು ಈ ಹೊಸ ಬಂಡಾಯಗಾರರ ಗುಂಪಿನ ನಾಯಕನಾಗಿ ಸಿ.ಟಿ. ರವಿ ಓಡಾಡುತ್ತಿರುವುದನ್ನು ನೋಡಿದರೆ ಮುಂದಿನ ಸಂಪುಟ ವಿಸ್ತರಣೆಯಲ್ಲಿ ಆತನಿಗೂ ಮಂತ್ರಿ ಸ್ಥಾನ ಸಿಕ್ಕಿದರೆ ಅಚ್ಚರಿ ಇಲ್ಲ!

ಭಿನ್ನಮತೀಯರ ಒತ್ತಡಕ್ಕೆ ಮಣಿದು ತಮ್ಮ ಸಂಪುಟವನ್ನು ವಿಸ್ತರಿಸುತ್ತಿರುವ ಯಡ್ಡಿ ತಮ್ಮ ಪಕ್ಷದೊಳಗೆ ಸಾಮಾಜಿಕ ನ್ಯಾಯವನ್ನು ಪಾಲಿಸುವಲ್ಲಿ ವಿಫಲರಾಗಿ ಹೊಸ ಸಮಸ್ಯೆಗಳನ್ನು ತಮಗೆ ತಾವೇ ಹುಟ್ಟುಹಾಕಿಕೊಳ್ಳುತ್ತಿದ್ದಾರೆ. ಭಿನ್ನಮತೀಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬದಲಿಗೆ ಅವರಿಗೆ ಸಚಿವ ಪದವಿ ಪ್ರಾಪ್ತಿಸುವುದು ಯಾವ ಮುಖ್ಯಮಂತ್ರಿಗೂ ಶೋಭೆ ತರುವಂತಹದ್ದಲ್ಲ.

ಇದೆಲ್ಲ ಯಡ್ಡಿಗೆ ಅರ್ಥವಾಗುವುದೂ ಇಲ್ಲ.

-ಕೆ. ಸದಾಶಿವ ಶೆಣೈ

ಭರವಸೆ ಹುಟ್ಟಿಸಿರುವ ರಾಜ್ಯ ರೈತ ಸಂಘದ ರಾಜಿರಹಿತ ಹೋರಾಟ!

ಬಹಳ ವರ್ಷಗಳ ನಂತರ ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಮರುಜೀವ ಬಂದಿದೆ. ಚಾಮರಾಜನಗರದಲ್ಲಿ ರೈತರ ಮೇಲೆ ಲಾಠಿ ಚಾರ್ಜ್ ಮಾಡಿರುವ ಘಟನೆಯನ್ನು ವಿರೋಧಿಸಿ ಬೆಂಗಳೂರಿಗೆ ರೈತರ ಪಾದಯಾತ್ರೆ ಸಂಘಟಿಸುವ ಮೂಲಕ ಅದು ಬೂದಿಯಿಂದ ಮತ್ತೆ ಎದ್ದು ಬರುವ ಸೂಚನೆ ಕೊಟ್ಟಿದೆ. ರೈತರು ವಿಧಾನಸೌಧ ತಲುಪಿಬಿಟ್ಟರೆ ಬಹಳ ಕಷ್ಟವಾದೀತು ಎಂದು ಬೆದರಿದ ಮುಖ್ಯಮಂತ್ರಿ ಯಡಿಯೂರಪ್ಪ ರೈತರಿನ್ನೂ ಬೆಂಗಳೂರಿನ ಹೊರವಲಯದ ಬಿಡದಿ ಬಳಿಯಿದ್ದಾಗಲೇ ರಾತ್ರೋರಾತ್ರಿ ಅವರಿದ್ದಲ್ಲಿಗೆ ಹೋಗಿ ಸಮಸ್ಯೆಯನ್ನು ಆಲಿಸುವ 'ಜಾಣತನ' ತೋರಿದ್ದಾರೆ. ಅಷ್ಟೇ ಅಲ್ಲ, ರೈತರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಾಗಿ, ರೈತರ ಮೇಲೆ ಲಾಠಿಚಾರ್ಜ್‌ಗೆ ಕಾರಣರಾದ ಚಾಮರಾಜನಗರದ ಎಸ್ಪಿ ಮತ್ತು ಡಿಸಿಗಳನ್ನು ವರ್ಗಾಯಿಸುವುದಾಗಿ ಭರವಸೆ ಕೊಟ್ಟಿದ್ದಾರೆ.

ಏನೇ ಆದರೂ ರೈತ ಸಂಘ ಮತ್ತೆ ಸಕ್ರಿಯವಾಗುತ್ತಿರುವುದು ಕರ್ನಾಟಕದ ರೈತರ ಮಟ್ಟಿಗೆ ಒಂದು ಶುಭವಾರ್ತೆ. ಹಗಲು-ರಾತ್ರಿ ಬೆವರು ಹರಿಸಿ ಇಡೀ ನಾಡಿಗೆ ಅನ್ನ ನೀಡುವ ಅನ್ನದಾತರು ಬಹಳ ಸಂಕಷ್ಟದಲ್ಲಿದ್ದಾರೆ. ಅವರು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ, ಬೆಳೆ ಬೆಳೆಯುವುದಕ್ಕಾಗಿ ಮಾಡಿದ ಸಾಲ ಹೆಗಲೇರಿ ಕುಳಿತಿದೆ. ಸಾಲಗಾರರ ಬಾಧೆ ತಾಳಲಾರದೆ ನೇಣಿಗೆ ಕೊರಳೊಡ್ಡುವ ಹೀನಾಯ ಪರಿಸ್ಥಿತಿಯಲ್ಲಿ ಅವರಿದ್ದಾರೆ. ಅವರ ನೋವಿಗೆ ಮಿಡಿಯಲಾರದ ಕಟುಹೃದಯಿ ಸರ್ಕಾರಗಳು ನಮ್ಮಲ್ಲಿವೆ. ಕನಿಷ್ಠ ಬೀಜ ಗೊಬ್ಬರ ಕೇಳಿದರೆ ಗುಂಡೇಟು ಕೊಡುವ ನಿರ್ದಯಿಗಳು ಅಧಿಕಾರದಲ್ಲಿದ್ದಾರೆ.

ಇಂಥ ಸಂಕಷ್ಟಮಯ ಪರಿಸ್ಥಿತಿಯಲ್ಲಿ ರೈತರಿಗೆ ತಮ್ಮದೇ ಆದ ಒಂದು ಬಲಿಷ್ಠ ಸಂಘಟನೆಯಿದ್ದರೆ, ಅವರಿಗೆ ನೇತೃತ್ವ ಕೊಡಬಲ್ಲ ಸಮರ್ಥ ನಾಯಕರಿದ್ದರೆ ಸರ್ಕಾರವನ್ನು ಅಲುಗಾಡಿಸಿ ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳುವುದು ಕಷ್ಟವೇನಲ್ಲ. ನಂಜುಂಡಸ್ವಾಮಿ, ಸುಂದರೇಶ್‌ರಂಥ ಹಿರಿಯ ನೇತಾರರ ನೇತೃತ್ವದಲ್ಲಿ ಇದೇ ರೈತ ಸಂಘ ಲಕ್ಷಾಂತರ ಸಂಖ್ಯೆಯಲ್ಲಿ ರೈತರನ್ನು ಸಂಘಟಿಸಿ ಸರ್ಕಾರವನ್ನು ಅಲುಗಾಡಿಸಿದ ಶ್ರೀಮಂತ ಅನುಭವ ನಮ್ಮ ಕಣ್ಣಮುಂದಿದೆ. ಅಂಥ ನಾಯಕರಿರುವ ತನಕ ನಿಜಕ್ಕೂ ನಾಡಿನ ರೈತರಿಗೆ ರೈತ ಸಂಘವೊಂದು ಭರವಸೆಯ ಆಶಾಕಿರಣವಾಗಿಯೇ ಇತ್ತು. ಅವರೆಲ್ಲರ ನಿರ್ಗಮನದೊಂದಿಗೆ ಆ ಭರವಸೆಯೂ, ಬೆಳಕೂ ನಂದಿಹೋಗಿತ್ತು.

ಅಂತೆಯೇ ಆಳುವ ಸರ್ಕಾರಗಳಿಗೆ ನಾಯಕರಿಲ್ಲದ ರೈತರ ಜೀವ ಹಿಂಡುವುದಕ್ಕೂ ಅವಕಾಶ ಮಾಡಿಕೊಟ್ಟಂತಾಗಿತ್ತು.

ಇದು ಕೇವಲ ರೈತ ಸಂಘ ಎದುರಿಸುತ್ತಿದ್ದ ಪರಿಸ್ಥಿತಿ ಮಾತ್ರವೇನಲ್ಲ, ದಲಿತ ಹೋರಾಟ, ಕನ್ನಡ ಹೋರಾಟ, ಬಂಡಾಯ ಸಾಹಿತ್ಯ ಚಳವಳಿ ಎಲ್ಲಕ್ಕೂ ಗ್ರಹಣ ಹಿಡಿದ ಕಾಲಘಟ್ಟವಿದು. ಆಳುವ ಸರ್ಕಾರವನ್ನು ಜನವಿರೋಧಿ ಎಂದು ಸ್ಪಷ್ಟವಾಗಿ ಗ್ರಹಿಸಿದಷ್ಟು ಕಾಲ ಈ ಎಲ್ಲಾ ಚಳವಳಿಗಳಿಗೂ ಕಾವಿತ್ತು ಕಸುವಿತ್ತು. ಅದಕ್ಕೆ ತಕ್ಕ ಹಾಗೆ ಚಳವಳಿಗಳೂ ಮತ್ತು ನಾಯಕರೂ ಜನರ ಮಧ್ಯೆಯೇ ಇದ್ದುಕೊಂಡು ಶಕ್ತಿ ತುಂಬುತ್ತಿದ್ದರು. ಆದರೆ ರಾಮಕೃಷ್ಣ ಹೆಗಡೆ ಕಾಲದಿಂದ ಪ್ರಾರಂಭವಾದ ಚಳವಳಿಗಳ ನಾಯಕತ್ವದ ಭ್ರಷ್ಟೀಕರಣ 91ರ ನಂತರ ರಭಸದಿಂದಲೇ ಸಾಗತೊಡಗಿತು. ಇದರಿಂದ ರೈತ ಸಂಘವೂ ಹೊರತಾಗಿರಲಿಲ್ಲ.



ಬಿಡದಿಗೆ ಓಡೋಡಿ ಬಂದ ಭೂಪ!

ಚಳವಳಿ ರಾಜಕಾರಣ ಮುಂದಿನ ಹಂತದ ಸಿದ್ಧತೆಯನ್ನು ಬೇಡುತ್ತಿರುವ ಸಮಯದಲ್ಲೇ ಚುನಾವಣಾ ರಾಜಕಾರಣದ ಬೆನ್ನುಹತ್ತಿದ್ದು ಸಹ ಈ ಎಲ್ಲಾ ಚಳವಳಿಗಳ ಅತಿದೊಡ್ಡ ಲೋಪವಾಯಿತೆಂಬುದು ಈಗ ಹಿಂತಿರುಗಿ ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಜಾಗತೀಕರಣದ ಈ ಕಾಲಘಟ್ಟದಲ್ಲಿ ಆಳುವ ಸರ್ಕಾರಗಳು ಜನರನ್ನು ಕಾಯುವ ಬದಲು ದೊಡ್ಡ ದೊಡ್ಡ ಕಾರ್ಪೊರೇಟ್‌ಗಳ ಏಜೆಂಟ್‌ಗಳಾತ್ತಿವೆ ಎಂಬುದನ್ನು ಎಲ್ಲಾ ಚಳವಳಿ ನಿರತರ ಅನುಭವಕ್ಕೆ ಮತ್ತು ವಿವೇಕಕ್ಕೆ ಬರತೊಡಗಿದ್ದರೂ ಕರ್ನಾಟಕದ ಬಹುಪಾಲು ಚಳವಳಿಗಳು ಮತ್ತು ಬುದ್ಧಿಜೀವಿಗಳು ಅದೇ ಸಮಯದಲ್ಲಿ ಆಳುವ ಸರ್ಕಾರವನ್ನು ಜನರ ಮಿತ್ರ ಎಂದು ಭಾವಿಸತೊಡಗಿದ್ದು ಚಳವಳಿಗಳ ಹಿನ್ನಡೆಗೆ ಬಹುದೊಡ್ಡ ಕೊಡುಗೆ ನೀಡಿತು. ಚಳವಳಿಗಳು ಬಲಹೀನವಾಗುತ್ತಿದ್ದ ಸಂದರ್ಭದಲ್ಲಿ ತಮ್ಮ ಮೇಲೆ ಭರವಸೆ ಕಡಿಮೆಯಾಗುತ್ತಾ ಆಳುವ ಕಾಂಗ್ರೆಸ್‌ನಲ್ಲಿರಬಹುದಾದ ಸಮಾಜವಾದಿಗಳ ಮೇಲೆ, ಜೆಡಿಎಸ್ ಮೇಲೆ ನಿರೀಕ್ಷೆ ಹೆಚ್ಚಾಗತೊಡಗಿತ್ತು. ಹೀಗೆ ಶತ್ರುಗಳ ಪಾಳೆಯದಲ್ಲಿ ಸ್ನೇಹಿತರನ್ನು ಹುಡುಕತೊಡಗಿದ್ದೂ ಸಹ ರೈತ ಸಂಘದ, ಬಂಡಾಯ ಸಂಘಟನೆಯ, ದಲಿತ ಚಳವಳಿಗಳ ಹಿನ್ನಡೆಗೆ ಕಾರಣವಾಯಿತು.

ಆದರೆ ರೈತ ಸಂಘದಲ್ಲಿದ್ದ ಹಲವು ಪ್ರಾಮಾಣಿಕ ಶಕ್ತಿಗಳು ಇದರ ನಡುವೆಯೂ ತಮ್ಮ ತಮ್ಮ ನೆಲೆಯಲ್ಲಿ ತಮ್ಮ ತಮ್ಮ ಮಟ್ಟದಲ್ಲಿ ಚಳವಳಿಯ ಅಂತಃಸತ್ವವನ್ನು ಉಳಿಸಿಕೊಳ್ಳಲು ಸತತವಾದ ಪ್ರಯತ್ನವನ್ನು ಮಾಡುತ್ತಲೇ ಇದ್ದರು. ಆಗಾಗ ಅಲ್ಲಲ್ಲಿ ರೈತ ಸಂಘವು ಕಾರ್ಯಕರ್ತರ ತರಬೇತಿ ಶಿಬಿರಗಳನ್ನು ನಡೆಸುವುದು, ಅಲ್ಲಲ್ಲಿ ಇತರ ಪ್ರಗತಿಪರ ಸಂಘಟನೆಗಳ ಜೊತೆ ಸೇರಿಕೊಂಡು ಸ್ಥಳೀಯ ಮಟ್ಟದ ಹೋರಾಟಗಳನ್ನು ನಡೆಸುವುದು ನಡೆಯುತ್ತಿದ್ದರೂ ಅದಕ್ಕೊಂದು ಬೀಸು ಬಂದಿರಲಿಲ್ಲ. ಆದರೆ ಹೆಚ್ಚುತ್ತಲೇ ಹೋದ ರೈತಾಪಿಯ ಸಮಸ್ಯೆ, ವಿದ್ಯುತ್ ಕೊರತೆ, ನೀರಿನ ಅಭಾವ, ಬೆಳೆ ಹಾನಿ, ಬೆಲೆ ಸಮಸ್ಯೆ, ರೈತರ ಆತ್ಮಹತ್ಯೆ ಇನ್ನಿತ್ಯಾದಿಗಳು ರೈತ ಸಂಘ ಯಾವುದಾದರೂ ಒಂದು ರೂಪದಲ್ಲಿ ಮರುಜೀವ ಪಡೆಯಲೇ ಬೇಕಾದ ಸಂದರ್ಭವನ್ನು ಸೃಷ್ಟಿಸಿದವು.

ಬಿಜೆಪಿ ಸರ್ಕಾರ ಬಂದಾಗಿನಿಂದ ಅನುಸರಿಸುತ್ತಿರುವ ರೈತ ವಿರೋಧಿ ನೀತಿಗಳ ವಿರುದ್ಧ ರೈತ ಸಂಘಕ್ಕೆ ನಾಯಕತ್ವ ಇರಲಿ ಇಲ್ಲದಿರಲಿ ರೈತರು ಮಾತ್ರ ಬೀದಿಗೆ ಬಿದ್ದು ಹೋರಾಡಲೇ ಬೇಕಾದ ಅನಿವಾರ್ಯ ಮಾಡಿತು. ಹೀಗಾಗಿಯೇ ರಾಜ್ಯದ ಹಲವು ಕಡೆಗಳಲ್ಲಿ ಹಸಿರು ಶಾಲುಗಳು ಮೆರವಣಿಗೆ ಹೊರಟಿವೆ. ಮೊನ್ನೆ ಚಾಮರಾಜನಗರದಲ್ಲಿ ರೈತರ ಮೇಲೆ ವಿನಾಕಾರಣ ನಡೆದ ಪೊಲೀಸ್ ಅತ್ಯಾಚಾರ ಮತ್ತೆ ರೈತ ಸಂಘದಲ್ಲಿ ಹೊಸ ಚಲನೆಯನ್ನು ಸೃಷ್ಟಿಸಿದಂತಿದೆ. ಸಂದರ್ಭವನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕ ಹೋರಾಟದ ದಿಕ್ಕನ್ನು, ಸಂಘಟನಾ ಶಕ್ತಿಯನ್ನು ರೈತ ಸಂಘದ ಕೆಲ ನಾಯಕರು ಒದಗಿಸಿದ್ದಾರೆ. ಹೀಗಾಗಿಯೇ ಹಲವು ವರ್ಷಗಳ ನಂತರ ಮೊದಲ ಬಾರಿಗೆ ರಾಜ್ಯದ ಮೂಲೆಯಲ್ಲಿ ರೈತರ ಮೇಲೆ ನಡೆದ ಪೊಲೀಸ್ ಅತ್ಯಾಚಾರದ ವಿರುದ್ಧ ರೈತಾಪಿಯೇ ಒಟ್ಟಾಗಿ ಎದ್ದು ನಿಂತು ಪ್ರತಿಭಟಿಸುತ್ತಿವೆ.

ಈ ಹಿನ್ನೆಲೆಯಲ್ಲಿ ದಾವಣಗೆರೆಯಲ್ಲಿ ಅಭೂತಪೂರ್ವವಾದ ಬಂದ್ ಆಗಿದೆ. ಚಾಮರಾಜನಗರದಲ್ಲಿ ರೈತ ಸಂಘ ರಾಜಿರಹಿತವಾಗಿ ಹೋರಾಟ ಮುಂದುವರೆಸಿದೆ. ಅದಕ್ಕೆ ರಾಜ್ಯದ ಹಲವು ಪ್ರಗತಿಪರ ಸಂಘಟನೆಗಳು ಬೆಂಬಲ ಸೂಚಿಸಿವೆ. ಅವರ ಪಾದಯಾತ್ರೆ ಬೆಂಗಳೂರಿಗೆ ಪ್ರವೇಶಿಸುವ ಸಂದರ್ಭದಲ್ಲಿ ಬೆಂಗಳೂರಿನ ಹಲವು ಪ್ರಗತಿಪರ ಸಂಘಟನೆಗಳು ಅವರ ಜೊತೆ ಕೂಡಿಕೊಂಡು ಸೌಹಾರ್ದತೆ ವ್ಯಕ್ತಪಡಿಸಿವೆ.

ಈ ಎಲ್ಲಾ ಕಾರಣಕ್ಕಾಗಿಯೇ ರೈತರನ್ನು ಕೊಂದ ಮುಖ್ಯಮಂತ್ರಿ ಯಡಿಯೂರಪ್ಪನೇ ನಗರದ ಹೊರವಲಯದಲ್ಲಿ ರೈತ ಸಂಘದ ಪಾದಯಾತ್ರೆ ಹೋರಾಟಗಾರರನ್ನು ಭೇಟಿಯಾಗಿ ಸರ್ಕಾರದ ಪರವಾಗಿ ವಿಷಾದವನ್ನು ವ್ಯಕ್ತಪಡಿಸಿ ರೈತರ ಎಲ್ಲಾ ಬೇಡಿಕೆಗಳನ್ನೂ ಈಡೇರಿಸುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಬಿಜೆಪಿ ಸರ್ಕಾರದ ದೃಷ್ಟಿಯಿಂದ ನೋಡಿದರೆ ತಾವು ರೈತಪರ ಎಂದು ಬಿಂಬಿಸಿಕೊಳ್ಳುವ ಚಾಣಾಕ್ಷ ತಂತ್ರವಿದು. ರೈತ ಸಂಘದ ದೃಷ್ಟಿಯಿಂದ ನೋಡಿದರೆ ಇದೊಂದು ಅಗ್ನಿಪರೀಕ್ಷೆ.

ಏಕೆಂದರೆ ರೈತ ಸಂಘ ಇಟ್ಟಿರುವ ಬೇಡಿಕೆಗಳಲ್ಲಿ ಡಿಸಿ, ಎಸ್ಪಿ ವರ್ಗಾವಣೆ ಮತ್ತು ಕೇಸುಗಳನ್ನು ಹಿಂಪಡೆಯುವಂಥ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬಹುದು. ಆದರೆ ರೈತರ ಅಸಲಿ ಸಮಸ್ಯೆಗಳಾದ ನೀರು, ವಿದ್ಯುತ್, ಬೆಳೆ ಹಾನಿ, ಸಾಲ ಇನ್ನಿತ್ಯಾದಿ ಬೇಡಿಕೆಗಳ ಬಗ್ಗೆ ಸರ್ಕಾರ ಹುಸಿ ಭರವಸೆ ಮತ್ತು ಮೊಸಳೆ ಕಣ್ಣೀರನ್ನು ಮಾತ್ರ ಸುರಿಸುತ್ತಿದೆ.

ಅಧಿಕಾರಿಗಳ ವರ್ಗಾವಣೆಯ ವಿಜಯದ ಹಿನ್ನೆಲೆಯಲ್ಲಿ ರೈತ ಸಂಘ ಬಿಜೆಪಿ ಸರ್ಕಾರದ ಈ ಅಸಲಿ ರೈತ ವಿರೋಧಿ ಚಹರೆಯನ್ನು ಮರೆಯಬಾರದು. ಹೀಗಾಗಿಯೇ ರೈತ ಚಳವಳಿ ಮತ್ತು ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸಿ ರಾಜಿರಹಿತ ಹೋರಾಟ ಮಾಡುವ ಮಹೋನ್ನತ ಜವಾಬ್ದಾರಿ ರೈತ ನಾಯಕರ ಮೇಲಿದೆ. ಆಳುವ ಸರ್ಕಾರಗಳ ಅಸಲಿ ಚಹರೆಯನ್ನು ಅರ್ಥಮಾಡಿಕೊಂಡು ಅವರ ಮೊಸಳೆ ಕಣ್ಣೀರಿಗೆ, ಹುಸಿ ಭರವಸೆಗಳಿಗೆ, ಪ್ರಲೋಭನೆಗಳಿಗೆ, ಮಾಧ್ಯಮಗಳು ನೀಡುವ ಪ್ರಚಾರದ ಹುಸಿ ಭ್ರಾಂತಿಗಳಿಗೆ ಬಲಿಯಾಗದೆ ಚಳವಳಿ ಬೇಡುವ ಸಿದ್ಧತೆಯನ್ನು ರೈತ ಸಂಘದ ನಾಯಕತ್ವ ಈ ಬಾರಿ ಪ್ರದರ್ಶಿಸಲಿ.

ಒಂದು ಸಣ್ಣ ಹೋರಾಟ ಇಷ್ಟು ಭರವಸೆಯನ್ನು ಹುಟ್ಟಿಹಾಕುವ ಪರಿಸ್ಥಿತಿ ಇಂದು ಕರ್ನಾಟಕದಲ್ಲಿದೆ ಎಂದರೆ ರೈತ ನಾಯಕರ ಮೇಲಿರುವ ಜವಾಬ್ದಾರಿ ಎಷ್ಟೆಂಬುದು ಅರ್ಥವಾಗುತ್ತದೆ. ಈ ಬಾರಿ ಅದು ಹುಸಿಯಾಗದಿರಲಿ ಎಂಬುದೇ ನಮ್ಮ ಹಾರೈಕೆ! ●

ಹಿಂಗಂತಲ್ಬೆ, ಖರೆಯನು?

"ಅಲ್ಲಲೇ, ನಿನ್ನೆ ಅಂವಾ ಪಂಚಾಯ್ತಿ ಮೆಂಬರು ರಾಮನಗೌಡ ಕುರುಬರ ಸಣ್ಣವ್ವನ್ನ ಹಿಡಕೊಳ್ಳಾಕ ಹೋಗಿದ್ನಂತ?"

"ಹೌದ್ಬೇ ಯತ್ತಿ, ಸಣ್ಣವ್ವ ಗಟ್ಟಿ ಹೆಣ್ಮಗ್ಳು ಅಂತಾ ಒಳ್ಳೆದಾತು. ಬಡಿಗಿ ತಗೊಂಡು ಮುಕ್ಳಿ ಮ್ಯಾಲ ನಾಕು ಬಾರ್‍ಸಿ ಕಳಿಸ್ಯಾಳ...

"ಎಂತೆಂತಾ ಮಂದಿನ್ನ ಮೆಂಬರು ಮಾಡಾಕ ಹತ್ತೀವಿ ನೋಡು ನಾವು..."

"ಆದೂ ಬಡ್ಬೇ, ಟಿವಿಯೊಳ್ಗ ಬಂದು ಹೆಂಡ ಕುಡ್ದ ಮಂಗ್ಯನಂಗ ಆಡ್ತಾನಲ್ಲ ಅಂವಾ ರೇಣುಕಾ, ಅವ್ನು ಮಿನಿಸ್ಟ್ರು ಆದ್ನಂತೆ... ಇನ್ ನಮ್ ಮೆಂಬರು ರಾಮನಗೌಡಂದು ಯಾವ ಮಹಾ ಬಿಡು...."

"ಆ ರೇಣ್ಯಾನೂ ರಾಮನಗೌಡ್ನ ಕುಲದವ್ನ. ಹಿಂದ್ಕ ಒಬ್ಬಾಕಿ ನರ್ಸಣ್ಣ ಹಿಡಕೊಂಡು ಗಲ್ಲಕ ಗಲ್ಲಾ ಕೊಟ್ಟು ಫೋಟೊ ಬ್ಯಾರೆ ತೆಗೆಸಿಗೊಂಡಾಂವ. ಪಾಪ ಆ ನರ್ಸು ಹಲ್ಕಟ್ ರೇಣುಕ್ನ ಹಿಂದ್ಬಿದ್ದು ಬದ್ಕು ಮೂರೆಬಟ್ಟೆ ಮಾಡಿಕೊಂಡ್ಳು..."

"ಅದಿರ್‍ಲಿ ಅತ್ತೆವ್ವ... ಮಂದಿ ಅಂತವನ್ನ ಮತ್ತ ಗೆಲ್ಸಿದ್ರು ನೋಡು...ಇದಕ್ಕೇನಂತಿ?"

"ಕಂಡವ್ರ ಹೆಣ್ಮಕ್ಕಳನ್ನ ತೆಕ್ಕಿ ಬಡಿಯೋದು ಈಗ ಫ್ಯಾಶನ್ ಆಗೆಬಿಟ್ಟೈತಿ ಅಂತಾ ಕಾಣುತ್ತ.. ಇಲ್ಲಂದ್ರ ಆ ಬಾಡ್ಯಾ ರೇಣ್ಯಾ ಗೆಲ್ಲಾಕ ಆಗ್ತಿತ್ತೇನು?"

"ಅಂವಾ ಬಾಳಾ ಮೊಂಡ್ ಧೈರ್ಯದಾವ ಅದಾನ್ಬೇ. ಟಿವಿಯೊಳ್ಗ ಮಾತಾಡಾಗೂ ಕುಡ್ಕೊಂಡು ಬಂದಿರ್‍ತಾನ... ಪಾಪ ಆ ಲಗ್ನ ಆಗ್ದ ಹೆಣ್ಮಗಳು ಶೋಭವ್ವನ ಮ್ಯಾಲ ಹೆಂಗೆಂಗರ ಮಾತಾಡಿ ಬಿಟ್ಟನವ..."

"ಹೆಂಡ್ತಿ ಸತ್ತ ಯಡ್ಯೂರಪ್ಪಗ ಸಮಾಧಾನ ಹೇಳಿದ್ದ ಶೋಭವ್ವನ ತಪ್ಪಾತು ನೋಡು... ಆಕಿಯೇನ್ ಈ ರೇಣ್ಯಾನಂಗ ಎಲ್ಲಾನೂ ಮಂದಿಯೊಳ್ಗ ಮಾಡಿರ್‍ಲಿಲ್ಲ..."

"ಕೊನೆಗೂ ಆಕಿನ್ನ ಬಲಿ ತಗೊಂಡಬಿಟ್ಟ. ಅಂವಾ ಈಗ ಮಿನಿಸ್ಟ್ರು ಅಂತಾ. ಮಹಿಳಾ ಕಲ್ಯಾಣ ಖಾತೇನ ಬೇಕು ಅಂತಾನಂತ"

"ಅಯ್ಯ ಯವ್ವ... ಹಂಗೇನರ ಆದ್ರ ಪಾಪ, ಈ ಅಂಗ್ನವಾಡಿ ಟೀಚರು, ಆಯಿಗೋಳು ಸರ್ಕಾರಿ ದವಾಖಾನಿ ನರ್ಸ್‌ಗಳು ಕೆಲ್ಸ ಮಾಡೋದರ ಹೆಂಗ? ಆ ಹಲ್ಕಟ್ ರೇಣುಕ ಕಣ್ ಹಾಕಿಬಿಟ್ರ ಬಿಡದs ಇಲ್ಲಂತ?"

"ಅಂಗನ್ವಾಡಿ ಟೀಚರು, ಆಯಿಗಳು, ನರ್ಸುಗಳು ನಮ್ಮ ಕುರುಬರ ಸಣ್ಣವ್ವನಂಗ ಗಟ್ಟಿಗಿತ್ತಿ ಅದಾರ ಬಿಡು. ರಾಮನಗೌಡಂಗ ಬಿದ್ದಂಗ ರೇಣುಕಂಗೂ ಕಡಬು ಬೀಳ್ತಾವು ಬಿಡು..."

"ಆದ್ರೂ ನೀ ಅನ್ನೇ, ಕುಡಿಯೋರು, ಇಸ್ಪೀಟು ಆಡೋರು, ಹೆಂಗಸ್ರು ಮಾಡೋರು, ಕಂಡವರನ್ನ ತೆಕ್ಕಿ ಬಡಿಯೋರು ಎಂಎಲ್‌ಎಗಳಾದ್ರ ಇಲ್ಲಿ ಹೆಣ್ಮಕ್ಕಳು ಬದಕೋದ ತ್ರಾಸಾಗುತ್ತs"

"ಯತ್ತಿ ನಾ ಒಂದು ಮಾತ್ ಹೇಳ್ಲೇನು? ಮುಂದಿನ ಸಲ ನೀ ಪಂಚಾತಿ ಇಲೆಕ್ಷನ್ನಿಗೆ ನಿಂತು ಬಿಡ್ಬೇ"

"ಅಯ್ಯ ಬೋಳಿ, ನಂಗ ಮಾಡಾಕ ಏನೂ ಕೆಲ್ಸ ಇಲ್ಲಂತ ತಿಳಿದಿಯೇನು? ಹೋಗಿಹೋಗಿ ತಿಪ್ಪಿಗುಂಡಿಗೆ ಬೀಳು ಅಂತಿಯಲ್ಲ? ಬಡಬಡ ಸೇಂಗಾ ಕೀಳು... ನಿನ್ ಮಾವ ಬರಾ ಹೊತ್ತಾತು. ಇಸ್ಪೀಟು ಆಡಿ ಉಣ್ಣಾಕ ಹಾಜರಾಗಾದು ಬಿಟ್ರ ಇಂವಂಗ ಬ್ಯಾರೇ ಕೆಲ್ಸ ಇಲ್ಲ, ನಾ ಮಾಡಿ ಮಾಡಿ ಸಾಯೋದಾತ್ ನೋಡು..."

"ಬಡ್ಬೇ ಯಾಕ್ ಚಿಂತಿ ಮಾಡ್ತಿದಿ? ಬಂಗಾರ್‍ದಂತಹ ಮಕ್ಕು ಅದಾವ, ಇನ್ನೆರಡು ವರ್ಷದಾಗ ನಿನ್ಮಗಳು ಶಾರವ್ವ ಇಂಜಿನಿರ್ ಆಗ್ತಾಳ... ಆಕಿ ಜೊತಿಗೆ ಬೆಂಗ್ಳೂರಿಗೆ ಹೋಗಿ ಬಿಡು...."

"ಆದ್ರೂ ಏನ್ ಅನ್ನೇ... ನಂಗ ಈ ಊರು, ಹೊಲ ಬಿಟ್ಟು ಹೋದ್ರ ಜೀವ ಹೋದಂಗ ಆಗುತ್ತದಾ..."

* * * *

ವಾಯ್-ಕುಗಳು

ತೃತೀಯ ರಾಷ್ಟ್ರಗಳಿಗೆ
ಕಪ್ಪು ಸೂರ್ಯ
ತೋರಿಸಿದ... ಕೈಗೆ ಸಿಗದ
ಆಕಾಶ ಚಂದಿರನ...
(ಆಕಾಶ ಚಂದಿರ=ಬಾನ್ ಕಿ ಮೂನ್)

* * * *

ಚಂದಿರನ ಕಡೆ
ಹಾರೋರಿಗೆ
ಭೂತಾಯಿಯ ಎದೆಯೇ
ಸ್ಪ್ರಿಂಗ್ ಬೋರ್ಡ್

* * * *

ಕೋಪನ್‌ಹೇಗನ್‌ನಲ್ಲಿ
ಅಮಾವಾಸ್ಯೆ ಚಂದಿರನೂ
ಕಂಡನಂತೆ, ಹೊಳೆದನಂತೆ...

-ಮುನ್ನಿ



ಮನೆ ಕೊಡೆ ಅಂದ

ಮಹೇಂದರ್ ಧಮಕಿ



ಶ್ರುತಿ ಬದುಕಿನುದ್ದಕ್ಕೂ ಬಣ್ಣ ಹಚ್ಚಿ ದುಡಿದ ಆಸ್ತಿ ಪೂರ್ತಿ ಮಹೇಂದರ್‌ನ ರಾಜಕೀಯದ ತೆವಲಿಗಾಗಿ ಕರಗಿಹೋಗಿದೆ. ಈಗ ಆಕೆಯೇ ಕಟ್ಟಿಸಿದ ಮನೆಯೂ ಬೇಕೆಂದು ಮಹೇಂದರ್ ಪೀಡಿಸುತ್ತಿದ್ದಾನೆ.....

● ರಾ. ಸೋಮನಾಥ್

ಶ್ರುತಿಯಂಥ ಹೆಣ್ಣುಮಗಳು ಏಕೆ ಗಂಡನನ್ನು ಬಿಟ್ಟಳು?

ಪ್ರಶ್ನೆಯಾಗೇ ಉಳಿದ ಇಂಥದ್ದೊಂದು ಪ್ರಶ್ನೆಗೆ ಬಹುಶಃ ಕಾಲವೇ ಉತ್ತರ ನೀಡಬೇಕಿತ್ತೇನೊ. ಸತ್ಯಕ್ಕೆ ಅನೇಕ ಮುಖಗಳಿರುತ್ತವೆ. ಕೈಹಿಡಿದ ಪತಿ ಮಹೇಂದರ್ ಬಗ್ಗೆ ಶ್ರುತಿಯಂಥ ಸಭ್ಯ ರೂಪಿನ ನಟಿಯೊಬ್ಬಳಿಗೆ ಏಕೆ ಅಸಹ್ಯ ಹುಟ್ಟಿತು? ಅದು ಹೇಗೆ ಚಕ್ರವರ್ತಿ ಅಲಿಯಾಸ್ ಚಂದ್ರಚೂಡ್‌ನಂಥ ಸೋಕಾಲ್ಡ್ ಡೈರೆಕ್ಟರ್ ಮತ್ತು ಮಾಜಿ ಪತ್ರಕರ್ತನೊಬ್ಬನ ಕೈಹಿಡಿಯುವಂತೆ ಆಕೆಯನ್ನು ಪ್ರೇರೇಪಿಸಿತು? ನಿಜಕ್ಕೂ ಮಹೇಂದರ್ ಪುಣ್ಯಕೋಟಿಯಂಥವನೆ? ಶ್ರುತಿ ಮಾತ್ರ ಕೆಟ್ಟವಳೆ?

ಪ್ರತಿಯೊಂದಕ್ಕೂ ಕಾರಣ ಇರಲೇಬೇಕಲ್ಲವೆ?

ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷಗಿರಿ ಸಿಕ್ಕ ಸೊಕ್ಕಿಗೆ ಬಿದ್ದೇ ಶ್ರುತಿ ತನ್ನ ಬಡಪಾಯಿ ಗಂಡನಿಗೆ ಸೋಡಚೀಟಿ ಕೊಟ್ಟಳೆಂದೇ ಏಕಾಏಕಿ ನಿರ್ಧರಿಸಿದವರ ಪೈಕಿ ಯಾರಾದರೂ ಶ್ರುತಿಯನ್ನು ಕೂರಿಸಿ 'ಅಂಥಾದ್ದೇನಾಯ್ತಮ್ಮಾ?' ಎಂದು ಕೇಳಿದರೆ ಬಹುಶಃ ಡೈರೆಕ್ಟರ್ ಮಹೇಂದರ್‌ನ ಮತ್ತೊಂದು ಮುಖ ಬಯಲಾಗುತ್ತಿತ್ತೇನೋ. ಕೇಳಿದವರ್‍ಯಾರು?

ಇವತ್ತು ಶ್ರುತಿ ಬದುಕುತ್ತಿರುವ ರೀತಿ, ಅನುಭವಿಸುತ್ತಿರುವ ಚಿತ್ರಹಿಂಸೆ ಮತ್ತು ಮಹೇಂದರ್ ಪಟಾಲಮ್ ಕೊಡುತ್ತಿರುವ ಕಿರುಕುಳ-ಬ್ಲಾಕ್‌ಮೇಲ್ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಆಕೆಯ ದುಡುಕಿಗೊಂದು ವಿಚಿತ್ರ ಸಮರ್ಥನೆಯಿತ್ತೆಂಬ ಸತ್ಯ ಗೋಚರಿಸಲೇಬೇಕು- ದುಃಖ ತೋಡಿಕೊಳ್ಳುವಂತಿಲ್ಲ, ಕಷ್ಟ ಹೇಳಿಕೊಳ್ಳುವಂತಿಲ್ಲ, ಸಂತೈಸಬೇಕಿದ್ದ ಬಂಧುಬಳಗ ಯಾವುದೂ ಸದ್ಯ ಆಕೆಗಿಲ್ಲ, ಜೊತೆಗಿರುತ್ತಿದ್ದ ಚಕ್ರವರ್ತಿ ಎಂಬಾತ ಏನಾದ? ಎಲ್ಲಿಗೆ ಹೋದ? ಯಾರಿಗೂ ಗೊತ್ತಿಲ್ಲ, ಒಂದೇ ಒಂದು ಡೈವೋರ್ಸ್ ನಿರ್ಧಾರದಿಂದಾಗಿ ವೃತ್ತಿ ಮತ್ತು ಬದುಕಿನ ಎಲ್ಲಾ ಬಾಗಿಲುಗಳೂ ಮುಚ್ಚಿಹೋದ ಶ್ರುತಿ ಈಗ ಲೋಕನಿಂದಿತೆ!

ಬದುಕಿನುದ್ದಕ್ಕೂ ಬಣ್ಣ ಹಚ್ಚಿ ದುಡಿದ ಆಸ್ತಿ ಪೂರ್ತಿ ಮಹೇಂದರ್‌ನ ರಾಜಕೀಯದ ತೆವಲಿಗಾಗಿ ಕರಗಿಹೋಗಿದೆ. ಅಣ್ಣ ಶರಣ್ ಕೈಹಿಡಿಯದೇ ಹೋಗಿದ್ದರೆ ಶ್ರುತಿಯ ಪಾಡು ಏನಾಗುತ್ತಿತ್ತೊ?

ಇಂಥ ಅಸಹಾಯಕ ಸ್ಥಿತಿಯನ್ನೇ ಕಾದು ಆಕೆಯನ್ನು ಇನ್ನಿಲ್ಲದಂತೆ ಮುಗಿಸಲು ದಿನಕ್ಕೊಂದು ಹಾವಳಿಯಿಡುತ್ತಿರುವ ಹಳೇ ಗಂಡ ಮಹೇಂದರ್, ಮೊನ್ನೆ ಅಂದರೆ ಡಿಸೆಂಬರ್ 18 ರಂದು ಮಾಡಿದ ಅನಾಹುತವಿದೆಯಲ್ಲ- ಅದು ಯಾರೇ ಸೆಲೆಬ್ರಿಟಿಯೊಬ್ಬ ಮಾಡುವ ಕೆಲಸವಂತೂ ಅಲ್ಲವೇ ಅಲ್ಲ!

ಅವತ್ತು ಮಧ್ಯಾಹ್ನ ಯಾರೂ ಇಲ್ಲದ ಸಮಯ ಕಾದ ಮಹೇಂದರ್ ಇಬ್ಬರು ಅಪರಿಚಿತರನ್ನು ಛೂಬಿಟ್ಟು ಶ್ರುತಿಯ ಮನೆಗೆ ನುಗ್ಗಿಸಿದ್ದಾನೆ. ಹಾಗೇ ಮನೆಯೊಳಕ್ಕೆ ಅತಿಕ್ರಮಿಸಿದ ಆ ಧೂರ್ತರಿಬ್ಬರು ನಕಲಿ ಬೀಗದ ಕೈ ಬಳಸಿ ಬಾಗಿಲು ಮುರಿದಿದ್ದಾರೆ. ಒಳಹೊಕ್ಕ ಅವರಿಬ್ಬರೂ ಇಡೀ ಮನೆಯನ್ನು ಜಾಲಾಡಿದ್ದಾರೆ. ಪುಡಿ ಇಂಜಿನಿಯರ್ ಒಬ್ಬನನ್ನು ಕರೆಸಿದ್ದೇ ಇಡೀ ಮನೆಯ ಒಳಭಾಗದ ಫೋಟೋ, ವಿಡಿಯೋ ಚಿತ್ರೀಕರಿಸಿಕೊಂಡು ಸೊತ್ತಿನ ಸದ್ಯದ ಮಾರುಕಟ್ಟೆ ಬೆಲೆ ಏನಾಗಬಹುದೆಂದು estimate ತಯಾರಿಸಿದ್ದಾರೆ. ಕೆಲಸ ಮುಗಿಸಿದ್ದೇ ಚೆಲ್ಲಾಪಿಲ್ಲಿ ಮಾಡಿದ ಮನೆಯ ಬಾಗಿಲನ್ನೂ ಹಾಕದೇ ಪರಾರಿಯಾಗಿದ್ದಾರೆ.

ಹೊರಹೋಗಿದ್ದ ಶ್ರುತಿ ತನ್ನ ತಂದೆ ತಾಯಂದಿರ ಜೊತೆ ವಾಪಸ್ಸಾದಾಗಲೇ ಅಕ್ಕಪಕ್ಕದ ನಿವಾಸಿಗಳಿಂದ ವಿಷಯ ಗೊತ್ತಾಗಿದೆ. ಕೆರಳಿ ಮಹೇಂದರ್‌ಗೆ ಫೋನಾಯಿಸಿದರೆ 'ಹೌದು ನಾನೇ ಕಳಿಸಿದ್ದೆ, ಡೈವೋರ್ಸ್ ಕೊಡಬೇಕು ಅಂದ್ರೆ ನನಗೆ ನಿನ್ನ ಆಸ್ತಿಯ ಅರ್ಧಪಾಲು ಕೊಡಬೇಕು. ಅದಕ್ಕೇ ಆಸ್ತಿಯ estimate ಮಾಡ ಬೇಕಲ್ವಾ? ತಪ್ಪೇನಿದೆ....?' ಎಂದು ಅತ್ತಲಿಂದ ಮಹೇಂದರ್ ಹೂಂಕರಿಸುತ್ತಿದ್ದ.

ಅಲ್ಲಿಗೆ ಮಹೇಂದರ್ ತನ್ನ ನೀಚತನದ ಪರಮಾವಧಿ ತಲುಪಿದ್ದಾನೆಂಬ ಬಗ್ಗೆ ಶ್ರುತಿಗೆ ಯಾವುದೇ ಅನುಮಾನಗಳಿರಲಿಲ್ಲ, ಸೋಕಾಲ್ಡ್ ಡೈರೆಕ್ಟರ್, ತನ್ನ ಪ್ರತಿ ಚಿತ್ರದ ಟೈಟಲ್ಲಿನಲ್ಲೂ 'ನಿರ್ದೇಶಕ ರತ್ನ' ಎಂದು ಬಿರುದು ಕೊಟ್ಟುಕೊಳ್ಳುವ ಮಹೇಂದರ್ ಪತ್ನಿಯ ಅರ್ಧ ಆಸ್ತಿಗಾಗಿ ಕೋರ್ಟ್ ಮೆಟ್ಟಿಲು ಹತ್ತಲು ನಿರ್ಧರಿಸಿದ್ದ, ತನ್ನ ರಾಜಕೀಯದ ತೀಟೆಗಾಗಿ ಶ್ರುತಿ ಜನ್ಮಾಪಿ ಕೂಡಿಟ್ಟ ಎರಡು ಕೋಟಿಗೂ ಅಧಿಕ ಮೊತ್ತದ ದುಡ್ಡು ಕಳೆದವನು, ಪತ್ನಿಯ ಖ್ಯಾತಿ ವರ್ಚಸ್ಸನ್ನೇ ಬಂಡವಾಳವಾಗಿಸಿಕೊಂಡು ಕೊಳ್ಳೇಗಾಲಕ್ಕೆ ಬಿಜೆಪಿ ಟಿಕೆಟ್ ಗಿಟ್ಟಿಸಿದವನು, ಪತ್ನಿಯ ಹೆಸರಲ್ಲಿ ಟೀವಿ ಸೀರಿಯಲ್ ಮಾಡುತ್ತೇನೆಂದು ಕಾಸು ಹೊಡೆದವನು, ಹೆಂಡತಿಯನ್ನು ಮುಂದಿಟ್ಟು ಮಠದ ಆಸ್ತಿ ಕಬಳಿಸಿದವನು, ಹೆಂಡತಿ ಕೊಡಿಸಿದ ಕಾರು, ಹಾಕಿದ ಅನ್ನ, ಮಾಡಿದ ಆರೈಕೆ, ಕೊಟ್ಟ ಪ್ರೀತಿ ಎಲ್ಲವನ್ನೂ ಮರೆತು ಈಗ ಪುಡಿ ರೌಡಿಗಳನ್ನು ಮನೆಗೆ ನುಗ್ಗಿಸಿ ಅರ್ಧ ಆಸ್ತಿ ಕೇಳುತ್ತಿದ್ದಾನೆಂದರೆ ಮಹೇಂದರ್ ತಾನೇ ಯಾವ ಸೀಮೆಯ ಗಂಡು?

ಯಾವ ಗಂಡಹೆಂಡಿರು ತಾನೇ ಕಿತ್ತಾಡಿಲ್ಲ ಡೈವೋರ್ಸ್ ಪಡೆದಿಲ್ಲ? ಹೀಗೆ ಡೈವೋರ್ಸ್ ಪ್ರಶ್ನೆ ಬಂದಾಗ ಗಂಡನಾದವನು ತನ್ನ ಮಕ್ಕಳಿಗಾಗಿ ಬಡಿದಾಡಿದ್ದನ್ನು ಕಂಡಿದ್ದೇವೆ. ಹೆಂಡತಿಯಾದವಳು ಜೀವನ ನಿರ್ವಹಣೆಗೆಂದು ಪರಿಹಾರ ಕೇಳುವುದು ಮಾಮೂಲು. ಆದರೆ ಮಹೇಂದರ್ ತನ್ನ ಹೆಂಡತಿ ತನಗಾಗಿ ಎಲ್ಲಾ ಕಳಕೊಂಡ ನಂತರವೂ ಬದುಕಲಿಕ್ಕೆಂದು ಉಳಿಸಿಕೊಂಡಿದ್ದ ಆಕೆಯ ಆಸ್ತಿಯಾದ ಮನೆಯಲ್ಲಿ ಪಾಲು ಕೇಳುತ್ತಿದ್ದಾನೆ!

ಬಸವೇಶ್ವರನಗರದ ಪೆನಿಷಿಯಾ ಆಸ್ಪತ್ರೆಯೆದುರಿನ 'ಮಡಿಲು' ಹೆಸರಿನ 60x40 ಅಳತೆಯ ಮನೆಯ ಸದ್ಯ ಮಾರುಕಟ್ಟೆ ರೇಟೇ ಎರಡೂವರೆ ಕೋಟಿ. ಅದು ಶ್ರುತಿಯ ಸ್ವಂತ ದುಡಿಮೆಯ ಸೊತ್ತು, ಇದು ಬಿಟ್ಟರೆ ಆಕೆಗೆ ಬೇರೆ ಆಸ್ತಿಯಿಲ್ಲ, ಇದ್ದ ಚಂದ್ರಲೇಔಟಿನ ಒಂದು ಸೈಟು, ಮೈಸೂರು ರಸ್ತೆಯ ದೊಡ್ಡಾಲದ ಮರದ ಬಳಿಯಿದ್ದ ಹದಿನೈದೆಕರೆಯ ಜಮೀನು ಮತ್ತು ಕೂಡಿಟ್ಟ ಕಾಸು ಜೊತೆಗೆ ತಂದೆತಾಯಿ ಮಾಡಿಸಿಕೊಟ್ಟಿದ್ದ ಚಿನ್ನಾಭರಣಗಳನ್ನೆಲ್ಲ ಮಾರಿಹಾಕಿ ಸರಿಸುಮಾರು ಎರಡು ಕೋಟಿ ಮೂವತ್ತು ಲಕ್ಷದಷ್ಟು ರೂಪಾಯಿಗಳನ್ನು ಕೊಳ್ಳೇಗಾಲಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದ ಗಂಡ ಮಹೇಂದರ್‌ನ ಚುನಾವಣಾ ಖರ್ಚಿಗೆಂದು ಎತ್ತಿಕೊಟ್ಟ ಶ್ರುತಿ ತನಗೆ ಅಂತ ಉಳಿಸಿಕೊಂಡಿದ್ದು ಈ ಬಸವೇಶ್ವರನಗರದ ಮನೆಯೊಂದನ್ನೇ.

ಇದು ಬಿಟ್ಟರೆ ಆಕೆಯ ಜನ್ಮಾಪಿ ಗಳಿಕೆಯನ್ನೆಲ್ಲ ತನ್ನ ಖಾದಿ ಶೋಕಿಗೆ ಹುಡಿಹಾರಿಸಿದ ಮಹೇಂದರ್ ಮಗಳು 'ಮಿಲಿ'ಗಾಗಿ ಹಠಕ್ಕೆ ಬೀಳಬಹುದೆಂದೇ ಎಲ್ಲರೂ ಭಾವಿಸಿದ್ದುಂಟು. ಈಗಾತನಿಗೆ ಮಗು ಬೇಕಿಲ್ಲ, ಪತ್ನಿಯೂ ಬೇಕಿಲ್ಲ, ಬೇಕಿರುವುದು ಬಸವೇಶ್ವರನಗರದ ಪತ್ನಿಯ ಮನೆಯಲ್ಲಿ ಅರ್ಧಪಾಲು ಮಾತ್ರ.

ಹತ್ತು ವರ್ಷಗಳ ಕಾಲ ತಾನೇ ಸಂಸಾರ ಮಾಡಿದ ಮನೆಗೆ ಹೆಂಡತಿಯಿಲ್ಲದ ಸಮಯ ಕಾದು ಯಾರೋ ಪುಡಿ ರೌಡಿಗಳನ್ನು ನುಗ್ಗಿಸುತ್ತಾನೆಂದರೆ ಅದು ಮಹೇಂದರ್‌ನ ಹತಾಶೆಯಲ್ಲದೇ ಮತ್ತೇನು?

ಶ್ರುತಿ-ಮಹೇಂದರ್ ದಾಂಪತ್ಯದ ಬಗ್ಗೆ ಯಾರೇನೇ ಅಂದರೂ ಕೇಳಿಕೊಳ್ಳಲಾಗದ ಅನೇಕ ಸತ್ಯಗಳು ಬಿಲದಲ್ಲೇ ಉಳಿದುಬಿಟ್ಟಿವೆ. ಸದ್ಯ ಡೈವೋರ್ಸ್‌ಗೆ ಅರ್ಜಿ ಹಾಕಿರುವ ಮಹೇಂದರ್‌ಗೆ ಬಾಯಿಬಿಟ್ಟರೇನೇ ಬಣ್ಣಗೇಡು. ಪತ್ರಿಕೆ ಈ ಬಗ್ಗೆ ಅಷ್ಟಿಷ್ಟು ಮಾಹಿತಿ ಕಲೆ ಹಾಕಿದ್ದು ಶ್ರುತಿಯವರ ಮನೆ ಕೆಲಸದ ಹೆಂಗಸು ಕಲಾ (ಹೆಸರು ಬದಲಾಗಿದೆ) ಎಂಬಾಕೆಯಿಂದ. ಜೊತೆಗೆ ಡ್ರೈವರ್ ಬಸವರಾಜು, ಮತ್ತೊಬ್ಬ ಕೆಲಸದಾಕೆ ರೂಪಾ (ಹೆಸರು ಬದಲಾಗಿದೆ) ಕೂಡ ಸಾಕಷ್ಟು ಮಾಹಿತಿ ಒದಗಿಸಿದ್ದಾರೆ.

ಶ್ರುತಿ-ಮಹೇಂದರ್ ಮದುವೆಯಾಗಿದ್ದು 1998 ರ ಮೇ 21 ರಂದು. ಒರಿಸ್ಸಾದ ಪುರಿಯ ಜಗನ್ನಾಥ ದೇವಾಲಯದಲ್ಲಿ, ಮೂಲತಃ ಕೊಳ್ಳೇಗಾಲ ತಾಲ್ಲೂಕಿನ ಬಂದಹಳ್ಳಿ ಎಂಬ ಕುಗ್ರಾಮದ ನಿರ್ಗತಿಕ ದಲಿತ ಕುಟುಂಬವೊಂದರ ಮಹೇಂದರ್‌ನನ್ನು ತನ್ನ ಜಾತಿ, ಅಂತಸ್ತು ಖ್ಯಾತಿ ಎಲ್ಲವನ್ನೂ ಧಿಕ್ಕರಿಸಿ ಮದುವೆಯಾದವಳು ಶ್ರುತಿ. 'ಕರ್ಪೂರದ ಗೊಂಬೆ' ಚಿತ್ರದ ಶೂಟಿಂಗ್‌ನಲ್ಲಿ ಚಿಗುರಿದ ಪ್ರೀತಿ ಇದು. ಈತನಕ ಒಂದೇ ಒಂದು ಸ್ವಂತ ಕತೆ ಹೆಣೆದು ನಿರ್ದೇಶಿಸಿ ಗೆದ್ದ ಉದಾಹರಣೆಯಿಲ್ಲದ ಮಹೇಂದರ್ ಯಾವೊಬ್ಬ ನಿರ್ಮಾಪಕನೆದುರೂ ಜಬರ್‌ದಸ್ತಿ ಮಾಡಿ ಸಂಭಾವನೆ ಕಿತ್ತವನಲ್ಲ, ಐದು ಲಕ್ಷದ ಮಾತಾಡಿದರೂ ಪುಕ್ಕಲು ಸ್ವಭಾವದ ಮುಖೇಡಿ ಮಹೇಂದರ್‌ಗೆ ಯಾವೊಬ್ಬ ನಿರ್ಮಾಪಕನೂ ಒಂದೂವರೆ ಲಕ್ಷಕ್ಕಿಂತ ಹೆಚ್ಚಿಗೆ ಕೊಡುತ್ತಿರಲಿಲ್ಲ, ಮದುವೆ ನಂತರ ಮಹೇಂದರ್‌ಗೆ ಶ್ರುತಿ ಕೊಟ್ಟ ಮೊದಲ ಗಿಫ್ಟ್ ಎಂದರೆ ಮದುವೆಗೂ ಮುನ್ನ ಆಕೆಯೇ ಕಾಣಿಕೆಯಾಗಿ ಕೊಟ್ಟಿದ್ದ ಚಿನ್ನಾಭರಣಗಳನ್ನು ಮಾರ್ವಾಡಿಯ ಗಿರವಿ ಅಂಗಡಿಯಿಂದ ಬಿಡಿಸಿಕೊಟ್ಟಿದ್ದು!

ಈ ಹೊತ್ತಿಗಾಗಲೇ ಮೂರು ಫಿಲ್ಮ್‌ಫೇರ್ ಪ್ರಶಸ್ತಿ ಎರಡು ಡೈರೆಕ್ಟರ್ಸ್ ಅವಾರ್ಡ್ ಮತ್ತು ಒಂದು ರಾಜ್ಯ ಪ್ರಶಸ್ತಿ ಪಡೆದಿದ್ದ ಶ್ರುತಿ ಕನ್ನಡ ಚಿತ್ರರಂಗದ ಮಟ್ಟಿಗೆ ಮಿನುಗುತಾರೆ ಕಲ್ಪನಾರ ಉತ್ತರಾಧಿಕಾರಿಯೆಂಬುದು ಸಾಬೀತಾಗಿಹೋಗಿತ್ತು, ರಾಷ್ಟ್ರ ಪ್ರಶಸ್ತಿ ತಂದುಕೊಟ್ಟ ತಮಿಳಿನ ಕೆ. ಬಾಲಚಂದರ್ ನಿರ್ದೇಶಿಸಿದ 'ಕಲ್ಕಿ'ಯಿಂದಾಗಿ ಶ್ರುತಿಗೆ ತಮಿಳು, ಮಲೆಯಾಳಂ ಚಿತ್ರರಂಗದಲ್ಲೂ ಸ್ಟಾರ್‌ವ್ಯಾಲ್ಯೂ ಸೃಷ್ಟಿಯಾಗಿತ್ತು, ಒಂದಲ್ಲ ಎರಡು ರಾಷ್ಟ್ರಪ್ರಶಸ್ತಿ, ಒಟ್ಟು ಆರು ಫಿಲ್ಮ್‌ಫೇರ್ ಅವಾರ್ಡ್, ಅಸಂಖ್ಯಾತ ಚಾನಲ್ ಪುರಸ್ಕಾರಗಳನ್ನು ಪಡೆದೂ ಆಕೆಯೊಳಗೊಬ್ಬ ಅದ್ಭುತ ಕಲಾವಿದೆಯಿದ್ದಾಳೆಂಬುದು ನಿಷ್ಣಾತ ಡೈರೆಕ್ಟರ್ ಮಹೇಂದರ್‌ಗೆ ಪಥ್ಯವಾಗಲೇ ಇಲ್ಲ.

ಮದುವೆಗೂ ಮುನ್ನ ಮಲ್ಲೇಶ್ವರದ ಗೀತಾ ಲಾಡ್ಜಿನಲ್ಲಿ ಇಟ್ಕಾಟಿಕೊಂಡಿದ್ದ ಮಹೇಂದರ್‌ನಂಥ ಹಿಂದು ಮುಂದಿಲ್ಲದವನನ್ನು 'ಯಾಕಮ್ಮಾ ಹಚ್ಚಿಕೊಂಡಿದ್ದೀಯಾ?' ಎಂದು ಶ್ರುತಿಯ ತಂದೆ ಆಕ್ಷೇಪವೆತ್ತಿದ್ದಕ್ಕೆ ತಾನೇ ದುಡ್ಡು ಹಾಕಿ ಹೊಸದೊಂದು ಮಾರುತಿ ಕಾರ್ ಕೊಡಿಸಿದ್ದು ಶ್ರುತಿಯವರೇ. ಮದುವೆಯ ವೆಚ್ಚವನ್ನು ಆಕೆಯೇ ಭರಿಸಿ ಆನಂತರ ಕುರುಬರಹಳ್ಳಿಯಲ್ಲಿ ಮಾಡಿದ ಮನೆಗೆ ಭೋಗ್ಯದ ದುಡ್ಡನ್ನೂ ಹೊಂದಿಸಿದ್ದಳು. ಆದರೆ ಮಹೇಂದರ್ ಅನುಮಾನ ಪಿಶಾಚಿ. ಯಾರೋ ಸುರಾಚಾರಿ ಎಂಬ ತಲೆಕೆಟ್ಟವನೊಬ್ಬ ತಾನು ಶ್ರುತಿಯನ್ನು ಮದುವೆಯಾಗಿದ್ದೇನೆಂದು ಸುಳ್ಳು ಕೇಸು ಹಾಕಿಕೊಂಡಿದ್ದಕ್ಕೆ ಆತ ತಾನು ಮನೆಯಲ್ಲಿಲ್ಲದ ವೇಳೆ ಎಲ್ಲಿ ಹಾವಳಿಯಿಡುತ್ತಾನೋ ಎಂದು ವಿಪರೀತ ತಲೆ ಕೆಡಿಸಿಕೊಂಡಿದ್ದ ಮಹೇಂದರ್ ಶ್ರುತಿಯನ್ನು ಮನೆಯೊಳಕ್ಕೆ ಕೂಡಿ ಹಾಕಿ ಬೀಗ ಜಡಿಯುತ್ತಿದ್ದ.

ಮಹೇಂದರ್ ಮತ್ತೆ ವಾಪಸ್ಸಾಗಿ ಬೀಗ ತೆಗೆದಾಗಲೇ ಆಕೆಗೆ ಬಿಡುಗಡೆ!

ಆ ಹೊತ್ತಿಗಾಗಲೇ ಶ್ರುತಿಗೆ ತಮಿಳು ಚಿತ್ರರಂಗದಲ್ಲಿ ವಿಪರೀತ ಬೇಡಿಕೆಯಿತ್ತು, ಕಾಲ್‌ಶೀಟ್ ಕೇಳಿಕೊಂಡು ಯಾರೇ ತಮಿಳಿನ ನಿರ್ಮಾಪಕರು ಬಂದರೂ ಅವರ ಜೊತೆಗಿದ್ದ ಡೈರೆಕ್ಟರ್‌ನನ್ನೂ ಲೆಕ್ಕಿಸದೇ ಮಹೇಂದರ್ 'ನನ್ನ ಹೆಂಡತಿಯ ಕಾಲ್‌ಶೀಟ್ ಬೇಕು ಅಂದರೆ ನನ್ನನ್ನೇ ಡೈರೆಕ್ಟರ್ ಮಾಡ್ತೀರಾ?' ಎಂದು ಪೆದ್ದುಪೆದ್ದಾಗಿ ಪೀಡಿಸುತ್ತಿದ್ದ!


ಪತ್ನಿಯ ವರ್ಚಸ್ಸನ್ನು ಎನ್‌ಕ್ಯಾಷ್ ಮಾಡಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವ ಮಹೇಂದರ್‌ನ ದುರಾಶೆ ಕಂಡ ಕೆ. ಬಾಲಚಂದರ್ 'ಶ್ರುತಿ ನನ್ನ ಮಗಳಿದ್ದಂತೆ. ನಿನ್ನನ್ನು ಆಕೆ ಮದುವೆಯಾಗಿದ್ದು ಆಕೆಯ ಏಳಿಗೆಗೆ ಕಂಟಕವಾಗದ ಹಾಗೆ ನೋಡ್ಕೊಳ್ಳಪ್ಪಾ...' ಎಂದು ಖಾರವಾಗೇ ಪತ್ರ ಬರೆದರು.

▶▶▶

ರಮೇಶ್ ಯಾದವ್‌ನ ರೌಡಿ ರೋಪು

ಸಿದ್ಧ ಮಹೇಂದರ್ ಎಂಥಾ ಹತಾಶ ಸ್ಥಿತಿಗಿಳಿದಿದ್ದಾನೆಂಬುದಕ್ಕೆ ಮೊನ್ನೆಯಷ್ಟೇ ಶೃತಿಗೆ ಬಂದ ಕೊಲೆ ಬೆದರಿಕೆ ಕರೆಯೊಂದೇ ...ಸು.

ಹಾಗೇ ಫೋನ್ ಮಾಡಿ ಶೃತಿಗೆ ಧಮಕಿ ಹಾಕಿದ್ದು ಮಹೇಂದರ್‌ನ ಅಂತಃಪುರದ ಸಂಗಾತಿ ಮತ್ತು ಚಿತ್ರ ನಿರ್ಮಾಪಕ ರಮೇಶ್ ...ಾದವ್. ಈತ ಹತ ರೌಡಿ ಚೆಕ್ಕಿನ ಕಣ್ ರಾಜೇಂದ್ರನ ಖಾಸಾ ತಮ್ಮ. ಡಿಸೆಂಬರ್ 17 ರಂದು ಮಧ್ಯಾಹ್ನ 11 ಕ್ಕೆ ಮಹೇಂದರ್ ... ಮೊಬೈಲ್ ಸಂಖ್ಯೆ 9880222214 ರಿಂದ ಶೃತಿಯ ಫೋನಿಗೆ ಕರೆ ಮಾಡಿದ್ದಾನೆ.



ಅತ್ತಲಿಂದ ಮೊದಲು ಮಾತಾಡಿದ್ದು ಮಹೇಂದರ್. 'ನೋಡು ನನ್ನನ್ನು ಹೇಗೆ ...ರಹಾಕಿದ್ದಿಯೋ ಹಾಗೇ ನಿನ್ನನ್ನು ಬೀದಿಪಾಲು ಮಾಡ್ತೀನಿ. ಹರಿಹರ ಬ್ರಹ್ಮ ಬಂದರೂ ... ಮನೆಯ ಪಾಲು ತಗೊಂಡೇ ತಗೊಂತೀನಿ. ನಿನ್ನ ಮುಖಕ್ಕೆ ಇನ್ನು ಹೇಗೆ ಬಣ್ಣ ...ತ್ತೀಯೋ ನೋಡೇ ಬಿಡ್ತೀನಿ. ನಿನ್ನ ಅಪ್ಪನ್ನ ಬಿಡಲ್ಲ....!' ಇತ್ಯಾದಿಯಾಗಿ ಮಹೇಂದರ್ ...ಚಾಡುತ್ತಿದ್ದರೆ, ಅದೇ ಫೋನ್‌ನ್ನು ತಾನೆತ್ತಿಕೊಂಡ ರಮೇಶ್ ಯಾದವ್ 'ನೋಡಮ್ಮಾ ...ನು ಯಾರು ಅನ್ನೋದು ನಿನಗ್ಗೊತ್ತಿಲ್ಲ, ಮುಚ್ಕೊಂಡು ಮನೆಯ ಅರ್ಧಪಾಲು ...ಟ್ಟುಬಿಡು. ನಿನ್ನ ಒಳ್ಳೇದಕ್ಕೇ ಹೇಳ್ತಿದ್ದೀನಿ....' ಎಂದು ಪಕ್ಕಾ ರೌಡಿಗತ್ತಿನಲ್ಲಿ ರೋಪು ...ಕಿದ್ದಾನೆ.

ತನ್ನ ಪತ್ನಿಗೇ, ತನ್ನ ಮಗಳ ತಾಯಿಗೇ ರೌಡಿಯಿಂದ ಧಮಕಿ ಹಾಕಿಸುವ ಮಹೇಂದರ್ ...ನೆಂಥಾ ಗಂಡಸು?

▶▶▶

2002 ರ ಜೂನ್ 6 ರಂದು ಮಗಳು ಮಿಲಿ ಹುಟ್ಟುವ ...ತ್ತಿಗೆ ಶ್ರುತಿ-ಮಹೇಂದರ್ ದಾಂಪತ್ಯಕ್ಕೆ ನಾಲ್ಕು ವರ್ಷ ತುಂಬಿತ್ತು, ...ಹೇಂದರ್ ತಲೆಯೂ ಖಾಲಿಯಾಗಿತ್ತು. ಪತ್ನಿಯ ಖ್ಯಾತಿ, ವರ್ಚಸ್ಸು ...ಬಿ ಬಂಡವಾಳ ಮಾಡಿಕೊಳ್ಳಲು ಮಹೇಂದರ್‌ನಲ್ಲಿ ಸ್ವಂತದ್ದೊಂದು ...ಸ್ತೆ ಕೂಡ ಇರಲಿಲ್ಲ, ಮೊದಲೇ ವಿಪರೀತ ಕೀಳರಿಮೆ. ಪುಕ್ಕಲು ...ವ. ವಿಚಾರ ತಿಳಿದಿಲ್ಲ, ಧೈರ್ಯವೂ ಇಲ್ಲ, ಮನೆ ತುಂಬ ...ಳು ಚಿತ್ರಗಳ ಸೀಡಿಗಳನ್ನು ತುಂಬಿಸಿಕೊಂಡು ಒಂದೊಂದು ...ಯಿಂದ ಒಂದೊಂದು ದೃಶ್ಯ ಕದ್ದು ಪೋಣಿಸಿ ಕನ್ನಡ ಚಿತ್ರದ ...ಹೆಣೆಯುತ್ತಿದ್ದ. ಎಲ್ಲಿ ಮುಂದಿನ ಛಾನ್ಸ್ ತಪ್ಪುತ್ತೋ ಎಂದು ...ಷ್ಟ ಗಂಟಲಲ್ಲಿ ಸಂಭಾವನೆಯನ್ನೂ ಕೇಳುತ್ತಿರಲಿಲ್ಲ.

...ಈ ಮಧ್ಯೆ ಮಲೆಯಾಳದ ಟಿವಿ ಚಾನೆಲ್ಲೊಂದು ಶ್ರುತಿಯನ್ನು ...ಕೊಂಡು ನಿರ್ಮಿಸಿದ 'ಸ್ತ್ರೀತ್ವಂ'ದ ಧಾರಾವಾಹಿಗೆ ವಿಪರೀತ ...ಪ್ರಿಯತೆ ಬಂದಿತ್ತು, ಆ ಕಾಲಕ್ಕೇ ದಿನವೊಂದಕ್ಕೆ 50 ಸಾವಿರದಷ್ಟು ...ಭಾವನೆಯನ್ನು ಕೇರಳದ ಚಾನಲ್ ಕೊಡುತ್ತಿದ್ದದ್ದನ್ನೇ ...ಗೂಡಿಸಿದ ಶ್ರುತಿ ಬಸವೇಶ್ವರನಗರದಲ್ಲೊಂದು ಸೈಟು ಖರೀದಿಸಿ ... ಕಟ್ಟಿಸಿ ಅದಕ್ಕೆ 'ಮಡಿಲು' ಎಂಬ ಹೆಸರಿಟ್ಟರೆ, ಮಹೇಂದರ್ ... ಹೊಕ್ಕು ಯಜಮಾನನಾಗಿ ನಿಂತನೇ ಹೊರತು ನಯಾಪೈಸೆ ...ಯಲಿಲ್ಲ, ವರ್ಷಕ್ಕೆ ಒಂದೋ ಎರಡೋ ಚಿತ್ರ. ತಲಾ ಚಿತ್ರಕ್ಕೆ ...ಮೂವರೆ ಅಥವಾ ಎರಡು ಲಕ್ಷದ ಸಂಭಾವನೆ ಸಿಕ್ಕರೆ ಅದೇ ... ಅದರಲ್ಲಿ ತನ್ನ ಮೊಬೈಲ್ ಬಿಲ್ ಕಟ್ಟುತ್ತಾನಾ? ಸಂಜೆ ...ತಕ್ಕೆ ವಿಸ್ಕಿ ತರುತ್ತಾನಾ?

...ಶ್ರುತಿ ಕಟ್ಟಿಸಿದ ಮನೆಯ ಗೃಹಪ್ರವೇಶಕ್ಕೆ ತನ್ನ ಸಂಬಂಧಿಗಳಿಗೆ ...ತಿಥ್ಯ ನೀಡಲಿಲ್ಲ ಎಂದು ಮಹೇಂದರ್ ಎಂಥಾ ರಾದ್ಧಾಂತ ...ಡಿದನೆಂದರೆ 'ನಿನ್ನ ಅಪ್ಪ ಒಂದು ಜಾತಿಯಾದರೆ ಅಮ್ಮಂದಿರು ...ನ್ನೊಂದು ಜಾತಿ ತಾನೆ? ಬೆರಕೆ ಬುದ್ಧಿ ಎಲ್ಲಿ ಬಿಡ್ತೀಯಾ?' ...ಮ ಹೀಯಾಳಿಸಿಬಿಟ್ಟ. ಗೃಹಪ್ರವೇಶದ ದಿನವೇ ಶ್ರುತಿ ...ರಿಡಬೇಕಾಯ್ತು.


...ಮಿಲಿ ಹುಟ್ಟಿದ ನಂತರ ಶ್ರುತಿಯ ಎರಡನೇ ಇನ್ನಿಂಗ್ಸ್ ...ವಾಗಿತ್ತು, ಒಂದರ ಮೇಲೊಂದು ಪ್ರಶಸ್ತಿ ಬರುತ್ತಿದ್ದರೆ ಅವಾರ್ಡ್ ...ಯುವುದಕ್ಕೂ ಮಹೇಂದರ್ ಜೊತೆ ಬರುತ್ತಿರಲಿಲ್ಲ, ಹೊಟ್ಟೆಕಿಚ್ಚು ...ಜಿಗೆ ನಿನ್ನನ್ನು ಕರೆದು ಸನ್ಮಾನ ಮಾಡ್ತಾರೆಯೇ ಹೊರತು ...ನ್ನು ಕರೀತಾರಾ? ಆ ಸುಖಕ್ಕೆ ನಾನ್ಯಾಕೆ ಬರಬೇಕು' ಅನ್ನುತ್ತಿದ್ದ. ...ತನೇ ಬರಲಿಲ್ಲ ಎಂದರೆ ನಾನ್ಯಾಕೆ ಹೋಗಬೇಕೆಂದು ಚಿನ್ನನ ... ಫೇರ್ ಪ್ರಶಸ್ತಿಗೆ ಶ್ರುತಿ ಚಕ್ಕರ್ ಹೊಡೆದರೆ ಆಕೆಯ ...ಲಿಗೆ ಅಣ್ಣ ಶರಣ್ ಹೋಗಿ ಪ್ರಶಸ್ತಿ ಸ್ವೀಕರಿಸಿ ಬರುತ್ತಿದ್ದ.

...ಪತ್ನಿಯ ಉನ್ನತಿಗೆ ಕರುಬುವ ಗಂಡ ಅಂತಿದ್ದರೆ ಅದಕ್ಕೆ ...ಹೇಂದರ್ ಪಕ್ಕಾ ಉದಾಹರಣೆಯಂತಿದ್ದ. ಯಾವುದೇ ಸಭೆ ...ಾರಂಭಕ್ಕೆ ಹೋದರೂ ಮೊದಲು ಪತ್ನಿಗೆ ಕುರ್ಚಿ ಕೊಟ್ಟರೆ ...ನ್ಯಾಕೆ ಚೇರ್ ಕೊಡಿಸಲಿಲ್ಲ' ಎಂದು ಜಗಳಕ್ಕೆ ಬೀಳುತ್ತಿದ್ದ. ಪತ್ನಿ ...ಂತಲೂ ವರ್ಚಸ್ವಿಯೆಂಬುದನ್ನು ಮಹೇಂದರ್ ಯಾವತ್ತೂ ...ಸಿದವನಲ್ಲ. ಹಾಗಂತ ಪತ್ನಿಯ ಹೆಸರನ್ನು ಲಾಭಕ್ಕೆ ...ಸಿಕೊಳ್ಳುವುದರಲ್ಲಿ ಮಾತ್ರ ಆತ ಹಿಂದೆ ಬಿದ್ದವನಲ್ಲ, ಶ್ರುತಿಯ ...ರನ್ನೇ ಮುಂದಿಟ್ಟುಕೊಂಡು ಕೊಳ್ಳೇಗಾಲದ ಸೋಲೂರು ಮಠದ ...ಡಿತಾರಾಧ್ಯ ಶಿವಕುಮಾರ ಸ್ವಾಮಿಗಳಿಂದ ಹತ್ತೆಕರೆ ಭೂಮಿ ...ಸಿದ.

... ಅಲ್ಲಿ ಶ್ರುತಿಯವರೇ ನಿಂತು 'ಮಡಿಲು' ಹೆಸರಲ್ಲಿ ಅನಾಥ ...ಕ್ಕಳ ಶಾಲೆ ಸ್ಥಾಪಿಸುತ್ತಾರೆಂದು ಮಠದವರನ್ನು ಮಹೇಂದರ್ ...ಬಿಸಿದ್ದ, ನಂಬಿ ಮಠದ ಭೂಮಿ ಕೊಟ್ಟಿದ್ದ ಸ್ವಾಮೀಜಿ ಅನಾಥ ...ಕ್ಕಳ ಶಾಲೆ ತೆರೆಯುವಂತೆ ನೋಟೀಸಿನ ಮೇಲೇ ನೋಟೀಸು ...ಟ್ಟರು. ತಮ್ಮ ಕನಸಾದ ಅನಾಥಾಶ್ರಮ ತೆರೆಯುವಂತೆ ಶ್ರುತಿ ...ಬೇಡಿ ಸುಸ್ತಾದರೆ ಹೊರತು ಮಹೇಂದರ್ ಲೆಕ್ಕಾಚಾರವೇ ...ರೆಯಾಗಿತ್ತು, ಅದು ಶ್ರುತಿ ಹೆಸರಲ್ಲಿ ಭೂಮಿ ನುಂಗುವುದು!

... ರೋಸತ್ತ ಸ್ವಾಮೀಜಿ ಕೊನೆಗೆ ಕೊಟ್ಟ ಭೂಮಿಯನ್ನೇ ವಾಪಸ್ಸು ...ಕೊಂಡು ಮಹೇಂದರ್‌ಗೆ ಛೀಕರಿಸಿ ಉಗಿದ ದಿನ ಶ್ರುತಿ ಬಿಕ್ಕಿ... ಅತ್ತಿದ್ದರು. ಇದು ಶ್ರುತಿಗಾದ ಮೊದಲ ಆಘಾತವಾಗಿತ್ತು, ...ಂತರ ಮಹೇಂದರ್ ಕೈಯಿಟ್ಟಿದ್ದು ಶ್ರುತಿ ಮತ್ತು ಉದಯ ಟೀವಿಗಿದ್ದ ಬಾಂಧವ್ಯಕ್ಕೆ. 'ಶ್ರುತಿ ಚಿತ್ರ' ಎಂಬ ಬ್ಯಾನರ್ ಹುಟ್ಟುಹಾಕಿ 'ವೈದೇಹಿ' ಹೆಸರಿನ ಧಾರಾವಾಹಿಯನ್ನು ತಾನೇ ನಿರ್ದೇಶಿಸುತ್ತೇನೆಂದು ಮಹೇಂದರ್ ಉದಯ ಟೀವಿಯ ಜೊತೆ ಡೀಲು ಕುದುರಿಸಿದ್ದ. ಶ್ರುತಿ ನಟಿಸಿ ಅವರೇ ನಿರ್ಮಿಸುತ್ತಾರೆಂದರೆ ಅದು ಮನೆ ಮಕ್ಕಳೆಲ್ಲ ಕುಂತು ನೋಡುವ ಸೀರಿಯಲ್ಲಾಗಿರುತ್ತದೆ ಎಂದೇ ನಂಬಿದ್ದ 'ಸನ್' ಟೀವಿ ಐದು ಲಕ್ಷದ ಅಡ್ವಾನ್ಸ್ ಕೊಟ್ಟಿದ್ದಷ್ಟೇ ಅಲ್ಲ, ಸಂಜೆ 7ರ ಪ್ರೈಮ್ ಟೈಮನ್ನೇ ಬಿಟ್ಟುಕೊಟ್ಟಿತ್ತು.

ಮಹೇಂದರ್ ಮನಸ್ಸು ಮಾಡಿದ್ದರೆ ಸದಭಿರುಚಿಯ ರಸವತ್ತಾದ ಧಾರಾವಾಹಿಯೊಂದನ್ನು ನಿರ್ಮಿಸಬಹುದಿತ್ತು. ಆದರೆ ಯೋಗ್ಯತೆ ಬೇಕಲ್ಲ, ಸನ್ ಟೀವಿಯವರು ಕೊಟ್ಟಿದ್ದ ಐದು ಲಕ್ಷವನ್ನು ಜೇಬಿಗಿಳಿಸಿದ್ದೇ ಪ್ರೈಮ್ ಟೈಮಿನ ಸ್ಲಾಟನ್ನು ರಮೇಶ್ ಯಾದವ್ ಮತ್ತು ಆರ್.ಎಸ್. ಗೌಡ ಎಂಬ ಧೂರ್ತರಿಗೆ ಮಾರಿಕೊಂಡ. ಶ್ರುತಿಯ ಹೆಸರಾದರೂ ಯಾರೋ ತಲೆ ಮಾಸಿದವನೊಬ್ಬ ಸಂಚಿಕೆ ನಿರ್ದೇಶಕನಾಗಿರುತ್ತಿದ್ದ. ಕಳಪೆ ಕತೆ, ಸವಕಲು ದೃಶ್ಯಾವಳಿ, ಸಾಲದೆಂಬಂತೆ ಟೈಟಲ್ ಕಾರ್ಡಿನಲ್ಲೇ ರಮೇಶ್ ಯಾದವ್ ಮತ್ತು ಆರ್.ಎಸ್. ಗೌಡ ತಟ್ಟಾಡುತ್ತಿದ್ದ ಸೀನು. ರೋಸತ್ತ ಉದಯ ಟಿವಿಯ ಮುಖ್ಯಸ್ಥರು ಮೂರೇ ತಿಂಗಳಿಗೆ 'ವೈದೇಹಿ'ಯನ್ನು ಬರಕಾಸ್ತು ಮಾಡಿಬಿಟ್ಟರು.



ಇದು ಶ್ರುತಿಗಾದ ಎರಡನೇ ಆಘಾತವಾಗಿತ್ತು, ತನ್ನ ಹೆಸರಿನ ಬ್ಯಾನರ್‌ನಲ್ಲಿ ತಾನೇ ನಟಿಸದ ಹಾಗೆ ಮಾಡಿದ ಮಹೇಂದರ್ ಶ್ರಮ ವಹಿಸಿ ಧಾರಾವಾಹಿ ಮಾಡುವುದಕ್ಕೂ ಆಗದಷ್ಟು ಸೋಮಾರಿಯಾಗಿಬಿಟ್ಟಿದ್ದ!

ದುಡಿದು ಮನೆ ಖರ್ಚಿಗೆಂದು ನಯಾಪೈಸೆ ಕೊಡದಿದ್ದರೆ ಕತ್ತೆಬಾಲ, ಕನಿಷ್ಠ ಪತ್ನಿಯ ಕಾಸಿಗೆ ಕೈಚಾಚಬಾರದೆಂಬ ಪರಿವೆಯಿರಬೇಕಲ್ಲವೆ? ತನ್ನ ಸಾಧನೆಯಿಂದ ವರ್ಚಸ್ಸಿನಿಂದ, ಹೆಂಡತಿಯನ್ನು ಖುಷಿಪಡಿಸುವ ಬದಲಾಗಿ ಹೆಂಡತಿಯ ವರ್ಚಸ್ಸನ್ನೇ ಬಂಡವಾಳ ಮಾಡಿಕೊಂಡ ಮಹೇಂದರ್ ಪಾಲಿಗೆ ಶ್ರುತಿ ಚಿನ್ನದ ಮೊಟ್ಟೆಯಿಡುವ ಕೋಳಿ ಮಾತ್ರ. ಅದಕ್ಕೊಂದು ಪಕ್ಕಾ ನಿದರ್ಶನದಂತೆ ಬಂದದ್ದು 'ಗಟ್ಟಿಮೇಳ'

ಮಹೇಂದರ್ ಇದಕ್ಕೂ ಶ್ರುತಿಯನ್ನೇ ಬಂಡವಾಳವಾಗಿ ತೊಡಗಿಸಿದ್ದ. ದಯಾಳ್ ತಮಿಳಿನಿಂದ ಕದ್ದು ಕೊಟ್ಟಿದ್ದ ಕತೆಗೆ ಶ್ರುತಿಯನ್ನೇ ನಾಯಕಿ ಮಾಡಿ ಹೀರೋ ಆಗಿ ರಮೇಶ್ ಅರವಿಂದ್‌ನನ್ನು ಹಾಕುತ್ತೇನೆಂದು ಮಹೇಂದರ್ ಮಾತು ಕೊಟ್ಟಿದ್ದ. ನಂಬಿದ ಶ್ರುತಿ ಸಂಭಾವನೆಯಿಲ್ಲದೇ ರಮೇಶ್ ಯಾದವ್ ಪಾಲುದಾರಿಕೆಯಲ್ಲಿ ಚಿತ್ರ ನಿರ್ಮಿಸಲು ಒಪ್ಪಿಗೆ ಕೊಟ್ಟಿದ್ದರು. ಆದರೆ ಕೊನೇ ಗಳಿಗೆಯಲ್ಲಿ ತಾನೇ ಹೀರೋ ಆಗುತ್ತೇನೆಂದು ಹಠಕ್ಕೆ ಬಿದ್ದ. ತನ್ನ ಸ್ಟಾರ್‌ವ್ಯಾಲ್ಯುಗೆ ತಕ್ಕಂತೆ ರಮೇಶ್ ಹೀರೋ ಆಗುವುದೇ ಬೇರೆ, ಗಂಡ ಮಹೇಂದರ್‌ಗೆ ಹೀರೋಯಿನ್ನಾಗುವ ಲೆಕ್ಕಾಚಾರವೇ ಬೇರೆ.

ವಿಧಿಯಿಲ್ಲದೇ ನಟಿಸಿದ ಶ್ರುತಿ ತನ್ನ ನಿಸ್ಸಹಾಯಕತೆಗಾಗಿ ಮೈಪರಚಿಕೊಂಡಳೇ ಹೊರತು ಬೇರೆ ದಾರಿಯಾದರೂ ಎಲ್ಲಿತ್ತು? ತನ್ನ ಪತ್ನಿಯಾದ ಮಾತ್ರಕ್ಕೆ ಆಕೆಯ ವರ್ಚಸ್ಸು, ಸ್ಟಾರ್‌ವ್ಯಾಲ್ಯೂ ಯಾವುದನ್ನೂ ಲೆಕ್ಕಿಸದೇ ತಾನೇ ಹೀರೋ ಆದ ಮಹೇಂದರ್ ಓರ್ವ ಸ್ವಾರ್ಥಿಯೇ ಹೊರತು 'ದಿಲ್‌ದಾರ್' ಗಂಡ ಅನ್ನಿಸಿಕೊಳ್ಳಲೇ ಇಲ್ಲ, ನಟನೆಯೇ ಗೊತ್ತಿಲ್ಲದ ಮಹೇಂದರ್ ಎದುರು ಆತನ ಪತ್ನಿಯೆಂಬ ಒಂದೇ ಕಾರಣಕ್ಕೆ ಶ್ರುತಿ ಹೀರೋಯಿನ್ನಾಗಬೇಕೆ? ಶ್ರುತಿಗೆ ಇದು ಮೂರನೇ ಆಘಾತ ಮತ್ತು ಅವಮಾನವಾಗಿತ್ತು, ಮಹೇಂದರ್ ಬಗ್ಗೆ ಅಸಹ್ಯ ಹುಟ್ಟಲು ಇದಿಷ್ಟೇ ಅಲ್ಲ, ಇಂಥ ಸಾಲುಸಾಲು ಅವಮಾನ-ಅನ್ಯಾಯಗಳನ್ನು ಶ್ರುತಿ ಎಷ್ಟು ದಿನ ತಾನೇ ಸಹಿಸಿಯಾಳು?

ಅವನೊಳಗೊಬ್ಬ ಸೈಕಿಕ್ ಅವಿತಿದ್ದನೆ?

ಸ್ವಭಾವತಃ ಮಹೇಂದರ್ ವಿಪರೀತ ಸೋಮಾರಿ ಮತ್ತು ಕೀಳರಿಮೆಯಿಂದ ಬಳಲುತ್ತಿದ್ದ. ಪ್ರತಿ ಸಂಜೆಯಾದರೆ ಕುಡಿದರಷ್ಟೇ ನಿದ್ದೆ, ರಾತ್ರಿಯಿಡೀ ಮಲಗಿ ಬೆಳಿಗ್ಗೆ 6 ಕ್ಕೆ ಎದ್ದರೂ ತಿಂಡಿ ತಿಂದವನೇ ಮತ್ತೆ ಹೊದ್ದು ಮಲಗಿ ಬಿಡುತ್ತಿದ್ದ. ಜೊತೆಗೆ ಅನುಮಾನ ಪಿಶಾಚಿ. ಶೃತಿ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾದ ನಂತರ ಬಂದೆದ್ದು ಸ್ವಂತದೊಂದು ಮೊಬೈಲ್ ಫೋನ್ ಇಟ್ಟುಕೊಂಡಿದ್ದು ಬಿಟ್ಟರೆ ಮದುವೆಯಾಗಿ ಹತ್ತು ವರ್ಷಗಳಾದರೂ ಆಕೆಗೊಂದು ಸ್ವಂತ ಸೆಲ್‌ಫೋನ್ ಇರಗೊಡಲಿಲ್ಲ.

ಹೆಸರಿಗಷ್ಟೇ ಶೃತಿಯ ನಂಬರಾದರೂ ಅದನ್ನು ಆಪರೇಟ್ ಮಾಡುತ್ತಿದ್ದದ್ದು ಮಹೇಂದರ್. ಕರೆ ಮಾಡಿದ್ದು ಯಾರು? ಏನು ವಿಷಯ ಇತ್ಯಾದಿ ಪ್ರತಿಯೊಂದಕ್ಕೂ ವರದಿ ಒಪ್ಪಿಸಬೇಕು. ಸಣ್ಣಪುಟ್ಟ ವಿಷಯಕ್ಕೂ ವಿಪರೀತ ಸಿಟ್ಟು ಮಾಡಿಕೊಂಡು ಕೋಣೆ ಹೊಕ್ಕು ಕಿಟಕಿ ಬಾಗಿಲು ಹಾಕಿಕೊಂಡನೆಂದರೆ ಕೆಲವೊಮ್ಮೆ ಮೂರು ದಿನಗಳಾದರೂ ಹೊರಬರುತ್ತಿರಲಿಲ್ಲ, ಕತ್ತಲ ಕೋಣೆಯಲ್ಲಿ ಮಲ-ಮೂತ್ರಕ್ಕೂ ಕದಲದೇ ಊಟ-ನೀರು ಎಲ್ಲವನ್ನೂ ತ್ಯಜಿಸಿ ಕುಂತ ಜಾಗದಿಂದ ಅಲ್ಲಾಡದೇ ಹಠಕ್ಕೆ ಬಿದ್ದು ಕುಂತು ಬಿಡುತ್ತಿದ್ದ.

ಮಹೇಂದರ್‌ನೊಳಗೊಬ್ಬ ಸೈಕಿಕ್ ಇರಬಹುದೆಂಬ ಸಂಗತಿ ಗೊತ್ತಾಗುವ ಹೊತ್ತಿಗೆ ಶೃತಿ ಮದುವೆಯಾಗಿ ಆರು ತಿಂಗಳಾಗಿತ್ತು, ಕೆಲವೊಮ್ಮೆ ಚಕ್ಕಳ ಮಕ್ಕಳ ಹಾಕಿ ಶೂನ್ಯವನ್ನೇ ದಿಟ್ಟಿಸುತ್ತಾ ದಿನವಿಡೀ ಕೂತು ಬಿಡುತ್ತಿದ್ದ, ಧೈರ್ಯ, ಆತ್ಮವಿಶ್ವಾಸ, ಯೋಗ್ಯತೆ, ಔದಾರ್ಯ, ರಸಿಕತೆ, ಹಾಸ್ಯಪ್ರಜ್ಞೆ ಯಾವುದೂ ಆತನಲ್ಲಿರಲಿಲ್ಲ, ಸಣ್ಣಪುಟ್ಟ ವಿಷಯಕ್ಕೂ ವಿಪರೀತ ಅನುಮಾನ. ಶಾಪಿಂಗ್‌ಗೆಂದೋ ಯಾವುದಾದರೂ ಕಾರ್ಯಕ್ರಮಕ್ಕೋ ಹೋಗಲೆಂದು ಕಾರ್ ಹೊರತೆಗೆದು ಶೃತಿ ಅಣಿಯಾದರೆ, ಮನೆಗೆ ಬೀಗ ಹಾಕಬೇಕಲ್ಲ; ಒಂದೇ ಬೀಗವನ್ನು ಹತ್ತಾರು ಬಾರಿ ಎಳೆದೆಳೆದು ಲಾಕ್ ಆಗಿದೆಯೆಂಬುದನ್ನು ಮತ್ತೆ ಮತ್ತೆ ಪರೀಕ್ಷಿಸುತ್ತಿದ್ದ.

ಹಾಗೇ ಮುಂಬಾಗಿಲ ಬೀಗ ಹಾಕಿದ್ದು ಇಷ್ಟೆಲ್ಲ ಸರ್ಕಸ್ ಮಾಡಿ ಖಾತರಿಪಡಿಸಿಕೊಂಡೂ ಮತ್ತೆ ಏನೋ ಮರೆತವನಂತೆ ಇದ್ದಕ್ಕಿದ್ದಂತೆ ಬೀಗ ತೆಗೆದು ಹಿಂಬಾಗಿಲ ಬೋಲ್ಟ್ ಹಾಕಿದೆಯಾ? ಕಿಟಕಿ ಮುಚ್ಚಿದೆಯಾ? ಬೀರುವಿನ ಲಾಕ್ ಆಗಿದೆಯಾ? ಎಂದು ಮತ್ತೆ ಮತ್ತೆ ಚೆಕಪ್ ಮಾಡುತ್ತಲೇ ಇರುತ್ತಿದ್ದ. ಹೀಗೆ ಪದೇಪದೇ ಬೀಗ ಹಾಕಿ ಮತ್ತೆ ತೆರೆದು ಹಾಕಿ ಮಾಡುವ ಹೊತ್ತಿಗೆ ಹೋಗಬೇಕಿದ್ದ ಕಾರ್ಯಕ್ರಮವೇ ಮುಗಿದುಹೋಗುತ್ತಿತ್ತು.

'ಅಲ್ರೀ ಅದ್ಯಾಕ್ರೀ ಬೀಗ ಹಾಕೋದಿಕ್ಕೆ ಈ ಪಾಟಿ ಲೇಟು' ಅಂದರೆ "ಯಾಕೋ ನೀನು ಆ ಜಾಗಕ್ಕೆ ಹೋಗೋದು ನನಗಿಷ್ಟವಿಲ್ಲ, ಅದಕ್ಕೇ ಅಪಶಕುನ ಆಯ್ತು. ಎಂದು ಹೊರಡುವುದನ್ನೇ ಕ್ಯಾನ್ಸಲ್ ಮಾಡುತ್ತಿದ್ದ. ದುಡ್ಡಿನ ವಿಷಯದಲ್ಲೂ ಮಹೇಂದರ್‌ನದ್ದು ಇದೇ ಬುದ್ಧಿ. ಜೇಬಲ್ಲಿ ಮೂರೋ ನಾಲ್ಕೋ ಸಾವಿರ ರೂಪಾಯಿಗಳಿದ್ದರೆ ಅದನ್ನು ಮತ್ತೆಮತ್ತೆ ತೆಗೆದು ಪದೇಪದೇ ಎಣಿಸುತ್ತಲೇ ಜೇಬಿನಿಂದ ಜೇಬಿಗೆ ಬದಲಾಯಿಸುತ್ತಲೇ ಇರುತ್ತಿದ್ದ, ಯಾರಾದರೂ ಒಂದೆರಡು ನೋಟುಗಳನ್ನು ಎಗರಿಸಿಯಾರು ಎಂಬ ಅನುಮಾನ!

ಇನ್ನು ಮನೆಯಲ್ಲಿ ಐವತ್ತೋ ಎಂಬತ್ತೋ ಸಾವಿರದಷ್ಟು ನೋಟುಗಳಿದ್ದರೆ ನಡುರಾತ್ರಿಯೆದ್ದು ಅದನ್ನು ಎಣಿಸುತ್ತಾ ಕೂತು ಬಿಡುತ್ತಿದ್ದ. ಹಾಗೇ ಎಣಿಸಿ ಬೆಡ್‌ರೂಮಿನಲ್ಲಿಟ್ಟು ಮತ್ತೆ ಕೆಲ ಸಮಯದ ನಂತರ ಎದ್ದು ಮತ್ತೆ ಎಣಿಸಿ ಅದನ್ನು ಲಾಕರ್‌ನಲ್ಲಿಡುತ್ತಿದ್ದ. ಹೀಗೆ ರಾತ್ರಿಯಿಡೀ ನೋಟಿನ ಕಂತೆಗಳನ್ನು ತೆಗೆತೆಗೆದು ಎಣಿಸುವುದು, ಬೇರೆ ಬೇರೆ ಜಾಗಗಳಲ್ಲಿ ಅವಿತಿಡುವುದು ಮಾಡುತ್ತಲೇ ಇರುತ್ತಿದ್ದ. ಆತನ ಇಂಥದ್ದೇ ಮನಸ್ಥಿತಿಗೆ ತಕ್ಕಂತೆ ಗಂಟೆಗಟ್ಟಲೇ ಸ್ನಾನ ಮಾಡುತ್ತಿದ್ದ. ಎಲ್ಲಿ ಕೊಳೆ ಹೋಗಿಲ್ಲವೋ, ಸೋಪು ಸರಿಯಾಗಿ ಹಚ್ಚಿಲ್ಲವೋ ಎಂದು ಗುಮಾನಿಗೆ ಬಿದ್ದು ಕೆಲವೊಮ್ಮೆ 6 ಗಂಟೆಯ ತನಕವೂ ಸ್ನಾನ ಮಾಡುತ್ತಲೇ ಇರುತ್ತಿದ್ದ.

ಇನ್ನು ಸ್ವಚ್ಛತೆಯ ವಿಷಯಕ್ಕೆ ಬಂದರೆ ಮಹೇಂದರ್ ಎಂಥಾ ಮೂರ್ಖನೆಂದರೆ ಕೆಲವೊಮ್ಮೆ ಶೇವಿಂಗ್ ಕ್ರೀಮ್‌ನಿಂದ ಹಲ್ಲುಜ್ಜಿ ಬಿಡುತ್ತಿದ್ದ, ಟೂಥ್ ಪೇಸ್ಟ್ ಬಳಸಿ ಶೇವಿಂಗ್ ಮಾಡುತ್ತಿದ್ದ. ಶೃತಿ ತನಗೆಂದು ತರಿಸಿಕೊಂಡ ಪೌಡರ್, ಸೆಂಟು, ಕ್ರೀಮುಗಳನ್ನು ಯಾವುದೇ ಪರಿಜ್ಞಾನವಿಲ್ಲದೇ ಹುಚ್ಚುಹುಚ್ಚಾಗಿ ಬಳಸಿ ಏನೆಲ್ಲಾ ಅನಾಹುತ ಮಾಡಿಕೊಳ್ಳುತ್ತಿದ್ದನೆಂದರೆ, ಒಮ್ಮೆ ಶೃತಿ ತರಿಸಿಟ್ಟುಕೊಂಡಿದ್ದ ಹೇರ್ ರಿಮೂವರ್ ಅನ್ನು ಮೌತ್ ಫ್ರೆಷನರ್ ಎಂದು ಬಾಯಿಗೆ ಹೊಡಕೊಂಡು ಬಾಯಿ, ನಾಲಿಗೆ, ಗಂಟಲ ತುಂಬ ಸುಟ್ಟು ಬೊಬ್ಬೆಗಳೆದ್ದು ತಿಂಗಳುಗಟ್ಟಲೇ ಕೀವು ಬರಿಸಿಕೊಂಡು ನರಳಾಡಿಬಿಟ್ಟ.

ರಸಿಕತೆಯಲ್ಲೂ ಮಹೇಂದರ್ ಜೀರೋ. ಮಗಳು ಮಿಲಿ ಹುಟ್ಟಿ ಕೆಲವೇ ತಿಂಗಳಿಗೆ ಏಕಾಏಕಿ ಶಕ್ತಿಹೀನನಂತಾದ ಮಹೇಂದರ್‌ಗೆ ಚಿಕಿತ್ಸೆ ಕೊಡಿಸಲೆಂದೇ ಶೃತಿ ಪಟ್ಟ ಪಾಡು ಅಷ್ಟಿಷ್ಟಲ್ಲ, ಮನೆಯಲ್ಲೇ ವಿಶೇಷ ಜಿಮ್ ಮಾಡಿಕೊಟ್ಟರೆ ಒಂದೇ ಒಂದು ದಿನ ಡಂಬಲ್ಸ್ ಎತ್ತಲಿಲ್ಲ, ನರದೌರ್ಬಲ್ಯದ ನಿವಾರಣೆಗೆಂದು ಯೋಗದ ಗುರು ಗಂಗಾಧರ್ ಎಂಬುವವರನ್ನು ಶೃತಿಯೇ ದುಡ್ಡು ಕೊಟ್ಟು ಮನೆಗೆ ಕರೆಸಿಕೊಂಡರೆ ಒಂದೇ ಒಂದು ಆಸನವನ್ನೂ ಹಾಕದೇ ಮಹೇಂದರ್ ಸೊಂಟ ಹಿಡಿದು ಮಲಗಿಬಿಡುತ್ತಿದ್ದ. ಬಂದದಾರಿಗೆ ಸುಂಕವಿಲ್ಲದೇ ವಾಪಸ್ಸಾದರು ಯೋಗದ ಗುರು.

ಹೋಗಲಿ ಇದ್ದ ಒಬ್ಬಳೇ ಮಗಳ ಬಗ್ಗೆಯಾದರೂ ಅಕ್ಕರೆಯಿತ್ತಾ ಎಂದರೆ, ಮಗಳು ಯಾವ ಸ್ಕೂಲು, ಯಾವ ಕ್ಲಾಸು, ಎಷ್ಟು ಫೀಜು, ಯಾವ ಸಿಲೇಬಸ್ಸು ಇತ್ಯಾದಿ ಯಾವುದೂ ಆತನಿಗೆ ಬೇಕಿರಲಿಲ್ಲ, ಮಗಳಿಗೆ ಒಳ್ಳೇ ಸ್ಕೂಲು ಯಾವುದೆಂದು ಶೃತಿ ತಲೆ ಕೆಡಿಸಿಕೊಂಡರೆ ಹೆಣ್ಣು ಮಕ್ಕಳಿಗೆ ಯಾವ ಸ್ಕೂಲಾದರೆ ಏನು ಎಂದು ಉಡಾಫೆ ಹಾರಿಸಿದ್ದ. ಒಂದೇ ಒಂದು ದಿನ ಶಾಲೆಗೆ ಹೋಗಿ ಮಗಳನ್ನು ಕರೆತರಲಿಲ್ಲ, ಪ್ರತಿನಿತ್ಯ ಶೃತಿಯೇ ಕಾರು ಕೊಂಡೊಯ್ದು ಮಗಳನ್ನು ತರಬೇಕು. ಮಗಳ ಶಾಲೆಯ ಡೈರಿಯಲ್ಲಿ ಮಹೇಂದರ್ ಸಹಿ ಹಾಕಿದ್ದೇ ಅಪರೂಪ.

ಶೃತಿಯ ಗಳಿಕೆಯನ್ನು ಲಪಟಾಯಿಸಿ ಕದ್ದು ಆಸ್ತಿ ಖರೀದಿಸುವುದರಲ್ಲಿ ಮಹೇಂದರ್‌ಗಿದ್ದ ಆಸಕ್ತಿ ಮನೆ ಖರ್ಚಿನಲ್ಲಾಗಲಿ, ಮಗಳ ಆರೈಕೆಯಲ್ಲಾಗಲಿ, ಪತ್ನಿಯ ಯೋಗಕ್ಷೇಮ ನಿರ್ವಹಣೆಯಲ್ಲಾಗಲಿ ಇರಲೇ ಇಲ್ಲ.

ಇಂಥ ಸೈಕೋಪಾತ್ ವ್ಯಕ್ತಿತ್ವವನ್ನು ಯಾವ ಹೆಣ್ಣು ಮಗಳಾದರೂ ಯಾವ ಕಾರಣಕ್ಕಂಥ ಎಷ್ಟು ದಿನ ತಾನೇ ಸಹಿಸುತ್ತಾರೆ?


ಭಜರಂಗಿ-ಪೊಲೀಸ್ ನಡುವೆ ಲವ್ ಶ್ರೀರಾಮ್
ಚೆಡ್ಡಿ ಶೇಣವನ ಬಂಧನ ಯಾವಾಗ?



ಮನುಷ್ಯತ್ವವೇ ಇಲ್ಲದ ಮೃಗ ಈ ಜಗದೀಶ ಶೇಣವ ಎಂಬ ಚೆಡ್ಡಿ. "ಹಿಂದೂ ಯುವತಿಯರ ಮೇಲೆ ಕಣ್ಣು ಹಾಕುವ ಮುಸ್ಲಿಮರ ಕೈಕಾಲು ಕಡಿಯುತ್ತೇವೆ. ಇಲ್ಲಾ ಕೊಂದೇ ಹಾಕುತ್ತೇವೆ" ಎಂದು ಈ ದುಷ್ಟ ಪೊಲೀಸ್ ಠಾಣೆಯ ಮುಂದೇ ಭಾಷಣ ಕುಟ್ಟುತ್ತಾನೆ. ಅದನ್ನು ದಕ್ಕಿಸಿಕೊಂಡು ಬಿಡಾಡಿ ದನದಂತೆ ತಿರುಗುತ್ತಾನೆ. ಜನರ ಪ್ರತಿಭಟನೆ ತೀವ್ರವಾದಾಗ ಇವನ ಮೇಲೆ ಕೇಸು ದಾಖಲಾಗುತ್ತದೆ. ಕೇಸು ದಾಖಲಾಗಿ ನಾಲ್ಕು ದಿನವಾದರೂ ಇವನನ್ನು ಬಂಧಿಸಲೊಲ್ಲರು ಕರಾವಳಿಯ ಪೊಲೀಸರು.

ಕರಾವಳಿಯ ಪೊಲೀಸ್ ಇಲಾಖೆಯಲ್ಲಿ ಗೂಟ ಬಡಿದು ಕುಳಿತಿರುವ ಕೆಲ ಅಧಿಕಾರಿಗಳು, ನೂರಾರು ಪೊಲೀಸರು ಚೆಡ್ಡಿ ಮನಸ್ಸಿನವರೇ ಆಗಿದ್ದು, ಭಜರಂಗಿಗಳೊಂದಿಗೆ ದೋ-ನಂಬರ್ ದಂಧೆಯಲ್ಲೂ ಪಾರ್ಟನರ್ಸ್ ಆಗಿದ್ದಾರೆ. ಈ ಕಾರಣಕ್ಕಾಗಿಯೇ ಶೇಣವನಂತಹ ಗೂಂಡಾಗಳು ಅಲ್ಪಸಂಖ್ಯಾತರ ವಿರುದ್ಧ ಬಹುಸಂಖ್ಯಾತರನ್ನು ಬಹಿರಂಗವಾಗಿಯೇ ಎತ್ತಿಕಟ್ಟುತ್ತಾ ಕಾನೂನು ಉಲ್ಲಂಘಿಸಿದರೂ ಪೊಲೀಸರ ಕಣ್ಣಿಗದು ಕಾಣುವುದೇ ಇಲ್ಲ, ಕಿವಿಗಳಿಗೆ ಕೇಳಿಸುವುದೇ ಇಲ್ಲ, ಬದಲಾಗಿ ಶೇಣವನಂತವರನ್ನು ರಕ್ಷಿಸುವುದೇ ತಮ್ಮ ಕೆಲಸ ಎಂಬಂತಾಡುತ್ತಿದ್ದಾರೆ ಇಲ್ಲಿನ ಬಹುತೇಕ ಪೊಲೀಸರು.

ಇತ್ತೀಚೆಗಷ್ಟೇ 'ಲವ್ ಜೆಹಾದ್' ಎಂಬ ತಮ್ಮ ಕಪೋಲಕಲ್ಪಿತ ಕತೆಯನ್ನಿಟ್ಟುಕೊಂಡು ವಿ.ಎಚ್.ಪಿ. ಮತ್ತು ಭಜರಂಗದಳಗಳು ಕೋಣಾಜೆ ಠಾಣೆಯ ಎದುರು ಪ್ರತಿಭಟನೆ ನಡೆಸಿದ್ದವು. ಅಂದು ತನ್ನ ಲಂಗುಲಗಾಮಿಲ್ಲದ ನಾಲಿಗೆಗೆ ಕೆಲಸ ಕೊಟ್ಟವನು ವಿಎಚ್‌ಪಿ ಕಾರ್ಯದರ್ಶಿ, ಲಾಯರ್ ಜಗದೀಶ್ ಶೇಣವ. ಈ ಕ್ರೂರಿ 'ಮುಸ್ಲಿಮರ ಕೈ, ಕಾಲು ಕಡಿಯುತ್ತೇವೆ' ಎಂದು ಪೊಲೀಸ್ ಠಾಣೆಯ ಎದುರು, ಪೊಲೀಸರ ಮುಂದೆಯೇ ಅಬ್ಬರಿಸಿದ್ದ.



ಇಡೀ ಪ್ರತಿಭಟನೆಯ ಕಾರ್ಯಕ್ರಮವನ್ನು ಪೊಲೀಸರು ವಿಡಿಯೋ ಶೂಟಿಂಗ್ ಮಾಡಿಕೊಂಡಿದ್ದರು. ಆದರೆ ಕಾನೂನು ಉಲ್ಲಂಘಿಸಿದ ಶೇಣವನನ್ನು ಮಾತ್ರ ಬಂಧಿಸಲೇ ಇಲ್ಲ, ಮರುದಿನ ಕರಾವಳಿಯ ಪತ್ರಿಕೆಗಳಲ್ಲಿ ಇದು ಬ್ಯಾನರ್ ಸುದ್ದಿಯಾಗಿ ಬಂದು, ಅಲ್ಪಸಂಖ್ಯಾತರಲ್ಲಿ ಭಯ ಹುಟ್ಟಿಸಿತು. ಆಗಲೂ ಸುಮ್ಮನಿದ್ದ ಪೊಲೀಸರ ಮುಠ್ಠಾಳತನ ಕಂಡು ಪ್ರಗತಿಪರರಿಗೆ ಅಸಹ್ಯವಾಯಿತು. ಆಗಿನಿಂದಲೇ ಹಲವಾರು ಸಂಘಟನೆಗಳು ಬೀದಿ ಗಿಳಿದು ಶೇಣವನನ್ನು ಬಂಧಿಸುವಂತೆ ಆಗ್ರಹ ಮಾಡಿದರೂ ಪೊಲೀಸರು ಅಲ್ಲಾಡಲೇ ಇಲ್ಲ, ಇದು ಕರಾವಳಿಯ ಪೊಲೀಸ್ ಠಾಣೆಗಳು ಕೇಸರಿಕರಣ ಗೊಳ್ಳುತ್ತಿರುವುದಕ್ಕೆ ಮತ್ತೊಂದು ನಿದರ್ಶನವಷ್ಟೇ. ಡಿವೈಎಫ್‌ಐ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಮುಸ್ಲಿಂ ವರ್ತಕರ ಸಂಘ, ಮಂಗಳೂರು ಸೆಂಟ್ರಲ್ ಕಮಿಟಿ ಮುಂತಾದ ಸಂಘಟನೆಗಳ ಪ್ರತಿಭಟನೆಯ ಕಾವು ಕೊನೆಗೂ ಕೋಣಾಜೆ ಠಾಣೆಗೆ ತಟ್ಟಿತು. ಆದರೆ ವಿಡಿಯೋದಲ್ಲಿನ ಭಾಷಣದ ತುಣುಕು ಡಿಲೀಟ್ ಆಗಿದೆ ಎಂದು ಹೇಳಿದ ಪೊಲೀಸರು




ಶೇಣವನ ರಕ್ಷಣೆಗೆ ನಿಂತರು. ವಿಡಿಯೋ ಶೂಟಿಂಗ್ ಮಾಡಿದ್ದ ಚೆಡ್ಡಿ ಕಾನ್ಸಟೇಬಲ್ ಭಾಸ್ಕರ್ ಈ ಕಿತಾಪತಿ ಮಾಡಿದ್ದ.

ಪ್ರಗತಿಪರ ಸಂಘಟನೆಗಳು ಎಸ್ಪಿ ಸುಬ್ರಮಣ್ಯೇಶ್ವರ್ ರಾವ್ ಗಮನಕ್ಕೆ ಈ ವಿಷಯವನ್ನು ತಂದ ಮೇಲೆ ಕೋಣಾಜೆ ಪೊಲೀಸರು ಬಗ್ಗಲೇಬೇಕಾಯಿತು. ಈಗ ಭಜರಂಗಿ ಕಾನ್ಸಟೇಬಲ್ ಭಾಸ್ಕರನನ್ನು ಸಸ್ಪೆಂಡ್ ಮಾಡಿ, ಜಗದೀಶ ಶೇಣವನ ಮೇಲೆ 153 ಬಿ, 295 ಎ ಕಲಮುಗಳ ಅಡಿ ಕಾಟಾಚಾರಕ್ಕೆ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ದಾಖಲಿಸಿ ನಾಲ್ಕು ದಿನ ಕಳೆದಿದೆ. ಪತ್ರಿಕೆ ಅಚ್ಚಿಗೆ ಹೋಗುವ ಈ ಹೊತ್ತಿನಲ್ಲಿ ಇನ್ನೂ ಶೇಣವನ ಬಂಧನವಾಗಿಲ್ಲ, ಇದು ಪೊಲೀಸ್-ಭಜರಂಗಿಗಳ ನಡುವಿನ 'ಲವ್ ಶ್ರೀರಾಮ್' ಸಂಬಂಧಕ್ಕೆ ಒಂದು ಉದಾಹರಣೆ ಮಾತ್ರ.

ದಕ್ಷರಾದ ಐಜಿಪಿ ಗೋಪಾಲ್ ಹೊಸೂರು, ಎಸ್ಪಿ ಸುಬ್ರಮಣ್ಯೇಶ್ವರ ರಾವ್ ಶೇಣವನಿಗೆ ತಕ್ಕ ಶಿಕ್ಷೆ ಕೊಡಿಸುತ್ತಾರೆಂದು ನಂಬೋಣವೆ? ಹಾಗೆಯೇ ಕೋಣಾಜೆ ಠಾಣೆಯ ಉಪನಿರೀಕ್ಷಕನನ್ನು ಸಸ್ಪೆಂಡ್ ಮಾಡಬೇಕಲ್ಲವೆ? ಎಲ್ಲಕ್ಕೂ ಮೊದಲಾಗಿ ಕರಾವಳಿಯ ಠಾಣೆಗಳಲ್ಲಿ ಝೇಂಡಾ ಹೊಡೆದು ಕುಳಿತಿರುವ ನೂರಾರು ಕೋಮುವಾದಿ ಪೊಲೀಸ್ ಚೆಡ್ಡಿಗಳನ್ನು ಅಲ್ಲಿಂದ ದೂರಕ್ಕೆ ವರ್ಗಾವಣೆ ಮಾಡಬೇಕಲ್ಲವೇ?

● ಮಲ್ಲಿ

'ಲವ್ ಜೆಹಾದ್' ಭೂತ!



ಕೋಣಾಜೆ ಪೊಲೀಸ್ ಠಾಣಾ ವ್ಯಾಪ್ತಿಯ ನರಿಂಗಾನ ಪೊಟ್ಟೆಳಿಗೆಯ ರಮ್ಯಾಳು ತನ್ನ ಪ್ರಿಯತಮನ ಜೊತೆ ಓಡಿಹೋಗಿದ್ದಾಳೆ. ಪಕ್ಕದ ಮನೆಯಲ್ಲಿದ್ದ ಮೂರು ಮಕ್ಕಳ ತಂದೆ ಮಹಮ್ಮದ್ ಎನ್ನುವಾತನನ್ನು ಪ್ರೀತಿಸುತ್ತಿದ್ದ ರಮ್ಯಾ ಮಹಮ್ಮದ್‌ನೊಂದಿಗೆ ಪರಾರಿಯಾಗಿದ್ದಾಳೆ.

ಇಂಥದ್ದನ್ನೇ ಕಾಯುತ್ತಾ ಕುಳಿತಿರುವ ಇಲ್ಲಿನ ಭಜರಂಗಿಗಳು 'ರಮ್ಯಾಳ ಅಪಹರಣವಾಗಿದೆ. ಇದು ಲವ್ ಜೆಹಾದ್' ಎಂದೆಲ್ಲ ಹಾರಾಡಿದ್ದವು. ಶೇಣವನಂತಹ ದುಷ್ಟ ಪೊಲೀಸ್ ಠಾಣೆಯ ಎದುರೇ ಕಡಿಯುವ, ಕೊಲ್ಲುವ ಮಾತುಗಳನ್ನಾಡಿದ್ದ ಈಗ ಅವನ ಮೇಲೆ ಕೇಸೇನೋ ದಾಖಲಾಗಿದೆ. ಆದರೆ ಬಂಧನವಾಗಿ ಶಿಕ್ಷೆ ಆಗೋದ್ಯಾವಾಗ?

ಪೊಲೀಸರ ಡಬಲ್ ಗೇಮ್!

ಈ ಹಿಂದೆ 'ಕಾನೂನುರೀತ್ಯಾ ನಿಷೇಧಿತವಾಗಿರುವ ಬೆತ್ತಲೆ ಪ್ರದರ್ಶನಕ್ಕೆ ಅವಕಾಶ ಕೊಡಬೇಡಿ' ಎಂದು 'ಕರಾವಳಿ ಅಲೆ' ಬರೆದಾಗ, ಮಧ್ಯಾಹ್ನ ಎಫ್.ಐ.ಆರ್. ಹಾಕಿ ಸಂಜೆ 'ಕರಾವಳಿ ಅಲೆ'ಯ ಸಂಪಾದಕ ಬಿ.ವಿ. ಸೀತಾರಾಮ್ ಮತ್ತು ಅವರ ಪತ್ನಿಯನ್ನು ಬಂಧಿಸಿದ್ದ ಮಂಗಳೂರು ಪೊಲೀಸರು "ಮುಸ್ಲಿಮರ ಕೈಕಾಲು ಕಡಿಯುತ್ತೇವೆ" ಎಂದು ಬಹಿರಂಗವಾಗಿ ಹಾರಾಡಿದ ಶೇಣವನ ಮೇಲೆ ಎಫ್.ಐ.ಆರ್. ಹಾಕಲು ಹಿಂದೆಮುಂದೆ ನೋಡಿದರು. ಇದು ಕೋಮುವಾದಿಗಳಾಗುತ್ತಿರುವ ಕರಾವಳಿ ಪೊಲೀಸರ 'ಡಬಲ್ ಗೇಮ್'ಗೆ ಒಂದು ಸಣ್ಣ ಉದಾಹರಣೆಯಷ್ಟೇ.

ಬಹುತೇಕ ಪೊಲೀಸ್ ಅಧಿಕಾರಿಗಳಿಲ್ಲಿ ಸಂಘ ಪರಿವಾರದ ನೆರಳಲ್ಲೇ ಬದುಕುತ್ತಿದ್ದಾರೆ. ಎಸ್.ಐ.ಗಳಾದ ಕಂಕನಾಡಿಯ ಪ್ರಕಾಶ, ಬಂಟ್ವಾಳದ ಶಿವಪ್ರಕಾಶ್, ಕಾವೂರಿನ ಅನಂತ ಪದ್ಮನಾಭ, ಬಜಪೆಯ ಪ್ರಮೋದ್, ಕದ್ರಿಯ ರಾಘವ ಮತ್ತು ಇನ್ಸ್‌ಪೆಕ್ಟರ್‌ಗಳಾದ ವೆಂಕಟೇಶ್ ಪ್ರಸನ್ನ, ವಿನಯ ಗಾಂವಕರ್-ಇವರೆಲ್ಲ ಕೇಸರಿ ಪಡೆಗೆ ಸಲಾಮು ಹಾಕುವವರೇ ಆಗಿದ್ದಾರೆ. ಇವರಲ್ಲಿ ಒಂದಿಬ್ಬರು ದಕ್ಷರಿರಬಹುದು. ಆದರೆ ಇವರೆಲ್ಲ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಪ್ರಗತಿಪರರ ಮೇಲೆ ನಡೆಸುತ್ತಿರುವ ದೌರ್ಜನ್ಯಗಳಿಗೆ ಲೆಕ್ಕವೇ ಇಲ್ಲ.

ಈಗ ಸಸ್ಪೆಂಡ್ ಆಗಿರುವ ಕೋಣಾಜೆಯ ಕಾನ್ಸ್‌ಟೇಬಲ್ ಭಾಸ್ಕರ ಮಂಗಳೂರು ಗ್ರಾಮಾಂತರ ಪೊಲೀಸ್ ಉಪನಿರೀಕ್ಷಕ ಪ್ರಕಾಶನ ಖಾಸಾ ಸಹೋದರ. ಪೊಲೀಸ್ ಕೆಲಸಕ್ಕೆ ಸೇರುವ ಮೊದಲು ಈ ಇಬ್ಬರೂ ಆರ್‌ಎಸ್‌ಎಸ್ ಕಾರ್ಯಕರ್ತರಾಗಿದ್ದರು. ಆಗ ಖಾಕಿ ಚೆಡ್ಡಿ ಹಾಕಿ ಮಾಡುತ್ತಿದ್ದ ಕೆಲಸವನ್ನೇ ಈಗ ಇವರು ಖಾಕಿ ಪ್ಯಾಂಟು ಹಾಕಿ ಮಾಡುತ್ತಿದ್ದಾರಷ್ಟೇ.....

●


ಬಾಗಲಕೋಟೆ:
ಭಕ್ತರಿಗೆ ಬನಶಂಕರಿ ಜಾತ್ರೆ ಅಧಿಕಾರಿಗಳಿಗೆ ಎಲ್ಲಮ್ಮನ ಜಾತ್ರೆ

ಎಂದಿನಂತೆ ಈ ವರ್ಷವೂ ಮತ್ತೆ ಬನಶಂಕರಿ ಜಾತ್ರೆ ಬರುತ್ತಿದೆ. ಪ್ರತಿವರ್ಷದಂತೆ ಪುಢಾರಿ ರಾಜಕಾರಣಿಗಳು, ಅಧಿಕಾರಿಗಳು ಸಿಕ್ಕಷ್ಟು ಬಾಚುವ ಕೆಲಸವನ್ನು ಶುರು ಮಾಡಿಯೂ ಆಗಿದೆ. ಯಾರದೋ ದುಡ್ಡಲಿ ಎಲ್ಲಮ್ಮನ ಜಾತ್ರೆ ಮಾಡಲು ಡಿ.ಸಿ.ಯಿಂದ ಹಿಡಿದು ಪಿ.ಸಿ.ವರೆಗೆ ಕಳ್ಳಕಾಕರು ನೆರೆಯತೊಡಗಿದ್ದಾರೆ. ಬನಶಂಕರಿ ದೇವಿಯ ಹೆಸರಲ್ಲಿ ಕಳ್ಳರಸಂತೆ ಜಾತ್ರೆಗೂ ಮೊದಲೇ ಉದ್ಘಾಟನೆಗೊಂಡಿದೆ.

ಉತ್ತರ ಕರ್ನಾಟಕದ ಪ್ರಸಿದ್ಧ ಬನಶಂಕರಿ ಜಾತ್ರೆ ಜನವರಿ ತಿಂಗಳಾದ್ಯಂತ ನಡೆಯುತ್ತದೆ. ಐತಿಹಾಸಿಕ ಬಾದಾಮಿಯ ಪಕ್ಕದ ಬನಶಂಕರಿಗೆ ಲಕ್ಷಾಂತರ ಭಕ್ತರು. ಈ ಜಾತ್ರೆಯಲ್ಲಿ ಮನೆಯೊಂದಕ್ಕೆ ಬೇಕಾದ ಸಕಲ ವಸ್ತುಗಳೂ ಲಭ್ಯ. ರೆಡಿಮೇಡ್ ಮನೆ ಬಾಗಿಲುಗಳು, ಕಿಟಕಿಗಳು, ಕೃಷಿ ಉಪಕರಣಗಳು, ಚಪಾತಿ ಮಣೆ, ರೊಟ್ಟಿ ಕೊಣಗಿ... ಎಲ್ಲವೂ ಇಲ್ಲಿ ಲಭ್ಯ. ಸಿನಿಮಾ, ನಾಟಕಗಳ ರಂಗೂ ಉಂಟು. ವಿಟಪುರುಷರಿಗೂ ಅಲ್ಲಲ್ಲಿ ಒಂದಿಷ್ಟು ಮನರಂಜನೆಯ ಸೌಲಭ್ಯವೂ ಲಭ್ಯ!

ಧರ್ಮ, ಸಂಸ್ಕೃತಿ, ದೇವರು-ದಿಂಡರು ಅಂತೆಲ್ಲ ಬೊಂಬಡಾ ಹೊಡೆಯುವ ಚೆಡ್ಡಿ ಪುಢಾರಿಗಳಿಗೂ ಈ ಜಾತ್ರೆ ಜೇಬು ತುಂಬಿಸುವ ಮಾರ್ಕೆಟ್ ಅಷ್ಟೇ. ಬಾದಾಮಿಯ ಚೆಡ್ಡಿ ಶಾಸಕನ ಹಿಂಬಾಲಕರು, ಚೇಲಾ ಅಧಿಕಾರಿಗಳಾಗಲೇ ಕಮಿಷನ್ ದಂಧೆ ಶುರು ಮಾಡಿದ್ದಾರೆ. ಸಂಸದ ಗದ್ದಿಗೌಡರನ ಗುಂಪೇನೂ ಹಿಂದೆ ಬಿದ್ದಿಲ್ಲ.

ಇತ್ತೀಚೆಗಷ್ಟೇ ಐಎಎಸ್ ಎಂದು ಡಿಕ್ಲೇರ್ ಆಗಿರುವ ಜಿಲ್ಲಾಧಿಕಾರಿ ವಿಶ್ವನಾಥನಿಗೆ ಚೆಡ್ಡಿ ಸರ್ಕಾರವೇ ದೇವರಿದ್ದಂತೆ. ಈ ಚೆಡ್ಡಿ ಭಕ್ತ ಜಾತ್ರೆಯಲ್ಲಿ




ತಿಂಗಳುಗಟ್ಟಲೇ ನಡೆಯುವ ಟೆಂಟ್ ಟಾಕೀಸುಗಳಿಗೆ ಪರವಾನಗಿ ನೀಡಲು ಅಂಗಡಿ ತೆಗೆದು ಕುಳಿತಿದ್ದಾನೆ. ಒಂದೂವರೆಯಿಂದ ಎರಡು ಲಕ್ಷ ಕೈಬಿಸಿಯಾದರೆ ಒಂದು ಟೆಂಟ್ ಟಾಕೀಸಿಗೆ ಪರ್ಮಿಷನ್ ಸಿಕ್ಕಂತೆಯೇ. ಹೀಗೆ 10 ರಿಂದ 15 ಟಾಕೀಸುಗಳಿಂದ 'ಕಪ್ಪ' ವಸೂಲಿ ಮಾಡದೇಹೋದರೆ ಬನಶಂಕರಿ ದೇವಿ ಮುನಿಸಿಕೊಳ್ತಾಳೆ ಎಂದೇ ಜಿಲ್ಲಾಡಳಿತ ನಂಬಿರುವಂತಿದೆ. ಡಿ.ಸಿ. ವಿಶ್ವನಾಥನಿಗೆ ಸಾಥ್ ನೀಡುತ್ತಿರುವವನು ಬಾದಾಮಿಯ ಸಾಡೇಸಾಥ್ ತಹಶೀಲ್ದಾರ್ ಮಹೇಶ್ ಕರ್ಜಗಿ. ಈತ ಶಾಸಕ ಪಟ್ಟಣಶೆಟ್ಟಿಯ ಮನೆಯಾಳೂ ಹೌದು.

ಇಷ್ಟೆಲ್ಲ ನಡೆವಾಗ ತೆಪ್ಪಗೆ ಕುಳಿತರೆ ಅದು ತಮ್ಮ ಇಲಾಖೆಗೇ ಕಳಂಕ ಎಂದುಕೊಂಡಿರುವ ಪೊಲೀಸರು ಲೂಟಿಗಿಳಿಯದೇ ಇರುತ್ತಾರೆಯೇ? ಛೇ, ಹೀಗೆಲ್ಲ ನಾವು ಪ್ರಶ್ನಿಸುವುದೂ ತಪ್ಪೇ ಬಿಡಿ. ಜಾತ್ರೆಯ ವೇಳೆ ಬನಶಂಕರಿಯ ಸುತ್ತಮುತ್ತಲಿನ ಪ್ರದೇಶಗಳಿಂದ ಜನರ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಎರಡು ಸಾವಿರ ಡೀಸೆಲ್ ಆಟೋಗಳಿಗೆ ಪರ್ಮಿಷನ್ ನೀಡಲಾಗಿದೆ. ರಾತ್ರಿ-ಹಗಲು ಪ್ಯಾಸೆಂಜರ್ ಓವರ್‌ಲೋಡ್ ಮಾಡಲೂ ಅವಕಾಶ ನೀಡಿ, ಪ್ರತಿ ಆಟೋದಿಂದ ಕೇವಲ 600 ರೂಪಾಯಿ 'ವಂತಿಗೆ' ಪಡೆಯಲು ಪೊಲೀಸರು ನಿರ್ಧರಿಸಿದ್ದಾರೆ. ಮನರಂಜನೆ ಹೆಸರಲ್ಲಿ ಕುಣಿದು ಕುಪ್ಪಳಿಸಲಿರುವ ಅರೆಬೆತ್ತಲೆ ನೃತ್ಯ ತಂಡಗಳಿಂದಲೂ ಸಿಕ್ಕಷ್ಟು ಗಿಂಜಲಾಗುತ್ತಿದೆ. ಶಾಸಕ, ಸಂಸದರಿಗೆ ದೇಣಿಗೆ ನೀಡಿಯೇ ಬಾದಾಮಿ ಪೊಲೀಸ್ ಠಾಣೆಗೆ ವಕ್ಕರಿಸಿರುವ ಧೂಳಖೇಡ್‌ನಿಗೆ ಈ ಜಾತ್ರೆಯಂತೂ ಸುಗ್ಗಿಯ ಕಾಲವೇ. ಧೂಳಖೇಡ್‌ನ ಸದ್ಯದ ಆರಂಭ ನೋಡಿದರೆ ತಿಂಗಳೊಪ್ಪತ್ತಿನಲ್ಲಿ ಒಳ್ಳೆ ಫಸಲು ತೆಗೆಯುವುದು ಗ್ಯಾರಂಟಿ ಎನಿಸತೊಡಗಿದೆ. ನೀರಿಗಿಂತ ಯಥೇಚ್ಛವಾಗಿ ಹರಿಯಲಿರುವ ನಕಲಿ ಸಾರಾಯಿ, ರಾಜಾರೋಷವಾಗಿ ಬಾಜಿ ನಡೆಸಲಿರುವ 24x7 ಜೂಜು ಅಡ್ಡೆಗಳು, ಜಾತ್ರೆಯ ಧೂಳಿನಲ್ಲೇ ಸೈಲೆಂಟಾಗಿ ಜರುಗಿಹೋಗುವ ಹಲವಾರು ದೋನಂಬರ್ ದಂಧೆಗಳು... ಒಂದೇ ಎರಡೇ? ಎಲ್ಲದರಲ್ಲೂ ಲೋಕಲ್ ಚೆಡ್ಡಿ ಪುಢಾರಿಗಳು ತಮ್ಮ ತಮ್ಮ ಪಾಲನ್ನು ಪಡೆಯಲು ಸಜ್ಜಾಗಿಯೇ ಕುಳಿತಿದ್ದಾರೆ.

ಈ ಜಾತ್ರೆ ಎಂದರೆ ಅದು ಸಕಲ ಸರ್ಕಾರಿ ಇಲಾಖೆಗಳಿಗೂ ಕಮಾಯಿ ಮಾಡಿಕೊಳ್ಳುವ ವೇದಿಕೆ ಇದ್ದಂತೆ. ಆರೋಗ್ಯ ಇಲಾಖೆ, ಅಬಕಾರಿ ಇಲಾಖೆ, ಪಿಡಬ್ಲ್ಯೂಡಿ.... ಎಲ್ಲವೂ ತಮ್ಮ ಪಾಲಿಗಾಗಿ ಹೋರಾಡುವುದು ಪ್ರತಿವರ್ಷದ ಸಂಪ್ರದಾಯ.

ಹೊಸ ಎಸ್ಪಿ ಅಭಿಷೇಕ್ ಗೋಯಲ್ ತಾನು ದಕ್ಷ ಎಂದು ಪೋಸ್ ಕೊಡುವುದನ್ನು ನಿಲ್ಲಿಸಿ ಕಾರ್ಯಾಚರಣೆಗೆ ಇಳಿದು ಪೊಲೀಸರ ನುಂಗಾಟಕ್ಕೆ ತಡೆ ಹಾಕಬೇಕಿದೆ. ಬಡಬಗ್ಗರ ಅಂಗಡಿಗಳಿಂದಲೂ ದೋಚುವ ಅಧಿಕಾರಿಗಳು, ಪೊಲೀಸರನ್ನು ಹದ್ದುಬಸ್ತಿನಲ್ಲಿಡಬೇಕಾದ ಜಿಲ್ಲಾಧಿಕಾರಿ ವಿಶ್ವನಾಥನೇ ಲೂಟಿಯ ನೇತೃತ್ವ ವಹಿಸಿರುವುದರಿಂದ ಈ ವರ್ಷದ ಬನಶಂಕರಿ ಜಾತ್ರೆಯೂ ಎಂದಿನಂತೆ ನುಂಗಣ್ಣಗಳ ಹೊಟ್ಟೆಯನ್ನು ತಣ್ಣಗೆ ಮಾಡುವುದು ಮಾತ್ರ ಸತ್ಯ.

● ಮೇಘರಾಜ್



ಮೈಸೂರು: ಜಾತಿ+ ಹಣ, ಜೆಡಿಎಸ್+ ಬಿಜೆಪಿ!

ಮೈಸೂರು-ಚಾಮರಾಜನಗರದ ಎಂಎಲ್‌ಸಿ ಚುನಾ ಣೆ ವಿಚಿತ್ರ ಮೈತ್ರಿಯಲ್ಲಿ ಅಂತ್ಯಗೊಂಡಿದೆ. ಒಂದು ಕಡೆ ಾತಿ, ಹಣದ ಮೈತ್ರಿ. ಇದೇನು ಬಿಡಿ, ಎಲ್ಲ ಕಡೆ ದ್ದದ್ದೇ. ಆದರೆ ಇನ್ನೊಂದು ಕಡೆಯ 'ಅಗೋಚರ' ್ರೈತ್ರಿ ಮಾತ್ರ ನಿಗೂಢವಾಗಿಯೇ ಕೆಲಸ ಮಾಡಿದೆ. ದು ಜೆಡಿಎಸ್, ಬಿಜೆಪಿಗಳ ನಡುವಿನ ಕಣ್ಸನ್ನೆಯ, ಅಲಿಖಿತ, ಘೋಷಿತ ಮೈತ್ರಿ. ಈ ಎರಡೂ ಪಕ್ಷಗಳ ಂಡರ್‌ಸ್ಟ್ಯಾಂಡಿಂಗ್' ಪರಿಣಾಮವಾಗಿ ಎರಡೂ ತಲಾ ಂದೊಂದು ಸ್ಥಾನ ಗೆದ್ದಿವೆ. ಸಿದ್ದರಾಮಯ್ಯ ನೇತೃತ್ವದ ಂಗ್ರೆಸ್ ಸೋತು ಕರ್ಣ್‌ಕರ್ಣ್ ಬಿದ್ದುತ್ತಿದೆ.

ಕಾಂಗ್ರೆಸ್, ಜೆಡಿಎಸ್‌ಗಳ ರಾಜ್ಯಮಟ್ಟದ ಮೈತ್ರಿಯ ರಣದಿಂದ ಇಲ್ಲಿನ ಎರಡು ಸ್ಥಾನ



ಳಿಗಾಗಿ ಕಾಂಗ್ರೆಸ್, ಜೆಡಿಎಸ್ ಾ ಒಂದು ಸ್ಥಾನಕ್ಕೆ ಸ್ಪರ್ಧಿಸಿ, ಬ್ಬರಿಗೊಬ್ಬರು ಸಹಕಾರ ನೀಡಿ ರಡೂ ಸ್ಥಾನಗಳನ್ನು ಗೆಲ್ಲುವ ಾನು ಇತ್ತು, ಎಲ್ಲ ಸರಿಯಾಗಿ ಡೆದಿದ್ದರೆ ಬಿಜೆಪಿಗಿಲ್ಲಿ ಎಂಟ್ರಿಯೇ ಗುತ್ತಿರಲಿಲ್ಲ; ಏಕೆಂದರೆ ಆರು ವಿರದಷ್ಟಿರುವ ಸ್ಥಳೀಯ ಸಂಸ್ಥೆ ದಸ್ಯರ ಪೈಕಿ ಮುಕ್ಕಾಲಿಗಿಂತ ಹೆಚ್ಚಿನವರು ಕಾಂಗ್ರೆಸ್, ಡಿಎಸ್‌ನವರೇ ಆಗಿದ್ದಾರೆ.

ಆದರೆ ಮೇಲ್ಜಾತಿ ಮನಸ್ಸುಗಳು, ಯಥೇಚ್ಛವಾಗಿ ರಿದ ಹಣ ಚುನಾವಣೆಯ ಫಲಿತಾಂಶವನ್ನೇ ದಲಿಸಿಬಿಟ್ಟವು. ಜೆಡಿಎಸ್‌ನಿಂದ ಒಕ್ಕಲಿಗ ಸಂದೇಶ್ ಾಗರಾಜ್, ಬಿಜೆಪಿಯಿಂದ ಲಿಂಗಾಯತ ಕೆ.ಆರ್. ಮಲ್ಲಿ ರ್ಜುನಪ್ಪ ತಮ್ಮ ಜಾತಿಯ ಕಾರಣದಿಂದಲೂ ಲಾಭ ಡೆದರು. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ದಲಿತ ಎನ್.ಮಂಜು ಾಥ್‌ಗೆ ಜಾತಿ, ಹಣ ಬಲವಿರಲಿಲ್ಲ. ಮೇಲಾಗಿ ಆತ ದ್ದರಾಮಯ್ಯ ಸೂಚಿಸಿದ ಕ್ಯಾಂಡಿಡೇಟೂ ಆಗಿರಲಿಲ್ಲ.



ಸಿದ್ದರಾಮಯ್ಯ ಸೂಚಿಸಿದಂತೆ ಕವಿ ಪ್ರೊ. ಗೋವಿಂದಯ್ಯರಿಗೆ ಟಿಕೆಟ್ ನೀಡಿದ್ದರೆ ಕಾಂಗ್ರೆಸ್ ಗೆಲುವು ಸುಲಭವಾಗುತ್ತಿತ್ತೇನೋ?

ಈಗ ಸೋತಿರುವ ಮಂಜುನಾಥ್, "ಸಿದ್ದರಾಮಯ್ಯರ ಪ್ರಭಾವ ಕುಗ್ಗಿರುವುದರಿಂದ ನನಗೆ ಮತಗಳು ಬರಲಿಲ್ಲ" ಎಂದು ಹೇಳುತ್ತ ತನ್ನ ಸೋಲಿಗೆ ಸಿದ್ದುರವರನ್ನು ಹೊಣೆ ಮಾಡಲು ನೋಡುತ್ತಿದ್ದಾನೆ. ಗೆಲ್ಲಿಸಲು ಸಿದ್ದು ಪ್ರಯತ್ನಿಸಿ ರಾದರೂ, ಇಲ್ಲಿ ಬಿಜೆಪಿ ಹರಿಸಿದ ಹಣ, ಲಿಂಗಾಯತರ ಜಾತಿಪ್ರೇಮಗಳು ಕಾಂಗ್ರೆಸ್‌ಗೆ ಹಿನ್ನಡೆ ಉಂಟು ಮಾಡಿವೆ. ಬ್ಬರು ಎಂಪಿಗಳು, ಹನ್ನೊಂದು ಶಾಸಕರು, ಅರ್ಧಕ್ಕಿಂತ ಹೆಚ್ಚು ಸ್ಥಳೀಯ ಸಂಸ್ಥೆ ಸದಸ್ಯರಿದ್ದೂ ಕಾಂಗ್ರೆಸ್ ಸೋಲುವಂತಾಗಲು ಜೆಡಿಎಸ್, ಬಿಜೆಪಿಗಳ ನಡುವೆ ಸ್ಥಳೀಯ ಮಟ್ಟದಲ್ಲಿ ಕಣ್ಸನ್ನೆಯ ಹೊಂದಾಣಿಕೆ ನಡೆದಿರುವುದೂ ಒಂದು ಕಾರಣವಾಗಿದೆ. ಈ ಕೆಳಗಿನ ಅಂಶಗಳೇ ಇದಕ್ಕೆ ಸಾಕ್ಷಿ.

ಜೆಡಿಎಸ್‌ಗೆ ಪ್ರಥಮ ಪ್ರಾಶಸ್ತ್ಯದ ಮತ ಹಾಕಿದ 654 ಮತದಾರರು ಎರಡನೇ ಪ್ರಾಶಸ್ತ್ಯದ ಮತವನ್ನು ಹಾಕೇ ಇಲ್ಲ, ಮೈತ್ರಿಯ ಪ್ರಕಾರ ಇವರೆಲ್ಲ ಎರಡನೇ ಪ್ರಾಶಸ್ತ್ಯದ ಮತವನ್ನು ಕಾಂಗ್ರೆಸ್‌ಗೆ ಹಾಕಬೇಕಿತ್ತು.

ಜೆಡಿಎಸ್‌ಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿದ 1334 ಮತದಾರರು ಎರಡನೇ ಪ್ರಾಶಸ್ತ್ಯದ ಮತವನ್ನು ಬಿಜೆಪಿಗೆ ನೀಡಿದ್ದಾರೆ!

ಬಿಜೆಪಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿದ 1136 ಮತದಾರರು ತಮ್ಮ ಎರಡನೇ ಪ್ರಾಶಸ್ತ್ಯದ ಮತವನ್ನು ಜೆಡಿಎಸ್‌ಗೆ ನೀಡಿದ್ದಾರೆ!

ಹೀಗಾಗಿ ಇಲ್ಲಿ ಪ್ರಬಲ ಜಾತಿ ಮತ್ತು ಹಣ ಗೆದ್ದಂತಾಗಿದೆ! ಮೈಸೂರಿನ ಈ 'ಆಟ'ದ ಹಿಂದೆ ದೊಡ್ಡಗೌಡರ 'ಕೈ' ಇದ್ದರೂ ಇರಬಹುದು!



ಉತ್ತರ ಕನ್ನಡ: ಎಡವಟ್ಟು ಎಂಪಿ ಅನಂತ್ಮಾಣಿಯ ಮಸ್ತಿ ಮಹಿಮೆ!

ನಾಲಿಗೆ ಮನುಷ್ಯನ ಸಂಸ್ಕಾರ ತೋರಿಸುತ್ತದೆ!

ಇದು ಸರ್ವಕಾಲಿಕ ಸತ್ಯ. ಸಂಘ ಪರಿವಾರದ ಹೊಡಿ-ಬಡಿ ಸಂಸ್ಕಾರ-ಸಂಸ್ಕೃತಿಗೆ ಉತ್ತರ ಕನ್ನಡದ ಗುದುಮುರಿಗೆ ಎಂಪಿ ಅನಂತಕುಮಾರ್ ಹೆಗಡೆ "ಜೀವಂತ" ನಿದರ್ಶನ!! ನೈತಿಕ ಸ್ಥೈರ್ಯ-ವಿವೇಚನಾ ಶಕ್ತಿ ಇಲ್ಲದ ಹುಸೀ ಹುಂಬ ಅನಂತ್ಮಾಣಿ ಯಾರಿಗೆ ಬೇಕಿದ್ದರೂ ಬೈದಾಡಿ ಸಂಭ್ರಮಿಸಬಲ್ಲ; ಯಾರಿಗೆ ಬೇಕಿದ್ದರೂ ಕೈ ಎತ್ತಿ ಹೊಡೆಯಬಲ್ಲ; ಕಾಲೆತ್ತಿ ಒದೆಯಲೂ ಹೇಸಲಾರ. ನಾಲ್ಕು ಬಾರಿ ಸಂಸದನಾದರೂ ಮಾನ-ಮರ್ಯಾದೆ ಬರದ ಅನಂತ್ಮಾಣಿಯ ಬುರ್ನಾಸ್ ನಖರಾಗಳು ನಿಲ್ಲುವ ಲಕ್ಷಣಗಳೇ ಕಾಣಿಸುತ್ತಿಲ್ಲ.

ಒಂದು ಕಾಲದಲ್ಲಿ ಹಳ್ಳಿಗಳಿಗೆ ಬುತ್ತಿ ಕಟ್ಟಿಸಿಕೊಂಡು ಹೋಗಿ ಚಡ್ಡಿ ತೊಟ್ಟು, ಬೈಠಕ್ ನಡೆಸಿ ಊರೂರಿಗೆ ಬೆಂಕಿ ಹಾಕುವ ಕೋಮು ಕ್ರೌರ್ಯದ ಕಲೆ ಕಲಿಸುತ್ತಿದ್ದ "ಜಂಗ್ಲಿ" ಅನಂತ್ಮಾಣಿ ಸಂಸದನಾಗಿದ್ದೇ ಉತ್ತರ ಕನ್ನಡದ ಐತಿಹಾಸಿಕ ಮಹಾ ದುರಂತ!!



ಎಂಪಿಯಾದ ನಂತರವಾದರೂ ಅನಂತ್ಮಾಣಿ ಪೂರ್ವಾಶ್ರಮದ ಕಸರತ್ತುಗಳ ಬಿಟ್ಟು "ಮನುಷ್ಯ"ನಾಗಿದ್ದರೆ ಕೊಂಚ ಪಾಪ ಪರಿಹಾರವಾದರೂ ಆಗುತ್ತಿತ್ತೇನೋ? ಆದರೆ ಒಂದೊಂದು ಬಾರಿ ಎಂಪಿಯಾದಾಗಲೂ ಅನಂತ್ಮಾಣಿಯ ಅನಾಹುತಕಾರಿ ಆಟಾಟೋಪ ಡಬ್ಬಲ್ ಆಗುತ್ತಲೇ ಸಾಗಿದೆ. ಈತನ ಪಾತಕಕ್ಕೆ ಬಲಿಯಾಗುತ್ತಿರುವ ಪಾಪದ ಮಂದಿ "ಅಯ್ಯೋ...." ಅನುತ್ತಿದ್ದರೆ, ಬೆಚ್ಚಿ ಬಿದ್ದಿರುವ ಜಿಲ್ಲೆ ಕಣ್ಣು-ಬಾಯಿ ಬಿಟ್ಟುಕೊಂಡು ಅನಂತನ ಅವಾಂತರ ನೋಡುತ್ತಿದೆ.

ಎಂಪಿ ಆಗಿರುವುದರಿಂದ ಅನಂತ್ಮಾಣಿಯ ಹುಚ್ಚಾಟಗಳಿಗೆಲ್ಲ ಸರ್ಕಾರಿ-ಕಾನೂನಿನ ಸಿಂಧುತ್ವ ಬೇರೆ ಸಿಗುತ್ತಿದೆ. ಈ ಎಂಪಿ ಸಾಹೇಬರಿಗೆ ದಿನಕ್ಕೊಂದು ದಾದಾಗಿರಿ-ರ್‍ಯಾಂಬೋ ವರಸೆ ಪ್ರದರ್ಶಿಸದಿದ್ದರೆ ಉಂಡ ಅನ್ನ ಅರಗುವುದಿಲ್ಲ, ಸಾಬರ ಬಗ್ಗೆ ವರುಣ ಗಾಂಧಿಗಿಂತಲೂ ಕ್ರೂರವಾಗಿ-ಕೊಳಕಾಗಿ ಮಾತಾಡಬಲ್ಲ ಅನಂತ್ಮಾಣಿ ಶುದ್ಧ "ಧರ್ಮಾತ್ಮ"ನೇನೂ ಅಲ್ಲ ಬಿಡಿ. ಈ ವಕ್ರಬುದ್ಧಿಗೆ ಕಾಲು ಕೆರೆದು ಜಗಳ ಮಾಡಲು ಈಗೀಗ ಸಾಬರು ಸಿಗುತ್ತಿಲ್ಲ, ಹೀಗಾಗಿ ಸ್ವಪಕ್ಷ ಬಿಜೆಪಿಯ ಹಿರಿ-ಮರಿ ನಾಯಕರು, ಅಮಾಯಕ ಕಾರ್ಯಕರ್ತರು ಅಥವಾ ಅಧಿಕಾರಿಗಳು ಅನಂತ್ಮಾಣಿಯ ದಾದಾಗಿರಿ ದಾಳಿಗೆ ತುತ್ತಾಗುವಂತಾಗಿದೆ...


ಮೊದಲ ಬಾರಿ ಎಂಪಿಯಾಗುತ್ತಿದ್ದಂತೆಯೇ ಸ್ವಪಕ್ಷದ ಜಿಲ್ಲಾಧ್ಯಕ್ಷನಾಗಿದ್ದ ಶಿವರಾಮ್ ಹೆಬ್ಬಾರ್ ಮೇಲೆ ಬಿದ್ದು ಕೆನ್ನೆ-ಕೆನ್ನೆಗೆ ಬಾರಿಸಿದ್ದ ಅನಂತ್ಮಾಣಿ. ಇದರಿಂದ ಕಂಗಾಲಾದ ಹೆಬ್ಬಾರ್ ಚಡ್ಡಿ ಪಾರ್ಟಿಗೇ ಗುಡ್‌ಬೈ ಹೇಳಿ ಕಾಂಗ್ರೆಸ್ ಸೇರಿಕೊಂಡರು. ಇದರ ಬೆನ್ನಿಗೇ ಸಿದ್ಧಾಪುರದಲ್ಲಿ ಇಂಜಿನಿಯರ್ ಒಬ್ಬರಿಗೆ ಸಾರ್ವಜನಿಕರ ಎದುರೇ ಕಪಾಳಮೋಕ್ಷ ಮಾಡಿದ್ದ ಅನಂತ್ಮಾಣಿಯ "ಕೀರ್ತಿ" ಬಲುಬೇಗ ಜಿಲ್ಲೆಯ ಮೂಲೆ-ಮೂಲೆಗೆ ವ್ಯಾಪಿಸಿಬಿಟ್ಟಿತು. ಪಾರ್ಟಿ ಸಭೆಗಳಲ್ಲಂತೂ ಅನಂತ್ಮಾಣಿ ತನಗಾಗದವರು ಕಂಡೊಡನೆ ಹಲ್ಲುಕಚ್ಚಿ ತೋಳು ಮಡಚಿ, ಮುಷ್ಟಿಕಟ್ಟಿ ಮಲ್ಲಯುದ್ಧಕ್ಕೆ ಹಾರಿದ ಅದೆಷ್ಟೋ ಘಟನೆಗಳಿವೆ.

ಹಾಗೆ ನೋಡಿದರೆ ಅನಂತ್ಮಾಣಿಯ ಗೂಂಡಾಗಿರಿಯಿಂದ ಜಿಲ್ಲೆಯ ಯಾವ ನಾಯಕನೂ ತಪ್ಪಿಸಿಕೊಂಡಂತಿಲ್ಲ. ಈಗ ಮಂತ್ರಿಯಾಗಿರುವ ಕಾಗೇರಿ ಹೆಗಡೆ ಎಂದರೆ ಅನಂತ್ಮಾಣಿಗೆ ಆಗದು. ಈಗ ಶೂದ್ರ ವಿರೋಧಿ ರಾಜಕಾರಣದಲ್ಲಿ ಅನಿವಾರ್ಯವಾಗಿ ತನ್ನ "ಜಾತಿ ಅಸ್ತಿತ್ವ" ಉಳಿಸಿಕೊಳ್ಳಲು ಅನಂತ್ಮಾಣಿ ಕಾಗೇರಿ ಜತೆ ಅರೆಮನಸ್ಸಿನ ಒಡನಾಟ ನಡೆಸಿದ್ದಾರಷ್ಟೇ. ಒಂದು ಕಾಲದಲ್ಲಿ ಭಟ್ಕಳದ ಮಾಜಿ ಮಂತ್ರಿ ಶಿವಾನಂದ ನಾಯ್ಕನನ್ನು ಬಳಸಿಕೊಂಡೇ ರಾಜಕೀಯ ಉತ್ಕರ್ಷ ಕಂಡಿದ್ದ ಮಾಣಿಗೆ ಇವತ್ತು ಶಿವಣ್ಣ ಪರಮ ವೈರಿ. ಶಿವಣ್ಣನಿಗೆ ಈತ ಕಳೆದ ಲೋಕಸಭಾ ಇಲೆಕ್ಷನ್ ಹೊತ್ತಲ್ಲಿ ಹೊಡೆಲು ಹೋಗಿದ್ದು ದೊಡ್ಡ ರಾದ್ಧಾಂತವೇ ಆಗಿತ್ತು, ಇದರಿಂದ ಇವತ್ತು ಜಿಲ್ಲೆಯ ದೊಡ್ಡ ಸಮುದಾಯವಾದ ದೀವರಿಗೆ ಅನಂತ್ಮಾಣಿ ಎಂದರೆ ಅಸಹ್ಯ-ತಾತ್ಸಾರ ಮೂಡಿಸಿದೆ.

ಭಟ್ಕಳದ ಕೊಲೆ, ಹಿರಿಯ ಬಿಜೆಪಿ ಲೀಡರ್-ಮಾಜಿ ಶಾಸಕ ಡಾ. ಎಂ.ಪಿ. ಕರ್ಕಿ, ಸಿದ್ಧಾಪುರದ ಕೆ.ಜಿ. ನಾಯ್ಕ, ಮುಂಡಗೋಡ ಕಾರವಾರದ ಚಿಕರ್ೀಡಿಕರ್, ಮುಂಡಗೋಡಿನ ಶಾಸಕ ವಿ.ಎಸ್. ಪಾಟೀಲ್, ಕುಮಟಾದ ಸಜ್ಜನ-ಸರಳ ತರುಣ ಡಾ. ಶಶಿಭೂಷಣ ಹೆಗಡೆ, ಮದನ್ ನಾಯಕ..... ಹೀಗೆ ಹಲವರಿಗೆ ಒಂದಲ್ಲ ಒಂದು ಬಾರಿ ಅಧಿಕಪ್ರಸಂಗಿ ಅನಂತ್ಮಾಣಿ ಧಮ್ಕಿ ಕೊಟ್ಟದ್ದಿದೆ; ಮಾಡಿದ್ದೂ ಇದೆ. ದೈಹಿಕ ಹಲ್ಲೆ ಎಂಪಿಯಂಥ ಗಂಭೀರ-ಜವಾಬ್ದಾರಿಯುತ ಸ್ಥಾನದಲ್ಲಿದ್ದರೂ ಬೀದಿ ರೌಡಿಯಂತೆ ಹಾರಾಡುವ ಅನಂತ್ಮಾಣಿಯ ಭಂಡಾಟ ಬಿಜೆಪಿಯವರಲ್ಲೇ ರೇಜಿಗೆ ಮೂಡಿಸಿಬಿಟ್ಟಿದೆ. ಜಿಲ್ಲೆಯ ಜನಸಾಮಾನ್ಯರಿಗಂತೂ ಈ ಹೊಣಗೇಡಿ-ಕೊಡೆದಾಟಗಾರ ಎಂಪಿ ಎಂದರೆ ಒಂಚೂರೂ ಒಳ್ಳೆಯ ಅಭಿಪ್ರಾಯವಿಲ್ಲ, ಅಭಿವೃದ್ಧಿ ವಿಷಯದಲ್ಲಿ ಸದ್ರಿ ಸಂಸದ ಮಾಡಿದಕ್ಕಿಂತ ಆಡಿದ್ದೇ ಹೆಚ್ಚು!

ಜಿಲ್ಲಾ ಬಿಜೆಪಿ ಅಧ್ಯಕ್ಷ ವಿನೋದ್ ಪ್ರಭು ಎಂಬ ಪಕ್ಕಾ ಹೇತ್ಲಾಂಡಿ ಚಡ್ಡಿ ಬಿಟ್ಟರೆ ಅನಂತ್ಮಾಣಿ ಕಂಡರೆ ಜಿಲ್ಲಾ ಬಿಜೆಪಿಯಲ್ಲಿ ಯಾರಿಗೂ ಆಗದು. ಆತನ 'ಸದ್ಗುಣ'ಗಳ ಮಹಿಮೆ ಇದು. ಅನಂತ್ಮಾಣಿ ಜನ ಮೆಚ್ಚುಗೆ ಗಳಿಸದಿದ್ದರೂ ಧನ ಸಂಚಯದಲ್ಲಿ ಮಾತ್ರ ಹಿಂದೆ ಬಿದ್ದಿಲ್ಲ, ಎಂಪಿಯಾಗುವ ಮುಂಚೆ ತಿರಬೋಕಿ ಮಾಣಿಯಾಗಿ ಅಂಡಲೆಯುತ್ತಿದ್ದ ಅನಂತ್ಮಾಣಿ ಇವತ್ತು ಕೋಟಿ-ಕೋಟಿಗೆ ತೂಗುವ ತ್ರಾಣಿಕ! ಜನಸೇವೆಗೆ ಅನಂತ್ಮಾಣಿ ಕಟ್ಟಿಕೊಂಡಿರುವ "ಕದಂಬ" ಧರ್ಮಾತ್ಮ ಟ್ರಸ್ಟ್‌ನ ಗೋಲ್‌ಮಾಲ್ ದಂಧೆಗಳೇ ಆತನಿಗೆ ಕೋಟ್ಯಂತರ ರೂಪಾಯಿ ಇನ್‌ಕಮ್ ಕೊಡುತ್ತಿದೆ ಎಂಬ ರೂಮರ್‌ಗಳಿವೆ. ಈ ಕದಂಬದ ಹೌಸಿಂಗ್ ಸ್ಕೀಮ್ ಒಂದೇ ಅನಂತ್ಮಾಣಿ ಮತ್ತವರ ಧರ್ಮಪತ್ನಿ ರೂಪಾರ ಭಾಗ್ಯ ಬದಲಾಯಿಸಿಬಿಟ್ಟಿದೆ.

ಅಂದಹಾಗೆ ಸಂಸದರ ಮಡದಿಯೇ ಈ ಕದಂಬದ ಅಧ್ಯಕ್ಷರು. ಮೂರನೇ ಬಾರಿ ಸಂಸದನಾಗುತ್ತಿದ್ದಂತೆಯೇ ಅಖಂಡ ಹಿಂದೂ ರಾಷ್ಟ್ರ, ಹಿಂದೂತ್ವಕ್ಕೆಲ್ಲ ಎಳ್ಳು ನೀರು ಬಿಟ್ಟ ಅನಂತು ಪಕ್ಕಾ ಬಿಜಿನೆಸ್‌ಮನ್ ಆಗಿಹೋದರು. ಕದಂಬ ನಡೆಸುವ ಡಾಂಬರ್ ದಂಧೆಯೇ ಅನಂತನ ವ್ಯಾಪಾರಿ ಬುದ್ಧಿ ಬಹಿರಂಗಪಡಿಸಿಬಿಟ್ಟಿದೆ. ಶಿರಸಿಯ ಮತ್ತೀಘಟ್ಟ ಎಂಬಲ್ಲಿ ಹತ್ತಾರು ಎಕರೆ ಅರಣ್ಯ ಅತಿಕ್ರಮಿಸಿ ಅಡಿಕೆ ತೋಟ ಮಾಡಿಕೊಂಡಿರುವ ಅನಂತ್ಮಾಣಿ ಅಲ್ಲೊಂದು ಬಂಗಲೆ ಕಟ್ಟಿಸುತ್ತಿದ್ದಾರೆ. ಆ ಕಗ್ಗಾಡಿನಲ್ಲಿ ತೋಟಕ್ಕೆ ಹೋಗಲು ಎಂಪಿ ಫಂಡಲ್ಲಿ ರಸ್ತೆ ಬೇರೆ ನಿರ್ಮಿಸಿ ಕೊಂಡಿದ್ದಾರೆ. ತೋಟಗಾರಿಕಾ ಮಿಶನ್, ತೋಟಗಾರಿಕಾ ಇಲಾಖೆ ಕೃಪೆಯಿಂದ ತೋಟ ನಳನಳಿಸುತ್ತಿರುವ ಸುದ್ದಿ ಅಧಿಕಾರಿಗಳ ವಲಯದಲ್ಲಿದೆ. ಕೇಂದ್ರ ಸಾಂಬಾರ ಮಂಡಳಿ ಸದಸ್ಯನಾಗಿರುವ ಅನಂತ್ಮಾಣಿಯಿಂದ ಜಿಲ್ಲೆಯ ತೋಟಗರಿಗೆ ಆಗಿರುವ ಅನುಕೂಲಕ್ಕಿಂತ ಮತ್ತಿಘಟ್ಟದ ತೋಟಕ್ಕಾದ ಪ್ರಯೋಜನವೇ ಜಾಸ್ತಿ.



ಜಿಲ್ಲೆಯ ಬೇಕು-ಬೇಡ ಆಗು-ಹೋಗುಗಳ ಬಗ್ಗೆ ಎಂದೂ ತಲೆ ಕೆಡಿಸಿಕೊಳ್ಳದ ಅನಂತ್ಮಾಣಿ ಸ್ವ-ಜೀರ್ಣೋದ್ಧಾರ ಮಾತ್ರ ಭರ್ಜರಿಯಾಗೇ ಮಾಡಿಕೊಂಡಿದ್ದಾರೆ. ಮಾಡಿಕೊಳ್ಳುತ್ತಿದ್ದಾರೆ. ಇಂತಿಪ್ಪ ಸಂಸದ ಸಾಹೇಬರು ಈಗ ಮತ್ತೆ ಜಿಲ್ಲೆಯಲ್ಲಿ ಖಳತ್ವದಿಂದ ಸುದ್ದಿ ಮಾಡುತ್ತಿದ್ದಾರೆ. ಕಳೆದ 7ನೇ ತಾರೀಖಿನಂದು ಮುಂಡಗೋಡ ಪಟ್ಟಣ ಪಂಚಾಯತಿ ಅಧಕ್ಷೆ ಆಯ್ಕೆ ವೇಳೆ ಸ್ವಪಕ್ಷದ ಶಾಸಕ ವಿ.ಎಸ್. ಪಾಟೀಲ್ ಎಂಬ "ಮುಗ್ಧ ಮಾನವ"ನಿಗೆ "ಒದೀತೀನಿ ನೋಡ್....." ಎಂದಬ್ಬರಿಸಿದ್ದು ಬಿಜೆಪಿ ವಲಯದಲ್ಲಿ ಕಂಪನಗಳನ್ನೆಬ್ಬಿಸಿಬಿಟ್ಟಿದೆ!

ಈ "ಒದಿತೀನಿ" ಪ್ರಹಸನಕ್ಕೆ ರೌಡಿ ಗುಣಧರ್ಮದ ಅನಂತ್ಮಾಣಿಯ ಪೂರ್ವಗ್ರಹ ದ್ವೇಷಾಸೂಯೆ ಮೂಲ ಕಾರಣ. ಮುಂಡಗೋಡಿನ ಬಿಜೆಪಿ ಶಾಸಕ ಪಾಟೀಲರ ಕಂಡರೆ ಈತನಿಗಾಗದು. ಪಾಟೀಲರಿಗೆ ಎಮ್ಮೆಲ್ಲೆ ಟಿಕೆಟ್ಟೇ ಸಿಗದಂತೆ ಬಿಜೆಪಿಯಲ್ಲಿ ಕಿತಾಪತಿ ಮಾಡಿದ್ದ ಮಾಣಿ ಆನಂತರ ಇಲೆಕ್ಷನ್‌ನಲ್ಲೂ ಆತನನ್ನು ಸೋಲಿಸಲು ತಿಪ್ಪರಲಾಗ ಹಾಕಿದ್ದ. ಆದರೂ ಪಾಟೀಲ್ ತನ್ನ ಸ್ವಜಾತಿ ಓಟಿನ ಬಲದಿಂದ ಗೆದ್ದೇಬಿಟ್ಟರು. ಆಗ ಸಹಿಸಲಾಗಲಿಲ್ಲ ಹೊಟ್ಟೆ ಕಿಚ್ಚು ಅನಂತ್ಮಾಣಿಗೆ. ಪಾಟೀಲ್ ಶಾಸಕನಾದಾಗ ಹೊತ್ತಿಕೊಂಡ ಬೆಂಕಿ ಇವತ್ತಿಗೂ ಅನಂತನ ಮುಂದಗೋಡದ ಪುಂಡರ ಬಳಗದಲ್ಲಿ ಧಗಧಗನೆ ಉರಿಯುತ್ತಿದೆ. ಕಳೆದ ಪಾರ್ಲಿಮೆಂಟ್ ಇಲೆಕ್ಷನ್‌ನಲ್ಲಿ ಶಾಸಕ ಪಾಟೀಲರು ಮುಯ್ಯಿ ತೀರಿಸಿಕೊಂಡರು. ಅನಂತ್ಮಾಣಿ ಸ್ಪರ್ಧೆಯಲ್ಲಿದ್ದರೂ ವಿರುದ್ಧ ಕೆಲಸ ಮಾಡಿದರು. ವಿಪರ್ಯಾಸವೆಂದರೆ ಇಡೀ ಜಿಲ್ಲೆಯಲ್ಲಿ ಜನ ಬೆಂಬಲ ಕಳಕೊಂಡಿದ್ದ ಅನಂತ್ಮಾಣಿ ಯಡ್ಡಿಯ ಮುಖ ನೋಡಿ ಲಿಂಗಾಯತರು ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ-ಕಿತ್ತೂರಿನ ಮಂದಿ ಬಿಜೆಪಿಗೆ ಓಟು ಹಾಕಿದ್ದರಿಂದ ಅಯೋಗ್ಯ ಅನಂತ ಮತ್ತೆ ಎಂಪಿಯಾಗಿಬಿಟ್ಟ.

ಈ ಎಂಪಿ-ಎಮ್ಮೆಲ್ಲೆ ನಡುವೆ ಸಂಘರ್ಷ ನಡೆದೇ ಇತ್ತು, ಅಂದು 7.12.2009 ರಂದು ನಡೆದ ಮುಂಡಗೋಡಿನ ಪ.ಪಂ. ಅಧ್ಯಕ್ಷೆ ಆಯ್ಕೆ ಹೊತ್ತಲ್ಲಿ ಶಾಸಕನಿಗೆ ಮುಖಭಂಗ ಮಾಡಲು ಸಂಸದನ ಪಟಾಲಂ ರೆಡಿಯಾಗಿತ್ತು, ಶಾಸಕನ ಕ್ಯಾಂಡಿಡೇಟ್ ಅನ್ನು ಸೋಲಿಸಲು ಸಂಸದನ ಗುಂಪಿನ ತಾಲ್ಲೂಕ್ ಪಂಚಾಯ್ತಿ ಸದಸ್ಯರು ಎದುರಾಳಿ ಕಾಂಗ್ರೆಸ್ ಹುರಿಯಾಳಿಗೆ ಮತ ಒತ್ತಲು ಸ್ಕೆಚ್ ಹಾಕಿಕೊಂಡಿದ್ದರು. ಅಂದರೆ ಸಾಕ್ಷಾತ್ ಎಂಪಿ ಸಾಹೇಬರೇ ಪಕ್ಷಕ್ಕೆ ದ್ರೋಹ ಮಾಡಿ ಭಿನ್ನರಿಗೆ ಒತ್ತಾಸೆಯಾಗಿ ನಿಂತಿದ್ದರು. ತಾಲ್ಲೂಕ್ ಪಂಚಾಯ್ತಿ ಅಧ್ಯಕ್ಷ ಆಯ್ಕೆಯನ್ನು ಪ್ರತಿಷ್ಠೆಯ ಪ್ರಶ್ನೆಯಾಗಿಸಿಕೊಂಡಿದ್ದ ಶಾಸಕ ಪಾಟೀಲ್ ವೈರಿ ಗುಂಪಿನ ಜೊತೆ ರಾಜಿಗೆ ಸಿದ್ಧರಿದ್ದರು. ಎಂಪಿ ಅನಂತ್ಮಾಣಿಗೂ ಮತದಾನಕ್ಕೆ ಬರುವಂತೆ ಮತ್ತು ಭಿನ್ನರಿಗೆ ಬುದ್ಧಿ ಹೇಳುವಂತೆ ಪರಿಪರಿಯಾಗಿ ಬೇಡಿಕೊಂಡಿದ್ದರು.

ಆದರೆ ಮತದಾನದ ಸಮಯ ಹತ್ತಿರ ಬಂದರೂ ಸಂಸದ ಮಾಣಿ ಮುಂಡಗೋಡಿಗೆ ಬರಲೇ ಇಲ್ಲ. ಜತೆಗೆ ಭಿನ್ನರ ವಿದ್ರೋಹದ ಕಾರ್ಯಾಚರಣೆಯೂ ಜೋರಾಯ್ತು. ಇದರಿಂದ ಕಂಗಾಲಾದ ಶಾಸಕ ಪಾಟೀಲ್ ಎಂಪಿಗೆ ಫೋನಾಯಿಸಿ "ಸರ್, ಬೇಗ ಬರ್‍ರಿ...." ಎಂದರು. ಇದಕ್ಕೆ ಅನಂತ್ ಉಲ್ಟಾ ಮಾತಾಡಿದ; ತನ್ನ ಬಂಡಾಯಗಾರ ಉಂಡಾಡಿಗಳ ಸಮರ್ಥಿಸಿ ಮಾತಾಡಿದ. ಶಾಸಕ-ಸಂಸದರ ಮಧ್ಯೆ ಮಾತಿನ ಡಿಶುಂ... ಡಿಶುಂ... ನಡೆಯಿತು. ಆಚಾರವಿಲ್ಲದ ನಾಲಿಗೆಯ ಅನಂತ್ಮಾಣಿ ಶಾಸಕ ಪಾಟೀಲರಿಗೆ "...ಹೆಚ್ಚಿಗೆ ಮಾತಾಡಿದ್ರೆ ಒದಿತೀನಿ ನೋಡ್ ಮಗನೆ...." ಎಂದಬ್ಬರಿಸಿ ಫೋನ್ ಕಟ್ ಮಾಡಿಬಿಟ್ಟ!

ಎಂಪಿಯ ಅವಾಚ್ಯ ಬೈಗುಳದಿಂದ ಘಾಸಿಗೊಂಡ ಪಾಟೀಲರು ಈತನಿಗೊಂದು ಪಾಠ ಕಲಿಸುವ ನಿರ್ಧಾರಕ್ಕೆ ಬಂದರು. ತಕ್ಷಣ ತನ್ನ ಪ.ಪಂ. ಅಧ್ಯಕ್ಷ ಸ್ಥಾನದ ಹುರಿಯಾಳಿನ ನಾಮಪತ್ರ ವಾಪಸ್ ಪಡೆದ ಪಾಟೀಲ್ ಕಾಂಗ್ರೆಸ್ ಅವಿರೋಧವಾಗಿ ಆಯ್ಕೆ ಆಗುವಂತೆ ಮಾಡಿದರು. ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಮತ್ತು ಜಿಲ್ಲಾಧ್ಯಕ್ಷ ವಿನೋದ್ ಪ್ರಭುಗೆ ಎಂಪಿ

ಮೇಲೊಂದು ಕಂಪ್ಲೇಂಟು ಕೊಟ್ಟರು. ಈ ಪುಂಡ ಎಂಪಿಗೆ ಮೂಗುದಾರ ಹಾಕದಿದ್ದರೆ ಪಾರ್ಟಿ ಬಿಡುವ ಎಚ್ಚರಿಕೆ ನೀಡಿದರು. ಎಮ್ಮೆಲ್ಲೆಗಿರಿ ಮತ್ತು ಬಿಜೆಪಿಗೆ ರಾಜೀನಾಮೆ ಬರೆದು ಕೊಟ್ಟೇಬಿಟ್ಟರು. ಅನಂತನ ಕಿರಿಕಿರಿ, ಹ್ಯೂಮಿಲೇಷನ್‌ನಿಂದ ರೋಸತ್ತಿದ್ದ ದೊಡ್ಡ ದಂಡೇ ಪಾಟೀಲರ ಬೆನ್ನಿಗಿತ್ತು.

ಪಾಪದ ಪ್ರಾಣಿ ಪಾಟೀಲ್ ಮಂತ್ರಿ ಕಾಗೇರಿಯ ಮಾತಿಗೆ ಕೊಂಚ ಸಮಾಧಾನಗೊಂಡರು. ಎಂಎಲ್‌ಸಿ ಇಲೆಕ್ಷನ್ ನಂತರ ಈ ಪ್ರಕರಣ ಕೈಗೆತ್ತಿಕೊಳ್ಳುವ ಮಾತಾಡಿ ಪಾಟೀಲರ ಮೇಲೆ ಕಾಗೇರಿ ಮಂಕುಬೂದಿ ಎರಚಿದ್ದಾರೆ. ಈಗ ಎಂಎಲ್‌ಸಿ ಇಲೆಕ್ಷನ್ ಮುಗಿದು ಬಿಜೆಪಿಯ ಕ್ಯಾಂಡಿಡೇಟಾಗಿದ್ದ ಜಿಲ್ಲಾಧ್ಯಕ್ಷ ಪ್ರಭು ಮೂರನೇ ಸ್ಥಾನಕ್ಕೆ ಎಸೆಯಲ್ಪಟ್ಟಿದ್ದಾರೆ. ಬಿಜೆಪಿಯೊಳಗಿನ ಒಡಕೇ ಈ ಹೀನಾಯ ಸೋಲಿಗೆ ಕಾರಣ. ಅರ್ಥಾತ್ ಜಿಲ್ಲೆಯಾದ್ಯಂತ ಅನಂತ್ಮಾಣಿ ತನ್ನ ಒಣ ಅಹಂಗೆ ಪಾರ್ಟಿ ಉದ್ದಕ್ಕೆ-ಅಗಲಕ್ಕೆ ಒಡೆದು ಹಾಕಿದ್ದೇ ಕಾರಣ; ಶೂದ್ರ ನಾಯಕರಿಗೆಲ್ಲ ಕಿರುಕುಳ ಕೊಟ್ಟದ್ದೂ ಇನ್ನೊಂದು ಕಾರಣ.

ಈ ಸೋಲು ಅನಂತ್ಮಾಣಿ ವಿರುದ್ಧ ಪಾರ್ಟಿಯಲ್ಲಿ ಸುನಾಮಿ ಏಳುವ ಮುನ್ಸೂಚನೆ. ಸೊಕ್ಕಿನ ಅನಂತ್ಮಾಣಿಯನ್ನು ಪಳಗಿಸಲು ಆತನಿಂದ ತೊಂದರೆಗೊಳಗಾದ ಲೀಡರ್‌ಗಳು ಖೆಡ್ಡಾ ರೆಡಿ ಮಾಡುತ್ತಿದ್ದಾರೆ. ಆದರೆ ಅಡ್ವಾಣಿ-ಮೋದಿಯಂಥ ಹಿಂದೂತ್ವದ ಹಿರೇಮಣಿಗಳ ಸಖ್ಯ ಹೊಂದಿರುವ ಮಾಣಿಯನ್ನು ದಾರಿಗೆ ತರುವುದು ಅಷ್ಟು ಸುಲಭವಲ್ಲ. ಒಟ್ಟಿನಲ್ಲಿ ಜಿಲ್ಲಾ ಬಿಜೆಪಿಯಲ್ಲಿ ಬೀದಿ ಕಾಳಗ ಜೋರಾಗುವುದು ಖಂಡಿತ. ಏನೇ ಇದ್ದು ಹಾಳಾಗಿ ಹೋಗ್ಲಿ, ಆದರೆ ಸಂಸದ ಅನಂತ್ಮಾಣಿಯ ಅಹಂಕಾರ-ಅನಾಚಾರ-ಅವಾಂತರದಿಂದ ಜಿಲ್ಲೆಗೆ ದೊಡ್ಡ ಅನ್ಯಾಯ, ಹಾನಿ, ಕಿರಿಕಿರಿ ಆಗುತ್ತಿರುವುದು ದುರಂತ!

ಈ ಪಡಪಾಸೀವಕನಿಗೆ ಜನರೇ ಪಾಠ ಕಲಿಸಬೇಕಷ್ಟೇ!

● ವರದಿಗಾರ

ವಿಶ್ವ ತುಳು ಸಮ್ಮೇಳನದ ಮೆಗಾ ಶೋ: ತೆರೆಮರೆಯ ಅಜೆಂಡಾಗಳು

ಧರ್ಮಸ್ಥಳ ಸಮೀಪದ ಉಜಿರೆಯಲ್ಲಿ ಇದೇ ಡಿಸೆಂಬರ್ 10 ರಿಂದ 13 ರವರೆಗೆ ನಡೆದ ವಿಶ್ವ ತುಳು ಸಮ್ಮೇಳನದಲ್ಲಿ ಎಲ್ಲವೂ ಇತ್ತು- ಔಚಿತ್ಯ ಪ್ರಜ್ಞೆ ಒಂದನ್ನು ಬಿಟ್ಟು. ಆ ನಾಲ್ಕು ದಿನಗಳ ಮಟ್ಟಿಗೆ 'ವಿಶ್ವಮಾನ್ಯತೆ' ಪಡೆದ ತುಳು, ಕರ್ನಾಟಕದ ಕರಾವಳಿಯ ಬರೀ ಎರಡು ಜಿಲ್ಲೆಗಳ ಜನರ ಆಡು ಮಾತು. ಈ ಎರಡು ಜಿಲ್ಲೆಗಳಲ್ಲೂ ಕೂಡ ಎಲ್ಲರೂ ತುಳುವರಲ್ಲ, ಉಡುಪಿ ಜಿಲ್ಲೆಯ ಸುವರ್ಣ ನದಿಯ ಉತ್ತರಕ್ಕೆ ಇರುವ ಪ್ರದೇಶ ತುಳುನಾಡೇ ಅಲ್ಲ. ಹಾಗಿರುತ್ತ ವಿಶ್ವ ತುಳು ಸಮ್ಮೇಳನ ಎಂಬ ಹೆಸರು ಆ ಸಮ್ಮೇಳನಕ್ಕೆ ಅತಿಶಯೋಕ್ತಿಯಲ್ಲವೆ? ಹಿಂದೆ ವಿಶ್ವ ಕನ್ನಡ ಸಮ್ಮೇಳನ ನಡೆದಾಗಲೂ ಇದೇ ಬಗೆಯ ಆಕ್ಷೇಪ ಕೇಳಿಬಂದಿತ್ತು. ಕನ್ನಡ ವಿಶ್ವಭಾಷೆ ಆದದ್ದು ಯಾವತ್ತಿನಿಂದ ಎಂದು ಆಗ ಹಲವರು ಹುಬ್ಬೇರಿಸಿದ್ದರು. ವಾಸ್ತವಪ್ರಜ್ಞೆ ಇಲ್ಲದ ಭಾಷೆ ಪ್ರಾಂತ್ಯಗಳ ಅಭಿಮಾನ ಹಾಸ್ಯಾಸ್ಪದವಷ್ಟೇ ಅಲ್ಲ, ಆತ್ಮಘಾತಕವೂ ಆಗಬಲ್ಲದು ಎಂಬುದಕ್ಕೆ ನಮ್ಮ ಸುತ್ತ ಸಾಕಷ್ಟು ಉದಾಹರಣೆಗಳು ಸಿಗುತ್ತವೆ.

ವಿಶ್ವ ತುಳು ಸಮ್ಮೇಳನದಲ್ಲಿ ವಿಜೃಂಭಿಸಿದ ತುಳು ಭಾಷಾಭಿಮಾನ, ಸದ್ಯಕ್ಕಂತೂ ನಮ್ಮ ಮನೆಗಳನ್ನು ಸುಡುವ ಬೆಂಕಿಯಾಗಿಲ್ಲ, ಭವಿಷ್ಯದಲ್ಲೂ ಹಾಗಾಗುವುದಿಲ್ಲ ಎಂದು ಆಶಿಸೋಣ. ಆದಾಗ್ಯೂ ಈ ಬಗೆಯ ಭಾಷಾಭಿಮಾನ ನಮ್ಮನ್ನು ಎಲ್ಲಿಗೆ ಒಯ್ದು ಮುಟ್ಟಿಸುತ್ತದೆ ಎಂಬ ಪರಿವೆ ನಮಗೆ ಇರಲೇಬೇಕು. ತುಳುನಾಡಿಗೆ ಇಡೀ ವಿಶ್ವದ ಜೊತೆ ಸಂಪರ್ಕವಿದೆ ಮತ್ತು ತುಳುವರು ವಿಶ್ವಾದ್ಯಂತ ಎಲ್ಲೆಡೆ ನೆಲೆಸಿದ್ದಾರೆ, ಹಾಗಾಗಿ ಇದು ವಿಶ್ವ ತುಳು ಸಮ್ಮೇಳನ ಎಂಬ ವಿವರಣೆ ಅಸಂಬದ್ಧವಷ್ಟೇ ಅಲ್ಲ, ಸೋಗಲಾಡಿಯೂ ಆಗಿದೆ. ಈ ವಿವರಣೆ ಸೂಚಿಸುವ, "ಅನ್ನ"ದ ಜೊತೆಗೆ ಕೊಳುಕೊಡುಗೆ ಮತ್ತು ಸಹಬಾಳ್ವೆಯ ಗುಣಗಳನ್ನು ತುಳುನಾಡು ಈಗ ಕಳೆದುಕೊಂಡಿದೆ. ತುಳುನಾಡಿನ ಬಂದರುಗಳಿಗೆ ಪ್ರಾಚೀನ ರೋಮ್ ಸಾಮ್ರಾಜ್ಯದ ಜೊತೆ ವಾಣಿಜ್ಯ ಸಂಬಂಧವಿತ್ತು, ಐರೋಪ್ಯ ಪ್ರಭಾವ ಮತ್ತು ಆಧುನೀಕರಣಗಳಿಗಿಂತ ಬಹಳ ಮೊದಲೇ ವಿಶ್ವಾತ್ಮಕ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದ ಭಾರತದ ಮೂರು ನಗರಗಳಲ್ಲಿ ತುಳುನಾಡಿನ ಮಂಗಳೂರು ಕೂಡ ಒಂದಾಗಿತ್ತು ಎಂದು ಆಶೀಶ್ ನಂದಿ ಹೇಳುತ್ತಾರೆ. (ಕೋಚಿನ್ ಮತ್ತು ಸೂರತ್ ಉಳಿದ ಎರಡು ನಗರಗಳು).





ಆದರೆ ಮಂಗಳೂರು ಮಾತ್ರವಲ್ಲ ತುಳುನಾಡಿನಲ್ಲೇ ಈ ವಿಶ್ವಾತ್ಮಕ ಸಂಸ್ಕೃತಿ ಕಣ್ಮರೆಯಾಗಿದ್ದು ಕೋಮುವಾದದ ದ್ವೇಷ ಮತ್ತು ಹೊಸ ಅರ್ಥ ವ್ಯವಸ್ಥೆ ಹುಟ್ಟುಹಾಕಿರುವ ದುರಾಸೆಗಳು ಈಗ ಮುನ್ನೆಡೆಗೆ ಬಂದಿವೆ. ಈ ಹೊಸ ಸಂಸ್ಕೃತಿಯ ಹಿಂಸೆ ಮತ್ತು ಕುರೂಪವನ್ನು ಮುಚ್ಚಿ ಹಾಕಲು, ಇಲ್ಲಿನ ಪ್ರತಿಷ್ಠಿತ ವರ್ಗಗಳು ಧರ್ಮ ಹಾಗೂ ಭಾಷಾದುರಭಿಮಾನದ ರಾಜಕೀಯವನ್ನು ಬಳಸುತ್ತಿವೆ. ವಿಶ್ವ ತುಳು ಸಮ್ಮೇಳನ ಇಂತಹದ್ದೇ ಒಂದು ವೈಟ್‌ವಾಶ್ ಕಾರ್ಯಕ್ರಮ.

ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಮೂಡುಬಿದಿರೆಯ ಮೋಹನ್ ಆಳ್ವ, ಪೇಜಾವರ ಮಠದ ಸ್ವಾಮೀಜಿ ಮತ್ತು ತುಳುನಾಡಿನ ಇನ್ನೂ ಹಲವು ಪ್ರತಿಷ್ಠಿತರ ಉಪಸ್ಥಿತಿಯಲ್ಲಿ ರಾಜ್ಯದ ಮುಖ್ಯಮಂತ್ರಿ ಉದ್ಘಾಟಿಸಿದ ಈ ವಿಶ್ವ ಸಮ್ಮೇಳನಕ್ಕೆ, ಸರ್ಕಾರ ಒಂದು ಕೋಟಿ ರೂಪಾಯಿ ನೀಡಿದೆ. ಸಮ್ಮೇಳನದ ನಾಲ್ಕು ದಿನ ಮಾತನಾಡಿದ ಎಲ್ಲರೂ ತುಳುಭಾಷೆ, ಸಂಸ್ಕೃತಿಗಳ ಶ್ರೇಷ್ಠತೆ ಮತ್ತು ತುಳುವರ ಸದ್ಗುಣಗಳನ್ನು ಒಂದೇ ಸಮನೆ ತಲೆ ಚಿಟ್ಟು ಹಿಡಿಯುವಂತೆ ಕೊಂಡಾಡಿದ್ದು ಬಿಟ್ಟರೆ ಈ ಸಮ್ಮೇಳನ ಸಾಧಿಸಿದ್ದು ಏನೂ ಇಲ್ಲ. ಆದರೆ ಸಮಸ್ಯೆ ಅದಲ್ಲ, ಈ ಸಮ್ಮೇಳನದಲ್ಲಿ ಪ್ರತಿ ಬಿಂಬಿತವಾಗಿದ್ದ ತುಳು ಸಂಸ್ಕೃತಿ, ಪಾಳೆಯಗಾರಿ ಶೋಷಣೆಯನ್ನೇ ವೈಭವೀಕರಿಸಿದ್ದರಿಂದ ನಾವು ಮತ್ತೆ ಮಧ್ಯಯುಗದ ಕಡೆಗೆ ಸಾಗುತ್ತಿದ್ದೇವೆಯೋ ಅಥವಾ ಅದು ಸಮ್ಮೇಳನದ ಪಾರುಪತ್ಯಗಾರರ ಮನಸ್ಸಿನ ವಿಕಾರ ಮಾತ್ರವೋ ಎಂಬ ಸಂದೇಹ ಈಗ ತಲೆದೋರಿದೆ.

ವಿಶ್ವ ತುಳು ಸಮ್ಮೇಳನದ ಅಂಗವಾಗಿ ಪ್ರದರ್ಶನಗೊಂಡ "ತುಳು ಗ್ರಾಮ"ದ ಪರಿಕಲ್ಪನೆಯಂತೂ ಬರ್ಬರವಾಗಿತ್ತು, ಈ ಮಾದರಿ (ಅಣಕ?) "ತುಳು ಗ್ರಾಮ"ದಲ್ಲಿ ಪಟೇಲ, ಶಾನುಭೋಗರ ಮನೆಗಳಿದ್ದವು; ಜೋಯಿಸರೊಬ್ಬರು ಭವಿಷ್ಯ ಹೇಳುವುದರ ಪ್ರಾತ್ಯಕ್ಷಿಕೆಯೂ ಇತ್ತು, ಹಾಗೆಯೇ ಬಡಗಿ, ಕಮ್ಮಾರ, ಮೋಗೇರ ಮುಂತಾದ ಕಸುಬುಗಾರ ಜಾತಿಗಳವರು, ತಮ್ಮ ತಮ್ಮ ಕಸುಬುಗಳನ್ನು ಮಾಡುತ್ತಿರುವುದನ್ನೂ ಅಲ್ಲಿ ಕಾಣಬಹುದಾಗಿತ್ತು; ನಾಟೀವೈದ್ಯರೊಬ್ಬರು- ನಿಜ ಜೀವನದಲ್ಲೂ ಅದೇ ವೃತ್ತಿ ಮಾಡುವವರು-ನಿಜವಾದ ನಾರುಬೇರುಗಳ ಔಷಧ ಕೊಡುವುದನ್ನೂ ನಟಿಸಿ ತೋರಿಸುತ್ತಿದ್ದರು. ಆ ತುಳು ಗ್ರಾಮದಲ್ಲಿ ಒಂದು ದೇವಸ್ಥಾನವನ್ನು ಸಹ ತಾತ್ಕಾಲಿಕವಾಗಿ ನಿರ್ಮಿಸಲಾಗಿದ್ದು ಧಾರ್ಮಿಕ ಆಚರಣೆ, ಭೂತ, ಕೋಲ, ನೇಮ ಇತ್ಯಾದಿಗಳ ಅಭಿನಯದ ಏರ್ಪಾಡೂ ಇತ್ತು, ಗ್ರಾಮವೆಂದ ಮೇಲೆ ಅಲ್ಲಿ ಭೂಮಾಲೀಕರ ಮನೆ ಇಲ್ಲದೆ ಇರುತ್ತದೆಯೇ? ತುಳು ಗ್ರಾಮದಲ್ಲೂ "ಗುತ್ತಿನ ಮನೆ" ಎಂದು ಕರೆಯಲಾಗುವ ಭೂಮಾಲೀಕರ ಮನೆಯ ಒಂದು ಮಾದರಿಯೂ ಇತ್ತು,


ಗ್ರಾಮವೊಂದರ ನರಮನುಷ್ಯರ ಸಮೇತ, ಏನೆಲ್ಲವನ್ನೂ ಪ್ರದರ್ಶಿಸಬಹುದೋ ಅದೆಲ್ಲವನ್ನೂ ಈ "ತುಳು ಗ್ರಾಮ"ವೆಂಬ ಬಯಲು ಮ್ಯೂಸಿಯಂನಲ್ಲಿ ಪ್ರದರ್ಶನ ಮಾಡಲಾಗಿತ್ತು, ಆದರೆ ಈ ಗ್ರಾಮದಲ್ಲಿ ದಲಿತರ ಕೇರಿಗಳಾಗಲೀ, ಕೊರಗರ ಕೊಪ್ಪಗಳಾಗಲೀ (ಕರಾವಳಿಯ ಗ್ರಾಮಗಳಲ್ಲಿ ದಲಿತರು ವಾಸಿಸುವ ಪ್ರದೇಶಗಳನ್ನು ಕೊಪ್ಪವೆಂದು ಕರೆಯುತ್ತಾರೆ) ಪ್ರದರ್ಶನಗೊಳ್ಳಲಿಲ್ಲ, ಈ "ತುಳು ಗ್ರಾಮ"ದಲ್ಲಿ ವಿವಿಧ ಜಾತಿಗಳ ಜನ ತಮ್ಮ ಪಾಡಿಗೆ ತಾವು ತಮ್ಮ ತಮ್ಮ ಕಸುಬುಗಳನ್ನು ನಡೆಸುತ್ತಿದ್ದರಿಂದ ಜಾತಿ ತಾರತಮ್ಯವೂ ಇರಲಿಲ್ಲ; ಜಾತಿ ಸಂಘರ್ಷವೂ ಇರಲಿಲ್ಲ, ತುಳುನಾಡಿನ ಕಳೆದ ಶತಮಾನದ ಗ್ರಾಮೀಣ ಬದುಕಿನ ದಾರುಣತೆ, ಜಾತಿಪದ್ಧತಿಯ ಅಮಾನುಷತೆ, ಕೂಲಿಗಾಗಿ ವಲಸೆ, ಧಾರ್ಮಿಕ ಅಂಧಶ್ರದ್ಧೆ ಮುಂತಾದವುಗಳ ಯಥಾವತ್ತು ನಿರೂಪಣೆಯಾಗಿರುವ ಶಿವರಾಮ ಕಾರಂತರ "ಚೋಮನ ದುಡಿ" ಇವತ್ತಿಗೂ ಸಲ್ಲುವ ಒಂದು ಆಥೆಂಟಿಕ್ ಸಾಂಸ್ಕೃತಿಕ ದಾಖಲೆ. ಆದರೆ ವಿಶ್ವ ತುಳು ಸಮ್ಮೇಳನದಲ್ಲಿ ತುಳುನಾಡಿನ ಬಹುಜನರ ಪ್ರತಿನಿಧಿ, ಪ್ರತಿಮೆ, ರೂಪಕ ಎಲ್ಲವೂ ಆಗಿರುವ ಚೋಮನೇ ನಾಪತ್ತೆ!

ತುಳುಗ್ರಾಮದಲ್ಲಿ ಭೂಮಾಲೀಕರ ಮನೆ ಪ್ರದರ್ಶನಗೊಂಡಿತು; ಆದರೆ ಅವರ ಶೋಷಣೆಯನ್ನು ಯಾರೂ ಅಭಿನಯಿಸಿ ತೋರಿಸಲಿಲ್ಲ, ವಿಶ್ವ ತುಳು ಸಮ್ಮೇಳನದ ವೇದಿಕೆಯಲ್ಲಿ ನಿಂತು ವಿವಿಧ ವಿಷಯಗಳ ಮೇಲೆ ಉಪನ್ಯಾಸ ನೀಡಿದ ವಿದ್ವಾಂಸರು ತಮ್ಮ ಮಾತಿನಲ್ಲಿ ಕಟ್ಟಿಕೊಟ್ಟ ತುಳು ಸಂಸ್ಕೃತಿಯ ಕಥನವೂ "ತುಳು ಗ್ರಾಮ"ಕ್ಕಿಂತ ಬೇರೆ ತರಹದ್ದಾಗಿರಲಿಲ್ಲ, ಎಗ್ಗಿಲ್ಲದ ಆತ್ಮಪ್ರಶಂಸೆ, ವೈಭವೀಕರಣಗಳ ಈ ತುಳುನಾಡ ಕಥನದಲ್ಲಿ ಇಲ್ಲಿನ ಜಾತಿ, ವರ್ಗ, ಲಿಂಗ ಅಸಮಾನತೆಗಳ ಪ್ರಸ್ತಾಪವೇ ಬರಲಿಲ್ಲ, ಕೋಮು ದ್ವೇಷ, ಸಾಂಸ್ಕೃತಿಕ ಅಸಹನೆ, ಶಿಕ್ಷಣ ಹಾಗೂ ವೈದ್ಯಕೀಯ ಕ್ಷೇತ್ರಗಳ ತೀವ್ರ ಖಾಸಗೀಕರಣ, ವಿಶೇಷ ಆರ್ಥಿಕವಲಯ ಮುಂತಾದ ತುಳುನಾಡಿನ ಸಮಕಾಲೀನ ಸಮಸ್ಯೆಗಳ ಬಗ್ಗೆ ಕೂಡ ಈ ಸಮ್ಮೇಳನದಲ್ಲಿ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ, ಒಟ್ಟಿನಲ್ಲಿ ವಿಶ್ವ ತುಳು ಸಮ್ಮೇಳನದ ಉದ್ದಕ್ಕೂ ತುಳುನಾಡಿನ ಚರಿತ್ರೆ ಮತ್ತು ವರ್ತಮಾನಗಳ ಬಗ್ಗೆ ಅಪ್ರಿಯವಾದ ಸತ್ಯಗಳನ್ನೆಲ್ಲ ಮರೆಮಾಚಿ ಕೇಳಲು ಹಿತವಾದ ಸುಳ್ಳುಗಳನ್ನಷ್ಟೇ ಹೇಳಲಾಯಿತು; ಕಣ್ಣಿಗೆ ಅಂದವಾಗಿ ಕಾಣುವುದನ್ನು ಮಾತ್ರ ಪ್ರದರ್ಶಿಸಲಾಯಿತು.

ಚರಿತ್ರೆ ಮತ್ತು ಪರಂಪರೆಗಳ ಕುರಿತ ಈ ಬಗೆಯ ಏಕಪಕ್ಷೀಯ ಚಿತ್ರಣ ಹಾಗೂ ಎಗ್ಗಿಲ್ಲದ ಹೆಗ್ಗಳಿಕೆ ತುಳುನಾಡಿನಲ್ಲಿ ಲಾಗಾಯ್ತಿನಿಂದಲೂ ನಡೆದುಕೊಂಡು ಬಂದಿರುವ ಕಾರ್ಯಕ್ರಮ. ಉದಾಹರಣೆಗೆ ಉಡುಪಿಯಲ್ಲಿ ಪ್ರತಿ ಎರಡು ವರ್ಷಗಳಿಗೊಮ್ಮೆ "ಪರ್ಯಾಯ" ನಡೆಯುತ್ತದೆ. ಇದು ಉಡುಪಿಯ ಎಂಟು ಮಠಗಳ ಸ್ವಾಮಿಗಳಲ್ಲಿ ಒಬ್ಬರು ಸರದಿ ಪ್ರಕಾರ ಕೃಷ್ಣ ದೇವಸ್ಥಾನದ ಪೂಜೆಯನ್ನು ವಿಧ್ಯುಕ್ತವಾಗಿ ವಹಿಸಿಕೊಳ್ಳುವ ಒಂದು ಆಚರಣೆ. 50-60 ವರ್ಷಗಳ ಹಿಂದಿನವರೆಗೂ ಕೇವಲ ಉಡುಪಿ ಮತ್ತು ಉತ್ತರ ಕರ್ನಾಟಕದ ಕೆಲವು ಮಾಧ್ವ ಬ್ರಾಹ್ಮಣರು ಮಾತ್ರ ಸಂಭ್ರಮಪಡುತ್ತಿದ್ದ ಈ ಪರ್ಯಾಯ ಈಗ "ನಾಡಹಬ್ಬ" ಎಂದೂ "ರಾಷ್ಟ್ರೀಯ ಉತ್ಸವ" ಎಂದೂ ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿದೆ. ಈ ಬಗೆಯ ವೈಭವೀಕರಣದಲ್ಲಿ ಉಡುಪಿಯ 800 ವರ್ಷಗಳ ಮಾಧ್ವ ಪರಂಪರೆಯನ್ನು ಮಾತ್ರ ಹಾಡಿ ಹೊಗಳಲಾಗುತ್ತದೆ. ಕೇವಲ 50-60 ವರ್ಷಗಳಷ್ಟು ಹಿಂದೆ ಉಡುಪಿಯಲ್ಲಿ ಚಾಲ್ತಿಯಲ್ಲಿದ್ದ ಅಮಾನುಷ ಪದ್ಧತಿಗಳು ಯಾರ ಗಮನಕ್ಕೂ ಬರುವುದಿಲ್ಲ,

ಉದಾಹರಣೆಗೆ ಉಡುಪಿಯ ಪರ್ಯಾಯದಂದು ಬ್ರಾಹ್ಮಣ ಸಮಾರಾಧನೆ ಮುಗಿದು, ನಂತರ ಬಡಿಸುವವರು, ಅಡುಗೆಯವರು ಮತ್ತು ಇತರರ ಊಟವಾದ ನಂತರ "ಸೂರೆ ಬಿಡುವುದು" ಎಂಬ ಕಾರ್ಯಕ್ರಮ ನಡೆಯುತ್ತಿತ್ತು, ಇದಕ್ಕಾಗಿ, ದೇವಸ್ಥಾನದ ಆಸುಪಾಸಿನ ಬ್ರಾಹ್ಮಣೇತರ ಗಂಡಸರು, ಹೆಂಗಸರು, ಮಕ್ಕಳು ತಮ್ಮ ತಮ್ಮ ಮನೆಗಳಿಂದ ತಂದ ಪಾತ್ರೆ ಪಡಗಗಳ ಸಮೇತ ಕಾದಿರುತ್ತಿದ್ದರು. ಸಮಾರಾಧನೆಗಾಗಿ ಮಾಡಿದ ಅಡುಗೆಯಲ್ಲಿ ಉಳಿದ ಅನ್ನ ಹುಳಿ, ಸಾರು, ಭಕ್ಷ್ಯ ಇತ್ಯಾದಿಗಳನ್ನು ದೇವಸ್ಥಾನದ ಆವರಣದಲ್ಲಿಯೇ ಒಂದೆಡೆ ಇರಿಸಲಾಗುತ್ತಿತ್ತು, ನಿಗದಿಯಾದ ಸಮಯದಲ್ಲಿ, ಹೆಚ್ಚಾಗಿ ಇಳಿಹೊತ್ತಿನ ನಂತರ, ದೇವಸ್ಥಾನದ ಪರಿಚಾರಕರು ಒಮ್ಮೆಗೇ ಹೊರಗೆ ಕಾದಿದ್ದವರನ್ನೆಲ್ಲ ಒಳಗೆ ಬಿಡುತ್ತಿದ್ದರು. ಎಲ್ಲರೂ ಒಟ್ಟಿಗೇ ನುಗ್ಗಿ ತಮಗೆ ಸಿಕ್ಕಿದ್ದನ್ನು, ಸಿಕ್ಕಷ್ಟು ಬಾಚುವ, ಗೋರುವ, ಸುರಿದು ಕೊಳ್ಳುವ ಕೋಲಾಹಲವನ್ನು ಅದೊಂದು ಜಾನಪದ ಕ್ರೀಡೆಯೋ ಎಂಬಂತೆ ಜನ ನೋಡಿ ಆನಂದಿಸುತ್ತಿದ್ದರು. ಆದರೆ ಬ್ರಾಹ್ಮಣೇತರರ ಪೈಕಿ ದಲಿತರಲ್ಲೂ ದಲಿತರಾದ ಕೊರಗರಿಗೆ ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ,

ಕೊರಗರು, ಸಮಾರಾಧನೆಯ ನಂತರ, ರಾಶಿ ಬೀಳುತ್ತಿದ್ದ ಎಂಜಲೆಲೆಗಳ ಅನ್ನವನ್ನು ಉಳಿದ ಎಂಜಲಿನಿಂದ ಬೇರೆ ಮಾಡಿ, ಅದನ್ನು ಮಡ್ಡೇಲುಸಾರು (ಮಡಿವಾಳರಕೆರೆ) ಎಂಬ ಮಹಾ ಗಲೀಜು ನೀರಿನ ಹೊಂಡವೊಂದರಲ್ಲಿ "ಸ್ವಚ್ಛ"ಗೊಳಿಸಿ ನಂತರ ಬಿಸಿಲಲ್ಲಿ ಒಣಗಿಸಿ ಶೇಖರಿಸಿ ಇಟ್ಟುಕೊಳ್ಳುತ್ತಿದ್ದರು. ಕರಾವಳಿಯ ದೇವಸ್ಥಾನಗಳಲ್ಲೂ, ಬ್ರಾಹ್ಮಣರ ಮನೆಗಳಲ್ಲೂ ವಿಶೇಷ ಸಂತರ್ಪಣೆಯ ದಿನಗಳಲ್ಲಿ ಎಂಜಲೆಲೆಗಾಗಿ, ಯಾರ ಕಣ್ಣಿಗೂ ಬೀಳದಷ್ಟು ದೂರದಲ್ಲಿ ಒಂದೆರಡು ಕೊರಗ ಕುಟುಂಬಗಳು ಕಾದು ಕೂತಿರುವುದು ಆ ದಿನಗಳಲ್ಲಿ ತೀರಸಾಮಾನ್ಯವಾದ ಒಂದು ದೃಶ್ಯವಾಗಿತ್ತು. ಆದರೆ ಉಡುಪಿಯ ಧಾರ್ಮಿಕ ಪರಂಪರೆಯ ಸಂಕಥನದಲ್ಲಿ 800 ವರ್ಷಗಳ ಹಿಂದಿನದ್ದನ್ನು ನೆನಪಿಸಿಕೊಳ್ಳಲಾಗುತ್ತದೆ; ಆದರೆ ಕಳೆದ ಶತಮಾನದ ಮೊದಲ ದಶಕಗಳ ಜಾತಿಪದ್ಧತಿಯ ಘೋರ ಆಚರಣೆಗಳ ಉಲ್ಲೇಖವೇ ಆಗುವುದಿಲ್ಲ, ವಿಶ್ವ ತುಳು ಸಮ್ಮೇಳನದಲ್ಲಿ ಮೂಡಿಬಂದ ತುಳುನಾಡಿನ ಪರಂಪರೆಯೂ ಇದೇ ಬಗೆಯ ವಿಕೃತ ಚಿತ್ರಣ. ಅದನ್ನು ಆತ್ಮ ಪ್ರಶಂಸೆ, ಭಜನೆ, ಹರಿಕಥೆ, ಪೂಜೆ-ಏನು ಬೇಕಾದರೂ ಕರೆಯಿರಿ. ಆದರೆ ಅದು ಪರಂಪರೆಯ ವಸ್ತುನಿಷ್ಠ ಚಿತ್ರಣವಂತೂ ಅಲ್ಲ,



ಉಜಿರೆಯ ವಿಶ್ವ ತುಳು ಸಮ್ಮೇಳನಕ್ಕೆ ಕೆಲವು ದಿನ ಹಿಂದೆ, ನವೆಂಬರ್ 8 ರಂದು ಮಂಗಳೂರಿನ ಬಜ್ಪೆ ಚರ್ಚ್ ಸಭಾಂಗಣದಲ್ಲಿ ಒಂದು ಮೌಲಿಕವಾದ ಕಾರ್ಯಕ್ರಮ ನಡೆಯಿತು. ಮಂಗಳೂರು ವಿಶೇಷ ಆರ್ಥಿಕ ವಲಯ ಯೋಜನೆಯ ಸಂತ್ರಸ್ತರು ಸಾರ್ವಜನಿಕರ ಎದುರು ತಮ್ಮ ಅಹವಾಲುಗಳನ್ನು ಹೇಳಿಕೊಂಡ ಈ ಕಾರ್ಯಕ್ರಮ ಕರಾವಳಿಯ ಮಾಧ್ಯಮಗಳ ಅಸಡ್ಡೆಯಿಂದಾಗಿ ಯಾರ ಗಮನಕ್ಕೂ ಬರಲಿಲ್ಲ, ಈ ಯೋಜನೆಯ ಆರಂಭದಿಂದಲೂ ಇದರ ವಿರುದ್ಧ ಹೋರಾಟಗಳನ್ನು ಸಂಘಟಿಸಿ, ಹಲವು ಸುಳ್ಳು ಕ್ರಿಮಿನಲ್ ಕೇಸುಗಳನ್ನು ಮೈಮೇಲೆ ಹಾಕಿಕೊಂಡಿರುವ ವಿದ್ಯಾ ದಿನಕರ್ ಮತ್ತು ಆಕೆಯ ಗಂಡ ನಟೇಶ್ ಬಳ್ಳಾಲ, ದಸಂಸ ಕಾರ್ಯಕರ್ತ ಕೃಷ್ಣಪ್ಪ ಜಮಾತೆ ಇಸ್ಲಾಮ್‌ನ ಶಬೀರ್ ಮತ್ತು ಈ ಯೋಜನೆಯಿಂದ ಈಗಾಗಲೇ ಅತಿ ಹೆಚ್ಚು ವೈಯಕ್ತಿಕ ಕಷ್ಟನಷ್ಟ, ಭೂಮಿ ಪರಭಾರೆ ಮತ್ತು ಮಾನಸಿಕ ಹಿಂಸೆಗಳನ್ನು ಅನುಭವಿಸಿ ಸ್ವತಃ ಸಂತ್ರಸ್ತರಾಗಿರುವ ಓರ್ವ ಕೃಷಿಕ ಗ್ರೆಗರಿಪತ್ರಾವೋ ಮುಂತಾದವರು ಶ್ರಮವಹಿಸಿ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಸಂತ್ರಸ್ತರ ಅಹವಾಲುಗಳನ್ನು ಅಂದು ಆಲಿಸಲು ಬಂದವರ ಪೈಕಿ, ಎಕನಾಮಿಕ್ ಎಂಡ್ ಪಾಲಿಟಿಕಲ್ ವೀಕ್ಲಿಯ ಸಂಪಾದಕ ರಾಮ ಮನೋಹರ ರೆಡ್ಡಿ, ಲೇಖಕ ಆನಂದ್ ತೇಲ್‌ತುಂಬ್ಡೆ ಬೆಂಗಳೂರಿನ IIMನ ತ್ರಿಲೋಚನ ಶಾಸ್ತ್ರಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರೊ. ಜೀವನ್ ಕುಮಾರ್, ನಗರ ಅಭಿವೃದ್ಧಿ ತಜ್ಞ ಕೆ.ಟಿ. ರವೀಂದ್ರನ್, ಪತ್ರಕರ್ತ ನಾಗೇಶ ಹೆಗ್ಡೆ ಹಾಗೂ ಕಲ್ಪನಾ ಶರ್ಮ, ಲೇಖಕಿ ವೈದೇಹಿ, ಜೊತೆಗೆ ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್ ಮತ್ತು ಮಾನವಹಕ್ಕು ಹೋರಾಟಗಾರ್ತಿ ಅರುಣಾ ರಾಯ್ ಇದ್ದರು. ಆ ದಿನ ಇಡೀ ಹಗಲು ಈ ವಿಶೇಷ ಆಹ್ವಾನಿತರು ಹಾಗೂ ಸಾರ್ವಜನಿಕರ ಎದುರು, ಮಂಗಳೂರು ವಿಶೇಷ ಆರ್ಥಿಕ ವಲಯದ ಗಡಿಯ ಒಳಗಿನ ಎಕ್ಕಾರು, ಕಳವಾರು, ಬಾಳ, ಪೆರ್ಮುದೆ, ಬಜ್ಪೆ, ಕುತ್ತೆತ್ತೂರು ಮೊದಲಾದ ಗ್ರಾಮಗಳವರು ತಾವು ಈ ಯೋಜನೆ ನಿರ್ವಹಣಾಧಿಕಾರಿಗಳು, MRPL ಕಂಪನಿ ಹಾಗೂ KIADB ಅಧಿಕಾರಿಗಳಿಂದ ಅನುಭವಿಸಿದ ಕಷ್ಟನಷ್ಟ ವಂಚನೆಗಳನ್ನು ವಿವರಿಸಿದರು. ತರುಣರು, ಮಧ್ಯವಯಸ್ಕರು, ಹಣ್ಣುಹಣ್ಣು ಮುದುಕರು, ಅಂಗವಿಕಲರು, ಎಲ್ಲ ಜಾತಿಗಳವರು, ದಲಿತರು, ಕ್ರಿಶ್ಚಿಯನ್ನರು, ಮುಸ್ಲಿಮರು, ಕುಡುಬಿ ಬುಡಕಟ್ಟಿನವರು- ಹೀಗೆ ಕರಾವಳಿಯ ಎಲ್ಲ ಜನ ವಿಭಾಗಗಳವರನ್ನೂ ಆ ಸಂತ್ರಸ್ತರ ಪೈಕಿ ಗುರುತಿಸಬಹುದಾಗಿತ್ತು,

ಇವರ ಸಂಕಷ್ಟಗಳನ್ನು ಆಲಿಸಿದ ಆಹ್ವಾನಿತರಲ್ಲಿ ಒಬ್ಬರಾದ ರಾಮಮನೋಹರ ರೆಡ್ಡಿ "ನನಗೆ ಕನ್ನಡ ಅರ್ಥವಾಗುವುದಿಲ್ಲ, ಆದರೆ ನಿಮ್ಮ ಮಾತು ಮಾತ್ರ ನನಗೆ ಅರ್ಥವಾಯಿತು. ಅದು ನನಗೆ ತೆಲುಗಿನ ಹಾಗೆಯೇ ಕೇಳಿಸಿತು. ಯಾಕೆಂದರೆ ಆಂಧ್ರದಲ್ಲೂ ನಿಮ್ಮ ಹಾಗೆಯೇ ಈ ಕಷ್ಟಗಳನ್ನೆಲ್ಲ ಎದುರಿಸುತ್ತಿರುವ ಜನರಿದ್ದಾರೆ" ಎಂದರು. ಬಜ್ಪೆ ಚರ್ಚ್‌ಹಾಲ್‌ನ ಈ ಕಾರ್ಯಕ್ರಮ ವಿಶೇಷ ಆರ್ಥಿಕ ವಲಯ ಯೋಜನೆಯ ವಿರುದ್ಧ ಹೋರಾಟ ಮಾತ್ರವಾಗಿರಲಿಲ್ಲ, ಅದು ಒಬ್ಬರು ಇನ್ನೊಬ್ಬರ ಕತೆ ಕೇಳುವ, ಇನ್ನೊಬ್ಬರ ಅನುಭವವನ್ನು ತಮ್ಮದಾಗಿಸಿಕೊಳ್ಳುವ, ಅವರ ಕಷ್ಟದಲ್ಲಿ ಸಹಭಾಗಿಗಳಾಗುವ ಸಾಂಸ್ಕೃತಿಕ ಆಚರಣೆಯೂ ಆಯಿತು.

ಅಲ್ಲಿ ತಮ್ಮ ಅಹವಾಲುಗಳನ್ನು ಹೇಳಿಕೊಂಡವರಲ್ಲಿ ಕೆಲವರು, ಈ ವಿಶೇಷ ಆರ್ಥಿಕ ವಲಯ ಯೋಜನೆಯಿಂದಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದಾರೆ. ಹಲವು ರೈತರ ಕಣ್ಣೆದುರೇ ಅವರ ಗದ್ದೆ ತೋಟಗಳನ್ನು ಜೆಸಿಬಿ ಯಂತ್ರಗಳು ನಾಶ ಮಾಡಿವೆ. ಕುಡುಬಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಹಲವು ಕೃಷಿಕರ ಬಳಿ ತಾವು ಸಾಗುವಳಿ ಮಾಡಿಕೊಂಡಿದ್ದ ಭೂಮಿಯ ಮಾಲೀಕತ್ವಕ್ಕೆ ದಾಖಲೆಗಳಿಲ್ಲ ಎಂಬ ಕಾರಣಕ್ಕೆ ಅವರಿಗೆ ಪರಿಹಾರಧನವನ್ನು ನಿರಾಕರಿಸಲಾಗಿದೆ. MRPL ಕಂಪನಿಗಾಗಿ ಭೂಮಿ ವಶಪಡಿಸಿಕೊಳ್ಳುವಾಗ ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗ ಕೊಡುವ ಆಶ್ವಾಸನೆ ಕೊಡಲಾಗಿತ್ತು, ಆದರೆ ಹೆಚ್ಚಿನ ರೈತ ಕುಟುಂಬಗಳವರಿಗೆ ಯಾವ ಉದ್ಯೋಗವೂ ಸಿಕ್ಕಿಲ್ಲ; ಉದ್ಯೋಗ ಪಡೆದುಕೊಂಡವರಿಗೂ ಸಿಕ್ಕಿದ್ದು ಹಂಗಾಮಿ ಡ್ರೈವರ್‌ನಂತಹ ಉದ್ಯೋಗಗಳು ಅಥವಾ ಕಂಪನಿಯ ಕಾಂಟ್ರಾಕ್ಟರ್‌ಗಳ ಬಳಿ ಚಾಕರಿಯ ಕೆಲಸಗಳು.

ಈ ಯೋಜನೆಯಿಂದಾಗಿ ತಮ್ಮ ಕೃಷಿ ಭೂಮಿ ಕಳೆದುಕೊಂಡು ಊರು ಮನೆಯನ್ನೂ ಸಹ ಬಿಡಬೇಕಾದ ಹೆಚ್ಚಿನವರಿಗೆ ತಮ್ಮ ಭೂಮಿ ಹೊರತು ಬೇರೆ ಆದಾಯ ಮೂಲವೂ ಇಲ್ಲ; ಕೃಷಿ ಬಿಟ್ಟು ಬೇರೆ ಯಾವ ವಿದ್ಯೆಯ ಕೌಶಲವೂ ಅವರ ಬಳಿ ಇಲ್ಲ, ಬಜ್ಪೆ ಚರ್ಚ್ ಸಭಾಂಗಣದಲ್ಲಿ ಅಂದು ತಮ್ಮ ಅಳಲನ್ನು ತೋಡಿಕೊಂಡವರು ಅಸಹಾಯಕರಾಗಿದ್ದರು. ಆದರೆ ಅವರು ಪ್ರದರ್ಶನಕ್ಕೆ ಇಟ್ಟ ಜಡವಸ್ತುಗಳಾಗಿರಲಿಲ್ಲ; ತಾವು ಅನುಭವಿಸುತ್ತಿರುವ ದುಃಖ, ಅವಮಾನ, ವಂಚನೆಗಳನ್ನು ಅಭಿನಯಿಸಿ ತೋರಬೇಕಾದ ಅಗತ್ಯವೂ ಅವರಿಗೆ ಇರಲಿಲ್ಲ,

ವಿಶ್ವ ತುಳು ಸಮ್ಮೇಳನದ ತುಳು ಗ್ರಾಮದಲ್ಲಿ, ಮಂಗಳೂರು ವಿಶೇಷ ಆರ್ಥಿಕ ವಲಯದ ಸಂತ್ರಸ್ತರ ಮಾದರಿಗಳು ಇರಲಿಲ್ಲ, ಬಜ್ಪೆ ಚರ್ಚ್ ಸಭಾಂಗಣದಲ್ಲಿ ಕಂಡುಬಂದ ಸಹಾನುಭೂತಿ, ಸಹಭಾಗಿತ್ವದ ಭಾವನೆಗಳು ತುಳು ಸಮ್ಮೇಳನದ ಕಾರ್ಯ ಕಲಾಪಗಳಲ್ಲೂ ವ್ಯಕ್ತವಾಗಲಿಲ್ಲ, ಹಾಗಾಗಿ ಸಮ್ಮೇಳನದ ಕೊನೆಯಲ್ಲಿ ಸಿಕ್ಕಿದ್ದು ಆ ನಾಲ್ಕು ದಿನಗಳಲ್ಲಿ ಎಷ್ಟು ಲಕ್ಷ ಜನ ಎಷ್ಟು ಕ್ವಿಂಟಲ್ ಅಕ್ಕಿಯ ಅನ್ನವನ್ನು ಉಂಡರು ಎಂಬ ಲೆಕ್ಕ ಮಾತ್ರ. ಆದರೆ ತುಳುನಾಡಿನ ಚರಿತ್ರೆ ಮತ್ತು ಸಂಸ್ಕೃತಿಯ ಸಂಕಥನದಲ್ಲಿ ಇಲ್ಲಿನ ಜಾತಿ, ವರ್ಗ, ಲಿಂಗ ಅಸಮಾನತೆ ಹಾಗೂ ಶೋಷಣೆಗಳನ್ನು ಮರೆಮಾಚುವುದರ ಮುಖಾಂತರ ಈ ಜನವರ್ಗಗಳ ಹೋರಾಟಗಳನ್ನು ಮೆಟ್ಟಿ ತುಳಿಯುವ ತಮ್ಮ ಅಜೆಂಡಾದಲ್ಲಿ ಮಾತ್ರ ವಿಶ್ವ ತುಳು ಸಮ್ಮೇಳನದ ಪಾರು ಪತ್ಯೆದಾರರು ಯಶಸ್ವಿಯಾಗಿದ್ದಾರೆ.

ಕರಾವಳಿಯಲ್ಲಿ ಈಗ ಈ ಧಣಿಗಳು, ಗುತ್ತಿನವರು, ಗುರಿಕಾರರು, ಖಾವಂದರು, ಮಠಾಧೀಶರು ಮುಂತಾದವರ ಅಬ್ಬರ ಬಿಟ್ಟರೆ ಬೇರೆ ಯಾರ ದನಿಯೂ ಕೇಳಿಸುತ್ತಿಲ್ಲ.


● ಜಿ. ರಾಜಶೇಖರ

ಇತ್ತೀಚೆಗೆ ಒಂದೇ ರೀತಿಯ ಕೆಲವು ಸುದ್ದಿಗಳು ...ಾಲೂ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದು ಆ ಸುದ್ದಿ ...ಮುಖ್ಯತೆಯನ್ನೇ ಕಳೆದುಕೊಳ್ಳುತ್ತಿದೆ. ಹೆಣ್ಣು ಮಕ್ಕಳ ...ಣೆಯಾಗುವಿಕೆ, ಅವರ ಮೇಲೆ ಅತ್ಯಾಚಾರ ಮತ್ತು ...ಲೆಯೇ ಆ ಸುದ್ದಿ. ಹೆಣ್ಣು ಮಕ್ಕಳ ಮೇಲೆ ಯಾಕೆ ಈ ...ತಿ ದೌರ್ಜನ್ಯವೆಸಗಲ್ಪಡುತ್ತಿದೆ? ಇಂದಿನ ಜಾಗತೀಕರಣವೂ ...ವಕ್ಕೊಂದು ಕಾರಣವಾಗಿದೆಯೇ? ಹೆಣ್ಣೂ ಕೂಡಾ ಈಗ ...ಂಸ ವ್ಯಾಪಾರದ ವಸ್ತುವಾಗಿದ್ದಾಳೆಂಬುದು ಇದರರ್ಥವೇ?

ಕಳೆದ ವರ್ಷ ಕಾಸರಗೋಡಿನಲ್ಲಿ ಸಫಿಯಾ ಎಂಬ ...ಡುಗಿ ಕಾಣೆಯಾದಾಗ ಅವಳ ತಾಯಿ ನಿರಾಹಾರ ...ತ್ಯಾಗ್ರಹವನ್ನಾರಂಭಿಸಿದಾಗ ಮತ್ತು ಊರಿನ ಕೆಲವು ...ನವ ಹಕ್ಕುಗಳ ಹೋರಾಟಗಾರರೂ ಆಕೆಯ ಬೆಂಬಲಕ್ಕೆ ...ತ ಕಾರಣದಿಂದ ಆ ಹುಡುಗಿಯನ್ನು ಕೆಲಸಕ್ಕಿಟ್ಟು ...ಂಡಿದ್ದಾತನೇ ಆಕೆಯನ್ನು ಗೋವಾಕ್ಕೆ ಕೊಂಡೊಯ್ದು ...ಗಿಕ ಹಿಂಸೆ ನೀಡಿ ಕೊಲೆ ಮಾಡಿ ಹೊಂಡದಲ್ಲಿ ...ಕಿ ಮಣ್ಣು ಮುಚ್ಚಿದ ವಿಷಯ ಬಹಿರಂಗಗೊಂಡಿತು. ...ರವರ ಪ್ರತಿಭಟನೆಯಿಂದ ಸರ್ಕಾರ ಎಚ್ಚರಗೊಂಡು ...ಬ್ರಾಂಚ್ ಅಧಿಕಾರಿಗಳನ್ನು ತನಿಖೆಗೆ ನಿಯೋಜಿಸಿದ ...ಣ ಈ ಕೊಲೆ ಬಹಿರಂಗಗೊಂಡಿತು.

ಬಡ ಹೆಣ್ಣು ಮಕ್ಕಳು ಬಹುಬೇಗನೆ ಪುರುಷರು ನೀಡುವ ಆಮಿಷಕ್ಕೆ ಬಲಿಯಾಗುತ್ತಾರೆ. ಸಂಬಂಧಿತ ಪುರುಷರು ಅಥವಾ ತಾಯಿಯ ಎರಡನೇ ಗಂಡಂದಿರೇ ಇಂತಹ ಹೆಣ್ಣು ಮಕ್ಕಳನ್ನು ದಾರಿ ತಪ್ಪಿಸುತ್ತಾರೆ.

ಮುಸ್ಲಿಂ ಯುವಕರು ಶಿಕ್ಷಣದಲ್ಲಿ ಸಮನಾಗಿ ಆಸಕ್ತಿ ವಹಿಸುವುದಿಲ್ಲ. ಇವರ ತಂದೆಯಂದಿರು ಕೊಲ್ಲಿ ರಾಷ್ಟ್ರಗಳಲ್ಲಿದ್ದು ಊರಿಗೆ ಹಣ ಕಳುಹಿಸುತ್ತಿರುತ್ತಾರೆ. ಹಣದ ವಹಿವಾಟುಗಳು ಈ ಯುವಕರ ಕೈಯಲ್ಲಿರುತ್ತವೆ. ಎಟಿಎಂ ಕಾರ್ಡ್‌ಗಳೂ ಇರುತ್ತವೆ. ಇವರು ಕೈಯಲ್ಲಿ ಮೊಬೈಲ್ ಹಿಡಿದುಕೊಂಡು ಬೈಕುಗಳಲ್ಲಿ ಅಡ್ಡಾಡುತ್ತಿರುತ್ತಾರೆ. ರಾಜಕಾರಣಿಗಳಿಂದಾಗಲಿ, ಧಾರ್ಮಿಕ ಮುಖಂಡರಿಂದಾಗಲಿ ಇವರಿಗೆ ಸರಿಯಾದ ಮಾರ್ಗದರ್ಶನ ದೊರೆಯುವುದಿಲ್ಲ. ಮನೆ (ಚಿಕ್ಕಕೋಣೆ)ಯಲ್ಲಿ ಸಮನಾದ ರಕ್ಷಕರಿಲ್ಲದ ಹದಿಹರೆಯದ ಹೆಣ್ಣುಮಕ್ಕಳು ಈ ಯುವಕರ ಬಲಿಪಶುಗಳಾಗುತ್ತಾರೆನ್ನಲಾಗಿದೆ. ಈ ಯುವಕರು ಈ ಅಮಾಯಕ ಹೆಣ್ಣು ಮಕ್ಕಳ ಕೈಯಲ್ಲಿ ಮೊಬೈಲ್ ಫೋನ್ ನೀಡಿ ಅವರೊಡನೆ ಸಂಭಾಷಣೆಯನ್ನಾರಂಭಿಸುತ್ತಾರೆ. ಅವರಿಗೆ ಹಲವು ವಿಧದ ಆಮಿಷವನ್ನೊಡ್ಡಿ ಬೇಕಾದಲ್ಲಿಗೆ ಅವರನ್ನು ಕರೆಸಿಕೊಳ್ಳುತ್ತಾರೆ. ಬಡತನದಿಂದ ಅರೆ ನಡೆಯಲಿಲ್ಲ. ಹೆಣ್ಣು ಮಕ್ಕಳು ಕಾಣೆಯಾದರು. ಕೆಲವು ಹೆತ್ತವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದರು. ಕೆಲವರು ಮಗಳು ಇಂದಲ್ಲ ನಾಳೆ ಬರುವಳೆಂದು ಕಾಯುತ್ತಾ ಕುಳಿತರು. ಪೊಲೀಸ್ ಕಡತಗಳಲ್ಲಿ ದೂರು ಕಾಣೆಯಾಯಿತು. ಮನೆಯವರೂ ಕಾಣೆಯಾದ ಮಗಳನ್ನೂ ಮರೆತರು. ಆದ್ದರಿಂದ ಮೋಹನಕುಮಾರನೆಂಬ ಕೊಲೆಗಡುಕನ ಪ್ರಕರಣ ಬಹುಶಃ ಬೆಳಕಿಗೆ ಬರುತ್ತಿರಲಿಲ್ಲ. ಆದರೆ ಯಾವಾಗ 'ಲವ್ ಜಿಹಾದ್' ಎಂಬ ಹೊಸ ಆರೋಪವನ್ನು ಮುಸ್ಲಿಮರ ಮೇಲೆ ಸೃಷ್ಟಿಸಲಾಯಿತೊ; ಈ ಮಹಿಳೆಯರನ್ನು ಮುಸ್ಲಿಮರು ಪ್ರಣಯದ ಹೆಸರಿನಲ್ಲಿ ಕೊಂಡೊಯ್ದು ಮತಾಂತರಗೊಳಿಸಲಾಗುತ್ತಿದೆಯೆಂಬ ಆರೋಪ ಹೊರಿಸಲಾಯಿತೊ ಆಗ ದಕ್ಷಿಣಕನ್ನಡ ಪೊಲೀಸ್ ಇಲಾಖೆ ಜಾಗೃತಗೊಂಡಿತು. ಪೊಲೀಸರು ಸಮನಾದ ತನಿಖೆ ಪ್ರಾರಂಭಿಸಿದಾಗ ಮೋಹನ ಕುಮಾರನೆಂಬ ಶಿಕ್ಷಕನೊಬ್ಬನು ಇಷ್ಟು ಮಹಿಳೆಯರನ್ನು ಕೊಲೆ ಮಾಡಿದ್ದು ಬೆಳಕಿಗೆ ಬಂತು. ಈತ ಶಿಕ್ಷಕ ವೃತ್ತಿಯಲ್ಲಿದ್ದಾನೆಂಬ ದಾಖಲೆಯೂ ಹೊರಬಿತ್ತು. ಶಿಕ್ಷಣ ಇಲಾಖೆ ಕೂಡಾ ಆತ ನಿರಂತರವಾಗಿ ಶಾಲೆಗೆ ಗೈರುಹಾಜರಾದಾಗಲೂ ಕೂಡಾ ಆತನ ಕುರಿತು ಯಾವುದೇ ತನಿಖೆಯನ್ನು ಕೈಗೊಂಡಿರಲಿಲ್ಲ! 'ಲವ್ ಜಿಹಾದ್' ಭೂತ ಕಾಣಿಸಿಕೊಳ್ಳದಿದ್ದರೆ ಈಗಲೂ ಈ ಎರಡು ಇಲಾಖೆಗಳೂ ಎಚ್ಚರಗೊಳ್ಳುತ್ತಿರಲಿಲ್ಲ! ಪರಿಣಾಮವಾಗಿ ಇನ್ನಷ್ಟು ಮಹಿಳೆಯರು ಆತನಿಂದ ಕೊಲೆಗೀಡಾಗುತ್ತಿದ್ದರು.



ಹೆಣ್ಣುಮಕ್ಕಳು ಕಾಣೆಯಾಗಲು ಕಾರಣವೇನು?

● ಸಾರಾ ಅಬೂಬಕ್ಕರ್

ಈ ವರ್ಷ ಕೂಡಾ ಕಾಸರಗೋಡಿನಲ್ಲಿ ಇಂತಹುದೇ ...ದು ಪ್ರಕರಣ ನಡೆಯುತ್ತಾ ಇದೆ. ಒಂಭತ್ತನೇ ತರಗತಿಯಲ್ಲಿ ...ಯುತ್ತಿದ್ದ ಲಿಯಾನಾ ಎಂಬ ಹುಡುಗಿ ಕಳೆದ ಮೇ ...ರಂದು ಸ್ಪೆಷಲ್ ಕ್ಲಾಸ್ ಇದೆಯೆಂದು ಮನೆಯಿಂದ ...ಹೊರಟವಳನ್ನು ಆ ಬಳಿಕ ಯಾರೂ ಕಂಡಿಲ್ಲ. ಆಕೆಯ ...ಯಿ ಫೌಸಿಯಾ ಪೊಲೀಸ್ ಠಾಣೆಯಲ್ಲಿ ದೂರು ...ಡಿದರೂ ಏನೂ ಪ್ರಯೋಜನವಾಗಲಿಲ್ಲ. ಹೀಗಾಗಿ ... ಕಳೆದ 78 ದಿನಗಳಿಂದ ತನ್ನ ಮಗಳನ್ನು ಹುಡುಕಿ ...ಡಬೇಕೆಂದು ಬಸ್‌ಸ್ಟಾಂಡಿನ ಮುಂದೆ ಸತ್ಯಾಗ್ರಹ ...ಮಾಡಿದ್ದಾಳೆ. "ನಾವು ಹುಡುಕುತ್ತಾ ಇದ್ದೇವೆ. ನಮಗೆ ...ಸಿಗುತ್ತಿಲ್ಲ" ಎಂಬುದು ಪೊಲೀಸರ ಉತ್ತರ. "ಕಣ್ಣಿಗೂ ...ಕೊಂಡು ಬುರ್ಖಾ ಹಾಕಿಕೊಂಡು ನಡೆಯುವ ಈ ...ಮಹಿಳೆಯರ ನಡುವೆ ಲಿಯಾನಾ ಇದ್ದಾಳೆಯೇ ಎಂದು ...ವು ಪತ್ತೆ ಹಚ್ಚುವುದು ಹೇಗೆ?" ಎಂಬುದು ಪೊಲೀಸರ ...ಣಗಾಟ. ಜನರ ಪ್ರತಿಭಟನೆಯಿಂದಾಗಿ ಕ್ರೈಂಬ್ರಾಂಚ್ ...ರು ಆ ಬಳಿಕ ಕಾಣೆಯಾದ ಮೂವರು ಹುಡುಗಿಯರು ...ರೆ ಬೇರೆ ಪುರುಷರೊಡನೆ ಹೋಟೆಲ್ ಕೋಣೆಗಳ ...ದ್ದನ್ನು ಪತ್ತೆ ಹಚ್ಚಿದರು. ಆದರೆ ಲಿಯಾನಾಳ ಪತ್ತೆಯಾಗಿಲ್ಲ.

ಈ ಕುರಿತು ಈ ಬಾರಿಯೂ ಮಾನವಹಕ್ಕುಗಳ ...ಹೋರಾಟಗಾರರು ಚಳವಳಿ ಹೂಡಿದ್ದಾರೆ. ಡಿಸೆಂಬರ್ ...ರಂದು ಜಿಲ್ಲಾಧಿಕಾರಿಯ ಕಚೇರಿಯ ಮುಂಭಾಗದಲ್ಲಿ ...ಮುಸ್ಲಿಮರನ್ನು ಹೊರತುಪಡಿಸಿ ಉಳಿದ ಎಲ್ಲ ರಾಜಕೀಯ ...ಗಳು ಹಾಗೂ ಹಲವಾರು ಇತರ ಪಕ್ಷಗಳ ಸದಸ್ಯರೂ ...ಸೇರಿ ಚಳವಳಿಯನ್ನಾರಂಭಿಸಿದ್ದಾರೆ. ಇದರ ಉದ್ಘಾಟನೆ ...ಗಿ ನಾನೂ ಹೋಗಿದ್ದೆ. 'ಲಿಯಾನಾ ಎಲ್ಲಿ? ಅವಳನ್ನು ...ಹುಡುಕಿಕೊಡಿ' ಎಂಬ ಘೋಷಣೆಯೊಡನೆ ನೂರಾರು ...–ಪುರುಷರು ಮಧ್ಯಾಹ್ನದ ಉರಿಬಿಸಿಲಿನಲ್ಲಿ ಸುಮಾರು ...ಎರಡು ಕಿ.ಮೀ. ದೂರ ಮೆರವಣಿಗೆ ಮಾಡಿದ್ದಾರೆ.

ಈ ಹೆಣ್ಣು ಮಕ್ಕಳು ಕಾಣೆಯಾಗಲು ಕಾರಣವೇನು? ...ವರ ಆಳವನ್ನು ಕೆದಕಿದರೆ ಹಲವು ವಿಷಯಗಳು ಬೆಳಕಿಗೆ ...ಬರುತ್ತವೆ.

ಫೌಸಿಯಾಗೆ ಮೂರು ಜನ ಹೆಣ್ಣುಮಕ್ಕಳು ಹಾಗೂ ...ರ್ ಚಿಕ್ಕಮಗನಿದ್ದಾನೆ. ಆಕೆಯ ಗಂಡ ಆಕೆಯನ್ನು ...ಬಿಟ್ಟುಹೋಗಿದ್ದಾನೆ. ಹಿರಿಯ ಮಗಳ ಮದುವೆಯಾಗಿ ...ಯದೂ ವಿಚ್ಛೇದನ (ತಲಾಖ್) ಆಗಿದೆ. ಈ ಹೆಣ್ಣು ...ಮಕ್ಕಳನ್ನು ಮನೆಯಲ್ಲಿ ಬಿಟ್ಟು ಫೌಸಿಯಾ ಮದುವೆ ...ಮನೆಗಳಲ್ಲಿ ಕೆಲಸಕ್ಕೆ ಹೋಗುತ್ತಾಳೆ. ಇಂತಹ ಚಿಕ್ಕ ಪ್ರಾಯದ ಹೊಟ್ಟೆಯಲ್ಲಿರುವ ಈ ಹುಡುಗಿಯರು ಹೋಟೆಲ್ ಊಟ, ತಿಂಡಿಗಳ ಆಮಿಷಕ್ಕೂ ಬಲಿಯಾಗುತ್ತಿರಬಹುದು. ಇಂತಹ ಹೆಣ್ಣು ಮಕ್ಕಳಿಗೆ ಇಂದಿನ ಮೊಬೈಲ್ ಶಾಪವಾಗಿ ಪರಿಣಮಿಸಿದೆಯೇನೋ?

ಗಂಡನಿಂದ ವಿಚ್ಛೇದನಗೊಂಡ ಮಹಿಳೆಯರು ದೂರದ ಊರು ಅಥವಾ ಹಳ್ಳಿಗಳಿಂದ ತಮ್ಮ ಮಕ್ಕಳನ್ನು ಕರೆದುಕೊಂಡು ಕಾಸರಗೋಡಿಗೆ ಬಂದು ಕೋಣೆಯೊಂದನ್ನು ಬಾಡಿಗೆಗೆ ಹಿಡಿದು ವಾಸಿಸಲಾರಂಭಿಸಿ ಮನೆಗೆಲಸಗಳಿಗೆ ಹೊರಡುತ್ತಾರೆ. ಕಾಸರಗೋಡಿನ ಮುಸ್ಲಿಂ ಮಹಿಳೆಯರು ಬೀಡಿ ಉದ್ಯಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ. ಮದುವೆ ಮನೆಗಳಲ್ಲಿ ಏಳೆಂಟು ದಿನ ಕೆಲಸ ಮಾಡಿದರೆ ಕೈ ತುಂಬ ಹಣ, ಬಟ್ಟೆ-ಬರೆ ಎಲ್ಲವೂ ದೊರೆಯುತ್ತವೆ. ಎಷ್ಟೇ ಕಷ್ಟವಾದರೂ ಮಕ್ಕಳನ್ನು ಶಾಲೆಗೂ ಕಳುಹಿಸುತ್ತಾರೆ. ಕೆಲವು ಗಂಡಸರಿಗೆ ಮತ್ತೆ ಮತ್ತೆ ಮದುವೆಯಾಗುವುದು ಒಂದು ವ್ಯಾಪಾರದಂತಾಗಿದೆ. ಹೇಗಾದರೂ ಮಗಳಿಗೆ ಮದುವೆಯಾಗಲಿ ಎಂದು ನಿರ್ಗತಿಕ ತಾಯಂದಿರು ತಮ್ಮ ಮಕ್ಕಳನ್ನು ಇಂತಹವರಿಗೆ ಮದುವೆ ಮಾಡಿಕೊಡುತ್ತಾರೆ. ಎರಡೋ ಮೂರೋ ಮಕ್ಕಳನ್ನು ಹುಟ್ಟಿಸಿ ತಲಾಖ್ ನೀಡಿ ಅವರು ಇನ್ನೊಂದೆಡೆಯಲ್ಲಿ ಇನ್ನೊಂದು ಮದುವೆಯಾಗುತ್ತಾರೆ. ಈ ತಲಾಖ್ ಮತ್ತು ಮದುವೆಗಳೆಲ್ಲವೂ ಶರಿಯತ್ ಕಾನೂನಿಗನುಸಾರವಾಗಿಯೇ ಇದೆಯೆಂಬುದು ಗಂಡಸರ ವಾದ. ಹದಿಹರೆಯದ ಈ ಹೆಣ್ಣುಮಕ್ಕಳ ಸಮಸ್ಯೆಗಳಿಗೆ ಯಾವುದೇ ರೀತಿಯ ಪರಿಹಾರದ ಕುರಿತು ಚಿಂತನೆ ಈ ಸಮಾಜದಲ್ಲಿ ನಡೆಯುವುದಿಲ್ಲ.

ಕೋಜಿಕ್ಕೋಡಿನಲ್ಲಿ ಸುಹರಾ ಎಂಬವರ 'ನಿಸಾ' ಎಂಬ ಸಂಘಟನೆ ಇದೆ. ಅವರು ಎಲ್ಲ ಮದುವೆಗಳೂ ನೋಂದಣಿಯಾಗಬೇಕೆಂದು ಭಾಷಣ ಮಾಡಿದ್ದಕ್ಕಾಗಿ ಬಹಳ ವಿರೋಧವನ್ನೆದುರಿಸಬೇಕಾಯಿತೆನ್ನಲಾಗಿದೆ. ಧಾರ್ಮಿಕ ನಿಯಮಗಳ ದುರುಪಯೋಗ, ಮಾರ್ಗದರ್ಶನದ ಕೊರತೆ ಹಾಗೂ ಮಕ್ಕಳನ್ನು ಹುಟ್ಟಿಸಿ ಬೇಜವಾಬ್ದಾರಿಯಿಂದ ನಡೆಯುವ ಗಂಡಸರ ಸ್ವಭಾವದಿಂದಾಗಿ ಇಲ್ಲಿ ಹೆಣ್ಣು ಮಕ್ಕಳು ಕಾಣೆಯಾಗುವುದು ಸಹಜ ಎಂಬಂತಾಗಿದೆ.

ಆದರೆ ಕೇರಳ ಮತ್ತು ಕರ್ನಾಟಕದ ವಿಷಯದಲ್ಲಿ ಒಂದು ವ್ಯತ್ಯಾಸವಿದೆ. ಕರ್ನಾಟಕದಲ್ಲಿ ಮೋಹನ ಕುಮಾರನೆಂಬುವನು 20 ಜನ ಮಹಿಳೆಯರಿಗೆ ಸೈನೈಡ್ ನೀಡಿ ಅವರನ್ನು ಕಂಡಕಂಡಲ್ಲಿ ಕೊಂದು ಹಾಕಿದರೂ ಇಲ್ಲಿ ಈ ಕುರಿತು ಒಂದೇ ಒಂದು ಪ್ರತಿಭಟನೆಯೂ

ಆದರೆ ಕೇರಳೀಯರು ಇಂತಹ ಸಂದರ್ಭಗಳಲ್ಲಿ ಸುಮ್ಮನೆ ಕೂಡುವುದಿಲ್ಲ. ಯಾರಿಗಾದರೂ ಇಂತಹ ಅನ್ಯಾಯವಾದರೆ ಅದು ಹಿಂದುವೇ, ಮುಸ್ಲಿಮಳೇ ಎಂದೂ ಚಿಂತಿಸುವುದಿಲ್ಲ. ತಮ್ಮ ಸಹ ನಾಗರಿಕ ಹೆಣ್ಣು ಮಗಳೊಬ್ಬಳಿಗೆ ಅನ್ಯಾಯವಾದರೆ, ಕಾಣೆಯಾದರೆ ಆಕೆಯನ್ನು ಹುಡುಕಿ ಕೊಡಿ ಎಂಬ ಘೋಷಣೆಯೊಡನೆ ಎಲ್ಲ ರಾಜಕೀಯ ಪಕ್ಷಗಳ ಸದಸ್ಯರೂ (ಆಡಳಿತ ನಡೆಸುವ ಪಕ್ಷವನ್ನು ಹೊರತುಪಡಿಸಿ) ಒಂದಾಗಿ ಧ್ವನಿ ಎತ್ತುತ್ತಾರೆ.

ಈ ಮೇಲಿನ ಘಟನೆಯ ಹಿಂದೆ ಯಾರೋ ರಾಜಕಾರಣಿಗಳ ಕೈವಾಡವಿದೆಯೇ? ಸರ್ಕಾರ ಯಾರನ್ನೋ ರಕ್ಷಿಸಲು ಪ್ರಯತ್ನಿಸುತ್ತಿದೆಯೇ? ಎಂಬ ಸಂದೇಹ ಕೂಡಾ ಈಗ ಜನರನ್ನು ಕಾಡುತ್ತಿದೆ. ಯಾಕೆಂದರೆ ಪೊಲೀಸರಿಂದ ಸಮನಾದ ದಿಕ್ಕಿನಲ್ಲಿ ತನಿಖೆ ಮುಂದುವರೆಯುತ್ತಿದ್ದಂತೆ ಸಂಬಂಧಪಟ್ಟ ಅಧಿಕಾರಿಯನ್ನು ವರ್ಗಾಯಿಸಲಾಗುತ್ತಿದೆ ಎನ್ನಲಾಗಿದೆ.

ಕಳೆದ ವರ್ಷ ಕೇರಳದ ಅಂಬಲತ್ತರ ಎಂಬಲ್ಲಿ ಪದವಿಪೂರ್ವ ಕಾಲೇಜಿನ ಮೂವರು ಹೆಣ್ಣು ಮಕ್ಕಳು (ಮುಸ್ಲಿಮರಲ್ಲ) ಕೊಲೆಗೈಯಲ್ಪಟ್ಟಿದ್ದರು. ಕೊಲೆಯೋ, ಆತ್ಮಹತ್ಯೆಯೋ ಎಂಬ ಸಂದೇಹವೂ ಇತ್ತು. ಆಗಲೂ ಊರವರ ಪ್ರತಿಭಟನೆಯಿಂದಾಗಿ ಈ ಪ್ರಕರಣದ ತನಿಖೆಯಾಗಿ ಅದೇ ತರಗತಿಯ ಮೂರು ಹುಡುಗರು ಬಂಧನಕ್ಕೊಳಗಾದರು. ಹೆಣ್ಣು ಮಕ್ಕಳು ಪ್ರಾಣ ಕಳೆದುಕೊಂಡರೆ ಗಂಡು ಮಕ್ಕಳು ಜೈಲು ಸೇರಿ ತಮ್ಮ ಭವಿಷ್ಯವನ್ನು ನಾಶ ಮಾಡಿಕೊಂಡರು. ನಮ್ಮ ಯುವಜನರು ಈ ರೀತಿ ಹಾದಿ ತಪ್ಪಲು ಕಾರಣವೇನು? ಪೊಲೀಸ್ ಇಲಾಖೆ ಸರಿಯಾಗಿ ಕಾರ್ಯ ನಿರ್ವಹಿಸಿದರೆ ಇಂತಹ ಕೆಲವು ಯುವಕರನ್ನಾದರೂ ಸಮನಾದ ಹಾದಿಗೆ ತಿರುಗಿಸಬಹುದು. ಪೊಲೀಸರು ಕೆಲವು ಗೂಂಡಾಗಳನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿದರೆ ಕೂಡಲೇ ಮೇಲಿನಿಂದ ದೂರವಾಣಿ ಕರೆಬರುತ್ತದೆ. 'ಆತನನ್ನು ಬಿಡುಗಡೆಗೊಳಿಸಿ' ಎಂದು. ಪೊಲೀಸರು ಈ ರಾಜಕಾರಣಿಗಳಿಗೆ ತಲೆಬಾಗುತ್ತಾರೆ. ಕೆಲವು ಮೂಲಭೂತವಾದಿಗಳು ಹಾಗೂ ರಾಜಕಾರಣಿಗಳು ಪೊಲೀಸ್ ಇಲಾಖೆಯಲ್ಲಿ ಮೂಗು ತೂರಿಸಿ ಅವರು ತಮ್ಮ ಕರ್ತವ್ಯ ನಿರ್ವಹಿಸಿದಂತೆ ತಡೆಯುತ್ತಾರೆ.

ಈ ಸಂದರ್ಭದಲ್ಲಿ ಗುಜರಾತ್ ನಿವೃತ್ತ ಡಿಜಿಪಿ ಶ್ರೀಕುಮಾರ್ ಅವರು ಹೇಳಿದ ಒಂದು ಮಾತನ್ನು ಇಲ್ಲಿ ಇನ್ನೊಮ್ಮೆ ಒತ್ತಿ ಹೇಳಬೇಕಾಗಿದೆ. 'ಪೊಲೀಸ್ ಅಧಿಕಾರಿ ಹಾಗೂ ಇತರ ಸರ್ಕಾರಿ ಅಧಿಕಾರಿಗಳ ನಿಷ್ಠೆ ಇರಬೇಕಾದುದು ನಮ್ಮ ಸಂವಿಧಾನಕ್ಕೆ ಹೊರತು, ಯಾವುದೇ ಮಂತ್ರಿಗೂ ರಾಜಕಾರಣಿಗೂ ಅಲ್ಲ. ಸಂವಿಧಾನಕ್ಕನುಸಾರವಾಗಿ ನಾವು ಕಾರ್ಯನಿರ್ವಹಿಸಿದರೆ ಎಷ್ಟೋ ಅಪರಾಧ ಕೃತ್ಯಗಳನ್ನು ತಡೆಯಬಹುದು"

ಒಂದು ಊರಿನ ಶಾಂತಿ ಕದಡಬೇಕಾದರೆ ಅಲ್ಲಿ ಓರ್ವ ರಾಜಕಾರಣಿ ಮತ್ತು ಓರ್ವ ಮೂಲಭೂತವಾದಿಯನ್ನು ತಂದಿದಿ ಸಾಕು! ●

ಶಿಕಿ ಹಾಯ್ಕುಗಳು



ಕೊಂಬೆ ಕತ್ತರಿಸಿದೆ.
ಬೆಳಕಿಂಡಿಯಲ್ಲಿ
ಮುಂಜಾವು ಬೇಗ ಬೇಗ....
* * *
ಬುದ್ಧನಿಗೆ
ಬೆನ್ನು ತಿರುಗಿಸಿದೆ
ಬೆಳದಿಂಗಳ ತಂಪು!
* * *
ಏನಾಶ್ಚರ್ಯ!
ಮಧ್ಯರಾತ್ರಿ ಸದ್ದು
ನೈದಿಲೆ ಉದುರುತ್ತಿದೆ
* * *
ಪುಟ್ಟ ಕಿಂಡಿಯಲ್ಲಿ
ಹಿಮ
ಬೇಗ ಬೇಗ ಬೀಳುತ್ತಿದೆ
* * *
ಮತ್ತೆ ಮತ್ತೆ ಕೇಳುತ್ತೇನೆ
ಎಷ್ಟು ಎತ್ತರೆತ್ತರಕ್ಕೆ
ಹಿಮ್ಮ?
* * *
ವಸಂತದ ಹನಿ
ಕೊಡೆಯಡಿ ನುಸುಳಿ ಓದುತ್ತಿದೆ
ಪುಸ್ತಕ
* * *
ಗರಿಯರಳುತ್ತಿದೆ
ವಸಂತದ ಗಾಳಿ
ನೋಡಲ್ಲಿ! ನವಿಲು.
* * *
ಸೊಳ್ಳೆ ಸಾಯಿಸುವಾಗ
ಸಾವಧಾನ
ನಾನು ಮಲಗಬೇಕು.
* * *
ಬಾಗಿಲು ಮುಚ್ಚಲು ಹೊರಬಂದು
ಮೈ ಮರೆತೆ
ಕಪ್ಪೆಗಳ ಸಂಗೀತ ರಾತ್ರಿ!
* * *
ಆವರಿಸುತ್ತಿದೆ
ವಸಂತದ ಮುಸ್ಸಂಜೆ
ಒಂಟಿ ಬಿಳಿ ಹೂವು.
* * *
ಇನ್ನೆಷ್ಟು ದಿನ
ಈ ಬದುಕು?
ಕ್ಷಣಿಕ ರಾತ್ರಿ.....
* * *
ಹೇಳಿ ಅವರಿಗೆ
ನನಗಿಷ್ಟ
ಹುಳಿಮಾವು, ಹಾಯ್ಕು.
* * *
ಹಾಸಿಗೆಯಲ್ಲಿ ನರಳುತ್ತ
ಮಲಗಿದ್ದೇನೆ
ಹಿಮದಬಂದಿ.
* * *
ಹಣ್ಣು ಕಚ್ಚಿದೆ
ಪುರಾತನ ಹೊರಿಯುಜಿ.
ಗಂಟೆಯ ಮಾರ್ದನಿ....
(ಶಿಕಿಯ 18,000 ಹಾಯ್ಕುಗಳಲ್ಲಿ ತುಂಬ ಪ್ರಸಿದ್ಧವಾದುದು. ಹೊರಿಯುಜಿ ಕ್ರಿ.ಶ. 607 ರಲ್ಲಿ ನಾರಾ ಎಂಬಲ್ಲಿ ಕಟ್ಟಿರುವ ಪುರಾತನ ಬುದ್ಧ ವಿಹಾರ)
* * *
ಕಫದ ಸಮುದ್ರ
ಮರಣಶಯ್ಯೆಯಲ್ಲೊಬ್ಬ ಮನುಷ್ಯ
ಹೂವು ಅರಳಿದೆ....
(ಮಸವೊಕಾ ಶಿಕಿ ಕ್ಷಯರೋಗದಿಂದ ತೀರಿಕೊಂಡಾಗ ಅವನಿಗೆ ಕೇವಲ 35 ವರ್ಷ ವಯಸ್ಸು)

ಜಪಾನೀ ಮೂಲ: ಮಸವೊಕಾ ಶಿಕಿ (1867-1902)
ಕನ್ನಡಕ್ಕೆ: ಡಾ.ಸಿ. ರವೀಂದ್ರನಾಥ್

ಕಲಿಗಣನಾಥ ಗುಡದೂರು

ಶಾಂತರಸ, ರಾಜಶೇಖರ ನೀರಮಾನ್ವಿ, ಅಮರೇಶ ನುಗಡೋಣಿ, ಮಹಂತೇಶ ನವಲಕಲ್, ಚಿದಾನಂದ ಸಾಲಿ–ಈ ಸಾಲಿನಲ್ಲಿ ಕಾಣುವ ರಾಯಚೂರು ಸೀಮೆಯ ಮತ್ತೊಬ್ಬ ಕತೆಗಾರ ಕಲಿಗಣನಾಥ ಗುಡದೂರು. ಸಿಂಧನೂರಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿರುವ ಕಲಿ, ಕಳೆದೊಂದು ದಶಕದಲ್ಲಿ ಮೂರು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವೆಂದರೆ, ಉಡಿಯಲ್ಲಿಯ ಉರಿ (2000), ಮತಾಂತರ (2007), ಮಾಮೂಲಿ ಗಾಂಧಿ (2008).

ಹೊಸತಲೆಮಾರಿನ ಅನೇಕ ಕತೆಗಾರರ ಹಾಗೆ ಕಲಿ ಕೂಡ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಬಹುಮಾನದಿಂದ ಪ್ರೇರಣೆ ಪಡೆದವರು; ವಿದ್ಯಾರ್ಥಿಯಾಗಿದ್ದಾಗಲೇ (1997) ಅವರ 'ಉಡಿಯಲ್ಲಿಯ ಉರಿ' ಕತೆ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆಯಿತು; ನಂತರ ಅವರ 'ಉರಿವಕೆಂಡದ ಮೇಲೆ' ಕತೆಗೆ 'ವಿಕ್ರಾಂತ ಕರ್ನಾಟಕ' ಪತ್ರಿಕೆಯ ಬಹುಮಾನ ಬಂದಿತು. ಬಹುಶಃ ಆಧುನಿಕ ಕನ್ನಡ ಸಣ್ಣಕತೆಗಳ ಚರಿತ್ರೆಯನ್ನು ಈ ಕಥಾಸ್ಪರ್ಧೆಗಳಿಲ್ಲದೆ ಬರೆಯಲು ಸಾಧ್ಯವಿಲ್ಲವೇನೊ ಎಂಬಂತೆ ಈ ಬಹುಮಾನಗಳು ಆವರಿಸಿಕೊಂಡಿವೆ. ಆದರೆ ಈ ಕಥಾಸ್ಪರ್ಧೆಗಳು ಸಣ್ಣಕತೆಯ ಸ್ವರೂಪದ ಮೇಲೆ ಮಾಡಿರುವ ಇತರೆ ಪರಿಣಾಮಗಳನ್ನು ಇನ್ನೂ ಶೋಧಿಸಬೇಕಿದೆ.


ಕಲಿಯವರ ಮೇಲಿನ ಎರಡು ಕತೆಗಳ ಹೆಸರನ್ನು ಗಮನಿಸಿದರೆ, ಒಂದು ಸಣ್ಣ ಸಂಗತಿ ಹೊಳೆಯುತ್ತದೆ. ಅದೆಂದರೆ ಅವರ ಕತೆಗಳ ವಸ್ತು ಹೆಚ್ಚಾಗಿ 'ಉರಿ'ಯುವ ವಿದ್ಯಮಾನಗಳಿಗೆ ಸಂಬಂಧಿಸಿದಂತಿರುವುದು; ಆತಂಕ ಮತ್ತು ಸಂಘರ್ಷ ತುಂಬಿದ ಜಗತ್ತಿನ ಘಟನೆಗಳನ್ನು ಆರಿಸಿಕೊಂಡು ಬರೆಯುವುದು ಈ ಭಾಗದ ಲೇಖಕರ ಲಕ್ಷಣವೊ ಅಥವಾ ಈ ಸೀಮೆಯ ಬದುಕಿನ ವಸ್ತುಸ್ಥಿತಿಯೇ ಹೀಗಿದೆಯೊ ಏನೋ.

ಕನ್ನಡದ ಹೊಸತಲೆಮಾರಿನ ಲೇಖಕರಲ್ಲಿ ಸಾಮಾಜಿಕ ಬದ್ಧತೆಯ ಬಗ್ಗೆ ಅಷ್ಟು ತಲೆಕೆಡಿಸಿಕೊಳ್ಳದೆ, ಹೂಹಗುರಾಗಿ ಲಹರಿಯಲ್ಲಿ ಲೋಕದ ಸಂಭ್ರಮಗಳನ್ನು ಕುರಿತು ಬರೆಯುವ ಲೇಖಕರ ಮಾದರಿಯೊಂದು ಇದೆ; ಬಲಪಂಥೀಯ ಸಿದ್ಧಾಂತಕ್ಕೆ ತನ್ನನ್ನು ಒಳಗು ಮಾಡಿಕೊಂಡಿರುವ ಲೇಖಕರ ಇನ್ನೊಂದು ಮಾದರಿಯೂ ಇದೆ. ಸಾಮಾಜಿಕ ಬದ್ಧತೆಗೆ ತಮ್ಮನ್ನೇ ತೆತ್ತುಕೊಂಡಂತೆ ಪರಿಸರದ ವಿದ್ಯಮಾನಗಳ ಮೇಲೆ ಬರೆಯುತ್ತಿರುವ ಲೇಖಕರ ಮತ್ತೊಂದು ಮಾದರಿಯಿದೆ. ಕಲಿ, ಈ ಮೂರನೆಯ ಮಾದರಿಯ ಲೇಖಕರೆನ್ನಬಹುದು. ಅದರಲ್ಲೂ ಬರೆಹದ ಮೇಲೆ ಸಾಮಾಜಿಕ ಹೊಣೆಗಾರಿಕೆಯನ್ನು ಅಗತ್ಯಕ್ಕಿಂತ ಹೆಚ್ಚಾಗಿಯೇ ಆವಾಹನೆ ಮಾಡಿಕೊಂಡಿರುವ ಲೇಖಕ ಎನ್ನಬಹುದು. ಅವರ ಕೆಲವು ಕತೆಗಳನ್ನು ನೋಡುವಾಗ ಭೂಭಾರವನ್ನು ಹೊತ್ತುಕೊಂಡು ಕುಸಿದುಹೋಗಿರುವ ಹರ್ಕ್ಯುಲಸ್‌ನ ಚಿತ್ರ ನೆನಪಾಗುತ್ತದೆ.


"ಬರಹಗಾರನೆಂದರೆ, ಕೇವಲ ಅಕ್ಷರಗಳ ಮೂಲಕ ಯುಟೋಪಿಯಾ ಸೃಷ್ಟಿಸುವುದಲ್ಲ, ಸುತ್ತಲಿನ ಬದುಕಿನ ಏರಿಳಿವುಗಳಲ್ಲಿ ಹತ್ತಿ ಇಳಿಯಬೇಕು"; "ಬರೆಹಗಾರ ಕೇವಲ ಅಕ್ಷರಗಳ ಮೂಲಕ ತನ್ನ ಪಾಲಿನ ಸಾಮಾಜಿಕ ಜವಾಬ್ದಾರಿ ನಿಭಾಯಿಸಿದರೆ ಸಾಲದು.. ಜೀವಪರ ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ಕೇವಲ ಸಿಂಪಥಿ ಹೊಂದಿದರೆ ಉಪಯೋಗವಿಲ್ಲ, ಹೋರಾಟದ ಸಾಗರದ ಹರಿವಿನಲ್ಲಿ ಲೇಖಕರೂ ಇತರರ ಜತೆ ಈಜಬೇಕಿದೆ"; "ಸಮಾಜಮುಖಿ ಪ್ರಜ್ಞೆ, ಮನುಷ್ಯತ್ವದ ನೆಲೆ, ಸಾದೃಶ್ಯವೆನಿಸಬಹುದಾದ ಕಲ್ಪನೆಗಳೇ ನನ್ನ ಕತೆಗಳ ತಿರುಳು"- ಹೀಗೆಂದು ಕಲಿ ತಮ್ಮ ಸಂಕಲನದ ಮುನ್ನುಡಿಗಳಲ್ಲಿ ಹೇಳುವುದುಂಟು. ಅವರ ಕಾಳಜಿ ಮತ್ತು ಬದ್ಧತೆಗಳು ಪ್ರಾಮಾಣಿಕವಾಗಿವೆ. ಗೌರವಾರ್ಹವಾಗಿವೆ.

ಆದರೆ ಅವರ ಈ ಬದ್ಧತೆಯ ತೀವ್ರತೆಯು ಅವರ ಬರೆಹವನ್ನು ಅತಿಗಂಭೀರತೆಗೆ ದೂಡಿಬಿಟ್ಟಿದೆ. ಅವರ ಕತೆಗಳಲ್ಲಿ ದಾರುಣ ಘಟನೆಗಳಿಂದ ಕೂಡಿದ ಉಸಿರುಗಟ್ಟಿದ ಬದುಕಿನ ಚಿತ್ರಗಳೇ ಹೆಚ್ಚಾಗಿವೆ. ಸಮಾಜದ ಅಧಿಕಾರಸ್ಥ ಶಕ್ತಿಗಳಿಂದ ಕ್ರೂರವಾಗಿ ದಮನಕ್ಕೆ ಒಳಗಾದ ಬಡವರು, ಮಕ್ಕಳು ಮತ್ತು ಮಹಿಳೆಯರೆ ಅವರ ಕತೆಗಳ ನಾಯಕರು. ಬಾಳಿನಲ್ಲಿ ಯಾವ ಸಂತೋಷವೂ ಸೆಳಕೂ ಇಲ್ಲದ ಉಸಿರುಗಟ್ಟಿದ ಕೊತಕೊತ ಕುದಿಯುವ ಲೋಕವನ್ನು ಅವರು ಚಿತ್ರಣ ಮಾಡುತ್ತಾರೆ.

ಇಲ್ಲಿ ಹುಟ್ಟುವ ಪ್ರಶ್ನೆಯೆಂದರೆ, ಕತೆಗಾರನೊಬ್ಬ ತನ್ನ ಪರಿಸರದ ವಾಸ್ತವಿಕ ಬದುಕಿನ ವಿವರಗಳನ್ನು ತಮ್ಮ ಕತೆಗಳಲ್ಲಿ ತುಂಬುತ್ತಿದ್ದಾನೊ ಅಥವಾ ಅವುಗಳ ಎಳೆಗಳನ್ನು ಹಿಡಿದು ದುಡಿಸಿಕೊಳ್ಳುತ್ತ ಹೊಸದರ್ಶನವೊಂದು ಒಡಮೂಡುವಂತೆ ಕತೆಯನ್ನು ಕಟ್ಟುತ್ತಿದ್ದಾನೊ ಎಂಬುದು. ನೀರಮಾನ್ವಿಯವರು ಇದೇ ಕೋಲಾಹಲದ ಲೋಕದ ವಿವರಗಳನ್ನು ಎತ್ತಿಕೊಂಡು ಸೂಕ್ಷ್ಮವಾಗಿ ಬಳಸಿಕೊಂಡು ಸಂವೇದನೆ ತುಂಬಿದ ಕತೆಗಳನ್ನು ಕಟ್ಟುವಂತಹ ಒಂದು ಪರಂಪರೆ ಹಾಕಿದ್ದಾರೆ. ನುಗಡೋಣಿ, ಸಾಲಿ, ನವಲಕಲ್ ಅವರು ಈ ಹಾದಿಯಲ್ಲಿ ಸಾಕಷ್ಟು ಮುಂದೆ ಸಾಗಿದ್ದಾರೆ. ಇವರಿಗೆ ಹೋಲಿಸಿದರೆ, ಕತೆಯ ವಸ್ತು ಮತ್ತು ಪಾತ್ರಗಳ ಜತೆ ಭಾವಾವೇಶದ ತಾದಾತ್ಮ್ಯ ಪಡೆದುಕೊಳ್ಳುವ ಕಲಿ ಕಥನಗಾರಿಕೆ, ಅವನ್ನು ಸೃಜನಶೀಲ ದೂರದಲ್ಲಿಟ್ಟು ನಿರ್ವಹಿಸುವ ಕುಶಲತೆಯನ್ನು ತೋರಲು ಅನೇಕ ಕಷ್ಟಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಕತೆಯ ವಿವರಗಳ ಪ್ರವಾಹದಲ್ಲಿ ಲೇಖಕ ಸ್ವತಃ ತೇಲಿಹೋದಂತೆ ಅವರ ಬರವಣಿಗೆಯಿದೆ. ಭಾಷೆಯನ್ನು ವಿವರಗಳಿಗೆ ಬಳಸುವ ಕತೆಗಾರ ಅದನ್ನು ಧ್ವನಿಪೂರ್ಣವಾಗಿ ದುಡಿಸಿಕೊಳ್ಳುವುದಕ್ಕೆ ಅವಕಾಶ ಕಳೆದುಕೊಳ್ಳುತ್ತಾನೆ. ಕಲಿಯ ಬಹುತೇಕ ಕತೆಗಳ ಯಶಸ್ಸು ಕಲೆಗಾರಿಕೆಗಿಂತ ತಮ್ಮ ವಸ್ತು ಮತ್ತು ಸಾಮಾಜಿಕ ಧೋರಣೆಯ ಕಾರಣದಿಂದಲೇ ಬಂದಿದೆ ಅನಿಸುತ್ತದೆ. ಅವರ ಮೊದಲ ಘಟ್ಟದ ಕತೆಗಳಲ್ಲಿ ಹಿಡಿಸಲಾರದಷ್ಟು ವಿವರಗಳನ್ನು ಕತೆಯ ಒಡಲಿಗೆ ತುಂಬು ವಿಕೆಯಿದೆ. ತಾನು ಸೃಷ್ಟಿಸುವ ಪಾತ್ರಗಳ ಜತೆ ಕತೆಗಾರ ವೈಯಕ್ತಿಕ ಇಷ್ಟಾನಿಷ್ಟದೊಂದಿಗೆ ಬೆರೆತುಬಿಡುವ ಕಾರಣ, ಅವರ ಕತೆಗಳ ಪಾತ್ರಗಳನ್ನು ಕೆಟ್ಟ ಮತ್ತು ಒಳ್ಳೆಯ ಎಂದು ವಿಂಗಡಿಸಿಬಿಡಬಹುದು. ಇದರಿಂದ ಮನುಷ್ಯರ ಸಂಕೀರ್ಣ ಸ್ವಭಾವವನ್ನೂ ಬಾಳಿನ ವಿಚಿತ್ರ ಲಯವನ್ನೂ ಶೋಧಿಸುವ ಅವಕಾಶವನ್ನು ಕೈಯಾರೆ ಕಿರುದುಗೊಳಿಸಿಕೊಂಡಂತಾಗಿದೆ; ಕತೆಯಲ್ಲಿ ನಡೆಯುವ ಘಟನೆಗಳು ಮತ್ತು ಪಾತ್ರಗಳ ವರ್ತನೆಗಳು ಪೂರ್ವನಿಯೋಜಿತ ('ಮತಾಂತರ' ಡಾಟರ್ ಆಫ್ ದುರುಗವ್ವ) ಎಂಬಂತೆ ಭಾಸವಾಗುವುದಕ್ಕೆ ಅವಕಾಶವಾಗಿದೆ.



ಆದರೆ ಕಲಿ, ತಮ್ಮ ಎರಡನೇ ಹಂತದಲ್ಲಿ ಮೇಲ್ಕಾಣಿಸಿದ ಮಿತಿಗಳನ್ನು ಮೀರುವುದಕ್ಕೆ ಯತ್ನಿಸುತ್ತಿದ್ದಾರೆ; ಪುಟ್ಟ ಘಟನೆಯನ್ನು ಇಟ್ಟುಕೊಂಡು ವಿವರಗಳಿಗೆ ಆಸೆಪಡದೆ ಸರಾಗವಾಗಿ ಕತೆಹೇಳುವ ಕಲೆಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ದಾರುಣವಾದ ಜಗತ್ತಿನಲ್ಲೂ ದುಡಿಯುವ ಜನ ಬದುಕುಳಿಯಲು ಮಾಡುತ್ತಿರುವ ಹೋರಾಟ ಮತ್ತು ತೋರುತ್ತಿರುವ ಚೈತನ್ಯವನ್ನು ಹಿಡಿದಿಡಲು (ಕೆರೆ) ಯತ್ನಿಸುತ್ತಿದ್ದಾರೆ; ಬಾಳಿನ ಲಯದಲ್ಲಿ ಇರುವ ತಮಾಶೆ ಮತ್ತು ಸಣ್ಣಪುಟ್ಟ ಉಲ್ಲಾಸಗಳನ್ನು ಕಾಣಿಸುವ ವ್ಯವಧಾನವನ್ನು ತೋರುತ್ತಿದ್ದಾರೆ; ಪಾತ್ರಗಳ ಮನಸ್ಸಿನೊಳಗೆ ಹೊಕ್ಕು ಅದರ ತಲ್ಲಣಗಳನ್ನು ತಾಳ್ಮೆಯಿಂದ ವಿಶ್ಲೇಷಿಸುವ ಕೆಲಸವನ್ನು ('ಮಾಮೂಲಿ ಗಾಂಧಿ') ಮಾಡುತ್ತಿದ್ದಾರೆ; ರೂಪಕದ ಭಾಷೆಯಲ್ಲಿ ಕತೆಗಳನ್ನು ಕಟ್ಟಲು ('ಕತ್ತಲು') ಯತ್ನಿಸುತ್ತಿದ್ದಾರೆ; ಇವೆಲ್ಲ ಅವರ ಕಥೆಗಾರಿಕೆ ಹಿಡಿದಿರುವ ಹೊಸ ಮಜಲಿನ ನಡಿಗೆಯನ್ನು ಸೂಚಿಸುತ್ತಿವೆ. ಅತಿವಾಸ್ತವವಾದಿ ಧಾಟಿಯ, ಸಾಮಾಜಿಕತೆ ಹೇರಿಕೆಯುಳ್ಳ ಕತೆಗಳನ್ನು ಬರೆದು ದಣಿದ ಬಳಿಕ ಬಹುಶಃ ಅವರು ಇತರೆ ಮಾದರಿಗಳನ್ನು ಕಂಡುಕೊಳ್ಳುತ್ತಿರಬಹುದು.



ತನ್ನ ಸಾಮಾಜಿಕ ರಾಜಕೀಯ ನಿಲುವುಗಳನ್ನು ನೇರವಾಗಿ ಹಾಗೂ ಭಾವುಕವಾಗಿ ಘೋಷಿಸಿಕೊಳ್ಳುವ ಲೇಖಕರಲ್ಲಿ ಕಲಿ ಒಬ್ಬರು. ಅವರದು ನೇರವಾದ ಮತ್ತು ಪ್ರಾಮಾಣಿಕವಾದ ಗ್ರಾಮೀಣ ಮುಗ್ಧತೆಯ ಮನಸ್ಸು ಕೂಡ. ತಾವು ಬರೆದ 'ಮತಾಂತರ' ಕತೆಯನ್ನು ಓದಿ ಕಣ್ಣೀರು ಸುರಿಸಿರುವುದಾಗಿ ಅವರು ಒಂದೆಡೆ ಹೇಳಿಕೊಳ್ಳುವುದುಂಟು. ಅವರ ಈ ಎಮೋಶನಲ್ ವ್ಯಕ್ತಿತ್ವವು ಅವರ ಮುನ್ನುಡಿಗಳಲ್ಲಿ ಕೂಡ ವ್ಯಕ್ತವಾಗಿದೆ. ಅವರು ಸಂಕಲನಗಳಿಗೆ ಅತಿದೀರ್ಘವಾದ ಮುನ್ನುಡಿಗಳನ್ನು ಬರೆಯುತ್ತಾರೆ. ಅವು ಕತೆಗಾರನ ಆತ್ಮಕಥೆಯ ಭಾಗಗಳಂತೆ ಕೂಡ ಇವೆ. ಕತೆಗಾರರ ನಿಲುವನ್ನು ಅವರ ಕತೆಗಳೇ ಹೇಳಬೇಕು; ಕತೆಗಾರನಲ್ಲ. ನವ್ಯದ ಲೇಖಕರು ತಮ್ಮ ಬಗ್ಗೆ ಮತ್ತು ತಮ್ಮ ಕೃತಿಗಳ ಬಗ್ಗೆ ಬಹಳ ಕಡಿಮೆ ಹೇಳಿಕೊಳ್ಳುತ್ತಿದ್ದರು ಎನ್ನುವುದನ್ನು ಇಲ್ಲಿ ನೆನೆಯಬೇಕು. ಕಲಿಯವರ ಮುನ್ನುಡಿಗಳು ಒಂದು ಬಗೆಯಲ್ಲಿ ಅವರ ಕದಡಿದ ಮನಃಸ್ಥಿತಿಯನ್ನು ಸಹ ಸೂಚಿಸುತ್ತವೆ. "ನಾನ್ ಅಕಾಡೆಮಿಕ್ ಪರಿಸರದಲ್ಲಿ ಬದುಕುತ್ತಿರುವ ನನ್ನ ಬಗ್ಗೆ ಸಾಹಿತ್ಯ ವಲಯ ಇನ್ನೂ ಒಂದು ತೆರನಾದ ಅಸ್ಪೃಶ್ಯತೆ ಹೊಂದಿರುವುದಕ್ಕೆ ನನಗೆ ಆಗಾಗ ಅಸಹ್ಯವೆನಿಸುವುದುಂಟು. ಅವಮಾನ, ಹೀಯಾಳಿಕೆ, ಧಿಕ್ಕರಿಸುವಿಕೆ ಎದುರಿಸಿಯೇ ಬದುಕಬೇಕೆಂದರೆ ನನಗೆ ಒಂದು ತೆರನಾದ ಖುಷಿ."; "ನಾನಾಗಿ ಯಾರ ಮುಂದೆ ಕೈಕಟ್ಟಿ ಕೈಮುಗಿದು ಬೇಡುವುದು ಎಂದರೆ ಆಗಲ್ಲ" ಎಂದು ಅವರು ಹೇಳುವುದುಂಟು.

ಒಬ್ಬ ಲೇಖಕನಿಗೆ ಹೀಗೆಲ್ಲ ಹೇಳುವಂತಹ ಅಗತ್ಯ ಯಾಕೆ ಬರುತ್ತದೆಯೊ ತಿಳಿಯದು. ಸದರಿ ಲೇಖಕನಿಗೆ ಸ್ಥಾಪಿತವಾದ ಸಾಹಿತ್ಯಕ ರಾಜಕಾರಣದ ಜತೆ ಒಂದು ಬಗೆಯ ಆಕ್ರೋಶ ಇದ್ದಂತಿದೆ. ಆದರೆ ಈ ಬಗ್ಗೆ ಕಲಿ ಅಗತ್ಯಕ್ಕಿಂತ ಜಾಸ್ತಿ ತಲೆಕೆಡಿಸಿಕೊಂಡಂತಿದೆ. ಅವರ ಮಾತುಗಳಲ್ಲಿ ದಮನಿತ ಅರಿಮೆಯಿಂದ ಹುಟ್ಟಿದ ನೋವು, ಕೀಳರಿಮೆ ಮತ್ತು ಸ್ವಾಭಿಮಾನಗಳ ಸಂಕೀರ್ಣ ಮನಸ್ಥಿತಿಯಿದೆ. ಬಹುಶಃ ಗಾಯಗೊಂಡಂತಿರುವ ಮನೋಸ್ಥಿತಿಯಿಂದಲೇ ಅವರು ಕತೆ ಬರೆಯುತ್ತಾರೆ ಮತ್ತು ಹಾಗೆ ಬರೆಯುವಿಕೆಯಲ್ಲಿ ನಿರಾಳತೆಯನ್ನು ಅನುಭವಿಸುತ್ತಾರೆ ಅನಿಸುತ್ತದೆ. ಸಣ್ಣಮೆಚ್ಚುಗೆಯಿಂದ ಪುಳಕಗೊಳ್ಳುವ ಹಾಗೂ ಸಣ್ಣ ಅವಜ್ಞೆಯಿಂದ ಕಂಗೆಡುವ ಕಲಿ, ಕೋಮಲ ಮನಸ್ಸಿನ ವ್ಯಕ್ತಿ. ಆದರೆ ಕೋಮಲತೆಯು ರಾಜಕೀಯ ಪ್ರಜ್ಞೆಯಲ್ಲಿ ಇರಬೇಕಾದ ಬೌದ್ಧಿಕತೆಯ ಚೂಪುತನವನ್ನು ಕ್ಷೀಣಗೊಳಿಸುತ್ತಿದೆಯೇ ಎಂದು ನನಗೆ ಶಂಕೆ.

ಜನಪರವಾದ ಚಳವಳಿಗಳಲ್ಲಿ ಭಾಗವಹಿಸುವ ಕಲಿಗಣನಾಥ ಅವರ ಸಾಮಾಜಿಕ ಸಂವೇದನೆ ಮಾನವೀಯವಾಗಿದೆ. ಇದು "ಸಿಂಧನೂರಿನ ಬೀದಿ ಬದಿಯ ಚಪ್ಪಲಿ ಹೊಲಿಯುವ ತಮ್ಮ ರಾಘಣ್ಣ, ಹಣ್ಣು ಮಾರುವ ಹನುಮಂತಣ್ಣ, ಮಸಾಲಿ ಸಾಮಾನು ಮಾರುವ ಮುನ್ನಾ, ಪಾನ್‌ಶಾಪ್‌ನ ಶೇಖರ್, ತತ್ತಿ ಮಾರುವ ಮುದುಕಿ ಇಂತಹ ನೂರಾರು ಜನಸಾಮಾನ್ಯರ ಜತೆ ಬದುಕುವುದೇ ಸ್ವರ್ಗದನುಭವ ನೀಡುತ್ತದೆ" ಎಂದು ಸಾರಿಕೊಳ್ಳುವಷ್ಟು ದೃಢವಾಗಿದೆ. ಕುಂವಿಯವರೂ ಹೀಗೇ ಹೇಳಿಕೊಂಡಿರುವುದುಂಟು. ಇದೆಲ್ಲ ದಿಟವೇ. ಉಚಿತವೇ. ಆದರೆ ಈ ವೀರನಿಷ್ಠೆಯು ದುಡಿಮೆಗಾರ ಜನರ ಲೋಕವನ್ನು ರೊಮ್ಯಾಂಟಿಸೈಜ್ ಮಾಡುವುದಕ್ಕೆ ಕಾರಣವಾಗುತ್ತಿದೆಯೇ? ಲೋಕದ ಬೇರೆಬೇರೆ ಅನುಭವಗಳ ಒಳಹರಿವಿಗೆ ಸ್ವಯಂ ನಿರ್ಬಂಧ ವಿಧಿಸಿಕೊಳ್ಳುವುದಕ್ಕೆ ಕಾರಣವಾಗುತ್ತಿದೆಯೇ? ಈ ಬಗ್ಗೆ ಮರುಚಿಂತಿಸಬೇಕಿದೆ. ಕಲಿಯವರ ಕತೆಗಳಲ್ಲಿ ಆಧುನಿಕ ಬದುಕಿನ ಆಯಾಮಗಳನ್ನು ಹಿಡಿಯುವ ಕತೆಗಳಾಗಲಿ, ಪ್ರಜ್ಞಾವಂತ ಪಾತ್ರಗಳನ್ನು ಸೃಷ್ಟಿಸಿ ಅವುಗಳ ಮನೋಲೋಕದ ತಳಮಳವನ್ನು ಹಿಡಿಯುವುದಕ್ಕಾಗಲಿ, ಹೆಚ್ಚು ಸಾಧ್ಯವಾಗುತ್ತಿಲ್ಲ ಎಂಬುದು ಗಮನಾರ್ಹ. ಭಾವಾವೇಶವು ಜಿಜ್ಞಾಸೆಯ ಸಂಗ ಮಾಡದಿದ್ದರೆ, ದೊಡ್ಡದನ್ನು ಕಾಣಿಸುವುದು ಕಷ್ಟ.

"ಇನ್ನೂ ನೂರಾರು ಕಥೆಗಳು ಕೆಲವು ಕಾದಂಬರಿಗಳೂ ನನ್ನ ಮನಸ್ಸು ಹೃದಯ ಮತ್ತು ಕೈಬೆರಳ ತುದಿಗಳಲ್ಲಿವೆ" ಎಂದು ಲೇಖಕರು ಹೇಳುವುದುಂಟು. ಇದು ಓದುಗರ ಪಾಲಿಗೆ ಬೆದರಿಕೆಯೊ ಭರವಸೆಯೊ ಕಾಣೆ. ನಮ್ಮ ಕೆಲವು ಹಿರಿಯ ಲೇಖಕರು ಜನಪ್ರಿಯತೆಗೆ ಮರುಳಾಗಿ ಆತ್ಮನಿರೀಕ್ಷೆಯೇ ಇಲ್ಲದೆ ಬರೆಬರೆದು ಓದುಗರ ಮುಂದೆ ಎಸೆಯುತ್ತಿರುವುದನ್ನು ನೋಡಿದರೆ, ಅವರ ಅದಮ್ಯ ಶಕ್ತಿಯ ಬಗ್ಗೆಯೇ ಅಂಜಿಕೆ ಹುಟ್ಟುತ್ತದೆ. ಆದರೆ ಕಲಾತ್ಮಕ ಕುಶಲತೆಯನ್ನು ಪಡೆದುಕೊಳ್ಳುತ್ತಿರುವ, ಸಾಮಾಜಿಕ ಬದ್ಧತೆಯನ್ನು ಹೊಸ ವಿನ್ಯಾಸದಲ್ಲಿ ಮಂಡಿಸುವ ಸಾಧ್ಯತೆ ಪ್ರಕಟಿಸುತ್ತಿರುವ ಕಲಿಗಣನಾಥ ಅವರ ಶಕ್ತಿಯಿಂದ ಕನ್ನಡ ಕಥಾಪ್ರಕಾರಕ್ಕೆ ಬಹಳಷ್ಟು ಬರಬೇಕಿದೆ. ಇದಕ್ಕೆ ಬೇಕಾದ ಹೊರಳಿಕೆ ಮತ್ತು ಸಿದ್ಧತೆಯನ್ನು ಅವರ ಈಚಿನ ಕತೆಗಳು ತೋರುತ್ತಿವೆ. ●

ಹೇಸಿಗೆ ತಿನ್ನೊ ದೇವ್ರುರಿಗೆ ಹೆಂಡ ಕುಡಿಯೊ ಪೂಜಾರಿ ಅನ್ನಂಗಾಯ್ತು!

ಈ ಕಾಲದಲ್ಲಿ ಸಂಭವಿಸುತ್ತಿದ್ದ ಹವಾಮಾನದ ಬಗ್ಗೆ ಕೆದಿಸಿಕೊಂಡು ಯೋಚಿಸುತ್ತಿದ್ದ ಕಾಳಮಾವ,

"ಈಟೊತ್ತಿಗೆ ಸಳಿಯಾಗಬೇಕಾಗಿತ್ತು, ಕ್ವರೆ ...ಳಬೇಕಾಗಿತ್ತು, ಅಂತದ್ದೇನೂ ಆಯ್ತಾಯಿಲ್ಲವಲ್ಲಾ, ...ಂದೇನು ಅಂತ?" ಎಂದ.

"ನಿಜ ಕಣ ಮಾವ. ಬುಟ್ಕಲಿ, ಪೆಟಗೆಲಿದ್ದ ಸಟ್ಟರು, ...ು ಯಲ್ಲಾನು ತಗದು ಇಕ್ಕಳರು. ಈಗ ನೋಡು ...ಲ್ಲಿ ಬ್ಯಾಸಗೆಲಿದ್ದಂಗೆ ಅವುರೆ."

...ಯ ಲು ಸೀ ಮೆ
...ಕಟ್ಟೆಪುರಾಣ
▶ಬಿ. ಚಂದ್ರೇಗೌಡ

"ಈ ಸೀರನಂತು ಕೆಟಬಾಯಿನೆ ಕುಣಸನವ್ವ, ...ಥೋನು ಸುಮ್ಮನವುನೆ."

"ಈ ವರ್ಸ ಸ್ಕಕೆ ಜಾಸ್ತಿ ಅಂತ ಪಂಚಾಂಗನೆ ...ಳಿದ್ದತಂತೆ" ಎಂದ ಸೀರ.

"ಪಂಚಾಂಗನೆ ಹೇಳಬೇಕೇನೊ? ನೋಡಿದ್ರೆ ...ತ್ತಾಗದಿಲವೆ. ಹನ್ನೊಂದು ಗಂಟೆವೊತ್ತಿಗೆ ಸ್ಕಕೆ ...ದುವಾಯ್ತಾ ಅದಪ್ಪ" ಎಂದ ಉಗ್ರಿ.

"ಈ ಸತಿ ಅವುರೆ ಕಾಯಾಗದಿಲ್ಲ" ಎಂದ ...ಳಮಾವ.

"ಅವುರೆ ಗಿಡವೆಯಿಲ್ಲ, ಇನ್ನು ಕಾಯೆಲ್ಲಿ ...ದವ್ವೂ. ಕ್ವರಿಗೆ ಅಲವೆ ಅವುರೆಕಾಳ ಕಟ್ಟದು. ...ವಾಮಾನ ಹಾಳಾದಂಗೂ ಬ್ಯಳೆನೂ ಹಾಳದವಂತೆ ...ಮಾವ" ಎಂದ ಉಗ್ರಿ.

"ಯಾರ್ಲ ಅಂಗಂದೋರು?"

"ಹವಾಮಾನ ಅಳಿಯೋ ವಿಜ್ಞಾನಿಗಳೆ ...ಳ್ತಾಯಿದ್ದರಂತೆ."

"ಅವುರೆ ಹೇಳಬೇಕೇನ್ಲ? ನೋಡಿದ್ರೆ ಕಾಣದಿಲವೆ. ಉತ್ತರ ಕರ್ನಾಟಕದಲ್ಲಿ ಪ್ರವಾಹ ಬತ್ತಲ್ಲಾ, ಆಗ ...ವಾಮಾನದ ನನ್ನ ಮಕ್ಕಳು ತರಿತ ಕುಂತಿದ್ರೆ? ...ಳಬೇಕಾಗಿತ್ತು ಕಂಡ್ರ" ಎಂದು ಕಾಳಮಾವ ...ದ.

"ಅದಾಯ್ತಲ್ಲ, ಈಗ ಸರ್ಕಾರ ಮನೆ ಕಟ್ಟಿ ಕೊಡಕ್ಕೂ ...ದೆಮುಂದೆ ನೋಡ್ತಾ ಅದೆ."

"ಮುಂದ್ಲು ಮಳಿಗಾಲದೊತ್ತಿಗೆ ಕಟ್ಟಕೊಡ್ತಿನಿ ...ದವುನಲ್ಲ ಎಡೂರಪ್ಪ" ಎಂದ ಸೀರ.

"ಅದು ಮಾತಾಡೋವಷ್ಟು ಸುಲಬಲ್ಲ ಕಣಮಾವ. ...ತಿನಲ್ಲೇ ಮನೆ ಕಟ್ಟೊ ಜನಗಳ ಕೈಲಿ ಅಧಿ ತಗಿ ...ತ ಗುದ್ದಿಕೊಟ್ಟಂಗಾಗ್ಯದೆ ಈಗ."

"ನಿಜ, ಕಾಂಗ್ರೆಸ್ಸಿನೋರಿಗೆ ಜಂತಾಮನೆ, ಆಶ್ರಯದ ...ೆ ಕಟ್ಟ ಅನುಭವ ಇತ್ತು, ಕಟ್ಟಿ ಕೊಡೋರು. ಈ ...ಮಕ್ಕಳಿಗೆ ಯಾವನುಭವ ಇದ್ದತೂ?"

"ಇವುರಿಗೆ ಬರೀ ಕೆಡವಿರೊ ಅನುಭವ ಅಷ್ಟೆ ಇರದು. ಕಟ್ಟೊ ಅನುಭವ ಇಲ್ಲ, ಅದ್ಕೆ ನೋಡು ಅದ್ವಾನಿ ರಾಮ್ಮಂದ್ರ ಕಟ್ಟಕ್ಕಾಗದೆ ಮನಿಗೋದ ಅತ್ತಗೆ" ಎಂದ ಉಗ್ರಿ.

"ರಾಜಕೀಯ ಬುಟ್ನೆ ಅಂಗರೆ?" ಎಂದ ಕಾಳಮಾವ.

"ಬುಟ್ಟಿಲ್ಲ ಕಣಮಾವ, ಅವುನಿಗೆ ವಯಸ್ಸಾಯ್ತು ಅಂತ ಇನ್ನಬ್ಬನ್ನ ತಂದು ಅದ್ಯಕ್ಷನ್ನ ಮಾಡ್ಯವುರೆ. ಅದ್ಕೆ ಇವುನು ಮನಿಗೋದ."

"ಅವುನ್ಯಾರೂ?"

"ಅವುನ್ಯಾರಪ್ಪ, ವಳ್ಳೆ ಬಸವಿದ್ದಂಗವುನೆ. ಅವುನ್ನ ನೋಡಿದ್ರೆ ಬಿಜೆಪಿ ಕತೆ ಮುಗಿತು ಅನ್ನಂಗೆ ಕಾಣ್ತದೆ. ಇನ್ನ ವಿರೋಧ ಪಕ್ಷದ ನಾಯಕಿಯಾಗಿ ಇಲಾಕಿ ಹಸ ಮಾಡ್ಯವುರೆ."

"ಇಲಾಕಿ ಹಸ್ಯಾರ್ಲ?" ಎಂದು ಜುಮ್ಮಿ ನಕ್ಕಳು.

"ಅವುಳೆ ಕಣೆ ಸುಸುಮ ಸ್ವರಾಜ್. ಗಣಿಕಳ್ರ ಬಾಡಿಗೆ ಅವ್ವನಂತೆ."

"ಅದ್ಯಾಕ್ಲ ಅಂಗಂತೀ?"

"ಊ ಕಣೇ. ತಿಂಗಳಿಷ್ಟು ಅಂತ ಬಾಡಿಗೆ ಕೊಡ್ತವಂತೆ ಇವು. ಅದ್ಕೆ ಅವು ಅಮ್ಮ ಅಂತ ಬಳ್ಳಾರಿ ಗುಡ್ಡನ್ಯಲ್ಲ ಗುಮ್ಮತ ಕುಂತವುರೆ."

"ಎಲ್ಲಿಗೆ ಬಂತ್ಲ ಅವುರ ಗಲಾಟ?" ಎಂದ ಕಾಳಮಾವ.

"ಎಲ್ಲಿಗೆ ಬತ್ತು ಅಂದ್ರೆ ಅವುರಿಗೇನೇನು ಬೇಕೊ ಯಲ್ಲಾನು ಮಾಡಿಕಂಡ್ರು ಕಣಮಾವ. ಎಡೂರಪ್ಪಂತೂ ಅವುರ ಮನೆ ಕ್ಯಲಸದೋನಿದ್ದಂಗವುನೆ. ಕ್ಯಲಸಕಿರೋರು ಏನಾರ ಹೇಳಿದ್ರೆ ತಿರುಗಿ ಜವಾಬ್ ಕೊಡದಂಗೆ ಮಾಡ್ತರಲ್ಲಾ ಅದೇ ತರ ರೆಡ್ಡಿಗಳ ಹೇಳಿದ್ದ ಮಾಡಿಕಂಡು ಹೋಯ್ತಾ ಅವುನೆ. ಈಗ ಅರ್ಪಿ ಬಿದ್ದೊದ್ರ್ಯಾರಪ್ಪ ಅಂದ್ರೆ, ರೆಡ್ಡಿಗಳ ಮಾತ ಕಟಗಂಡು ಆಂದ್ರಕೋಗಿ ಹೋಟ್ಯೆಲಿದ್ದವಲ್ಲ, ಆ ಯಮ್ಮೆಲ್ಲೆಗಳ ಪಾಡು ಬ್ಯಾಡ ಅಂಗಾಗ್ಯದೆ."

"ಅವುರಿಗೇನಾಗಿದ್ದತೂ?"

"ಅವುರಿಗೇನೂ ಆಗಲಿಲ್ಲ ಕಣಮಾವ. ಅದ್ಕೆ ರೇಣುಕಾಚಾರಿ ಅನ್ನೊನು ವಸಿ ಜನ ಎಮ್ಮೆಲ್ಲೆ ಹಿಡಕಂಡು ನನ್ನನ್ನ ಮಂತ್ರಿ ಮಾಡಿ, ಇಲ್ಲ ಅಂದ್ರೆ ಸರಿಯಾಗದಿಲ್ಲ ಅಂದವುನಂತೆ."

"ಅದಪ್ಪ ವಡತ. ಅಲ್ಲಾ ರೇಣುಕಾಚಾರಿ ಹಿಂದೂ ಎಮ್ಮೆಲ್ಲೆಗಳವುರೆ ಅಂದ್ರೆ ಅವುರಿನ್ಯಂಥಾ ಜನ ಅಂತ?" ಎಂದ ಸೀರ.

"ಇರತವೆ ಕಣಮಾವ. ಈಗ ನಿನ್ನಂಥೋರಿಗೆ ಪಾಲೊಯರ್ ಅವುರಪ್ಪ, ನೀನು ಸಂತಿಗೋದಾಗ ಒಬ್ಬನೆ ಹೋಯ್ತಿಯಾ? ನಿನ್ನಿಂದೂ ಮೂರು ಜನ ಬತ್ತರೆ. ಅವುರಿಗೆ ಯರಡರಲ್ಲಿ ಮೂರು ಕಾಫಿ ಕೊಡುಸ್ತಿ, ಅಂಗೆ ಈ ರೇಣುಕಾಚಾರಿಗೂ ಬೇಳೂರು, ಬೆಳ್ಳುಬ್ಬಿ ಅನ್ನೊ ಬೇವರ್ಸಿಗಳಿರತವೆ. ಇವುನು ಜಯಲಕ್ಷ್ಮಿ ಸವಾಸ ಮಾಡಿದ್ರೆ, ಅವು ವೆಂಕಟಲಕ್ಷ್ಮಿ, ಸುಬ್ಬಲಕ್ಷ್ಮಿ ಅನ್ನೊರ ಸವಾಸ ಮಾಡತವೆ. ಇಲ್ಲ ಅಂದ್ರೆ ಇಂಥೋನ ಸಪೋಟಿಗೆ ಬಂದವೆ" ಎಂದ.

"ಖಂಡಿತ ಇಲ್ಲ ಕಣೊ ಉಗ್ರಿ. ನೀನೇಳದು ಹಂಡ್ರೆಡ್ ಪರಸೆಂಟು ಕರಟ್ಟು. ಸಾಮಾನ್ಯವಾಗಿ ದೇವರು ಯಂಗಿರತವೆ ಅದೇ ತರ ಪೂಜಾರಿಗಳೂ ಇರತರೆ, ಲೀಡ್ರು ಯಂಗಿರತನೆ ಅಂಗೆ ಪಾಲೋಯರು ಇರತನೆ. ಪರೆಗ್‌ಜಾಂಪಲ್ ಎಡೂರಪ್ಪನಂಥೋನಿಗೆ ರೇಣುಕಾಚಾರಿಯಂಥೋನೆ ಪಾಲೊಯರ್ ಇರತನೇ ವರತೂ ಸುರೇಶ್ ಕುಮಾರ್‌ನಂಥೋನು ಇರದಿಲ್ಲ" ಎಂದ ವಾಟಿಸ್ಸೆ.

"ಅಲ್ಲಾ ಈ ಹೆಣ್ಣುಮಗಳ ರಾಜಿನಾಮೆ ಕೊಡಿಸಿ ತಾನು ಮಂತ್ರಿಯಾಗಕ್ಕೆ ವಂಟವುನಲ್ಲಾ, ಅವುನಿನ್ಯಂಥಾ ಹೆಣಗನನ್ನ ಮಗಿರಬೇಕು ನೋಡು."

"ಲ್ಯಕ್ಕ ಹಾಕು. ಅಂಥೋನಿಗೆ ಎಡೂರಪ್ಪ ಬಗ್ಯವುನೆ ಅಂದ್ರೆ ಎಡೂರಪ್ಪನತ್ರ ಇನ್ಯಂಥ ವೀಕ್‌ನೆಸ್ ಇರಬೇಕು. ನಾನಿಂದೆನೆ ಹೇಳಿದ್ದೆ ಕಣೊ ಉಗ್ರಿ."

"ಏನೇಳಿದ್ದಪ್ಪಾ?"

"ಈ ಎಡೂರಪ್ಪ ಯಾವುದೋ ಮ್ಯಾಟ್ರಲ್ಲಿ ರೇಣುಕಾಚಾರಿ ಕೈಗೆ ಸಿಗಾಯ್ಕಂಡವ್ರನೆ. ಅದ್ಕೆ ರೇಣುಕಾಚಾರಿ ಹೇಳಿದಂಗೆ ಕೇಳ್ತನೆ ಅಂತ."

"ನೀನೇಳಿದ್ದು ಈಗರ್ಥಾಯ್ತು, ಅಂತೂ ಎಡೂರಪ್ಪ ರೇಣುಕಾಚಾರಿ ಹೇಳಿದಂಗೆ ಕೇಳ್ತನೆ ಅಂದಂಗಾಯ್ತು."

"ಕೇಳ್ಳಪ್ಪ ಕೇಳಲಿ. ನಾವು ಬ್ಯಾಡ ಅನ್ನದಿಲ್ಲ, ಆದ್ರೆ ರೇಣುಕಾಚಾರಿ ಯಾವು ದೊಡ್ಡ ಮನ್ಸ. ಜಯಲಕ್ಷ್ಮಿ ಕೆಡಸಕ್ಕೋಗಿ ಕೇಸಾಕಿಸಿಕೊಂಡು ಬೇಲ್ ಮ್ಯಾಲೆ ಬಾಳತಾಯಿರೊ ಮನ್ಸ. ಅಂಥೊನ್ನ ಎಡೂರಪ್ಪ ಮಂತ್ರಿ ಮಾಡ್ತನೆ ಅಂದ್ರೆ ಅದು ಒಂದು ರೆಕಾರ್ಡೆಯ ಬುಡು."

"ರೇಕಾಡೆ ಬುಡು. ಅದ್ಯಾಕ್ ರೇಣುಕಾಚಾರಿ ಅಂಗೆ ರಚ್ಚೆ ಹಿಡದವುನೆ ಅಂದ್ರೇ ಅವುನಂಥೋನು ಇನ್ನೆಂದೂ ಮಂತ್ರಿಯಾಗಕ್ಕೆ ಆಗದಿಲ್ಲ. ಆದ್ರೆ ಈಗಾಗಬೇಕು. ಅದ್ಕೆ ಹಟ ಹಿಡಿದ, ಹೋಗ್ಲಿ ಬುಡತ್ತಗೆ."

"ಆಹಾ, ಏನು ಕರ್ನಾಟಕನಯ್ಯ ಇದು. ಸಿ.ಟಿ. ರವಿ, ರೇಣುಕಾಚಾರಿ, ಸುಧಾಕರ, ಸಂಪಂಗಿ, ಕೃಷ್ಣಯ್ಯ ಶೆಟ್ಟಿ, ಇಂಥೋರ್ಯಲ್ಲ ಆಳಿಬುಟ್ರಲ್ಲಾ."

"ಜನ ಓಟು ಕೊಟ್ಟು ಗೆಲ್ಸಿಸಿದ್ರು. ಅವುರುದೂ ಒಂದು ಯಾಚಗ ನ್ಯಡಿತು ಅನ್ನದ ಬುಟ್ರೆ ಆಳಿದ್ರು ಅಂತ ಹೇಳದು ಕಷ್ಟ ಕಣೊ ವಾಟಿಸ್ಸೆ. ಅರಸು, ಹೆಗಡೆ, ಪಟೇಲ್ರು, ದೇವೇಗೌಡ್ರು ಇಂಥೋರ ಕ್ಯಳಗಿದ್ದ ಮಂತ್ರಿಗಳು ರಾಜ್ಯ ಆಳಿದ್ರು ಅಂಥ ಹೇಳಬವುದು. ಈ ಬಿಜೆಪಿಗಳಿಗೆ ಆಳಕ್ಕೊ ಯೋಗ್ಯತೆ ಇಲ್ಲ, ಅದಕೆ ಕಡದಾಡಿ ಸಾಯ್ತ ಕುಂತವೆ."

"ಅದೇನಾರ ಆಗ್ಲಿ, ಜಲ್ದಿಮುಗುದ್ರು ಸಾಕಾಗ್ಯದೆ ಕಣೊ."

"ಕುಮಾರಣ್ಣ ಹೇಳಿದಂಗೆ ಕಾಂಗ್ರೆಸ್ಸಿನೋರು ಕೇಳಿದ್ರೆ ಇಷ್ಟೊತ್ತಿಗೆ ಒಂದ ಗತಿ ಕಾಣದು. ಏನು ಮಾಡಿ ಈ ಕಾಂಗ್ರೆಸ್ಸಿನೋರೆ ಸರಿಲ್ಲ."

"ಮಿಸ್ಟರ್ ಉಗ್ರಿ, ಕಾಂಗ್ರೆಸ್ಸಿನೋರು ಕರಟ್ಟಾಗ್ಯವುರೆ. ಅಲ್ಲಿ ಅವುಸರದೋರು ಯಾರು ಇಲ್ಲ, ಆದ್ರೆ ದೇವೇಗೌಡ್ರ ಮಕ್ಕಳಿಗೆ ತುಂಬ ಅವುಸರಾಗ್ಯದೆ. ಯಾಕೆ ಕೇಳು?"

"ನೀನೆ ಹೇಳು."

"ಹೇಳಿಕೇಳಿ ಇವುರು ಇಪ್ಪತ್ತು ತಿಂಗಳ ಜನ. ಇವರ ಅಧಿಕಾರದ ಗುರಿನೂ ಅಷ್ಟೇ ಇರತದೆ. ಅದರಲ್ಲೂ ಮಿಸ್ಟರ್ ದೇವೇಗೌಡ್ರವುರಲ್ಲಾ ಅವುರಿಗೆ ಕಾಂಗ್ರೆಸ್ಸಿನೋರು ಪವರ್ರಲ್ಲಿದ್ರೆ ಪಟ್ಟಿಗೆ ಸುಣ್ಣ ಹುಯ್ಕಂಡಗಾಗಿರತದೆ. ಅಂಗಾದಾಗ ಅವುರು ಯಾರ್ನೂ ಪವರ್ರಲ್ಲಿರಕ್ಕೆ ಬುಡದಿಲ್ಲ, ಇದ್ಯಲ್ಲ ಗೊತ್ತಿರೊ ಕಾಂಗ್ರೆಸ್ಸಿನೋರು ಕುಮಾರಣ್ಣ ಕುಣಿಯದ ನೋಡಿ ಸುಮ್ಮನಾದರತ್ತಗೆ."

"ಅಂಗರೆ ದ್ಯಾವೇಗೌಡ್ರ ಮಾತ ಇನ್ನೂ ನಂಬಂಗಿಲ್ಲ ಅನ್ನು?"

"ಮಣ್ಣಿನ ಮಗ ಮಣ್ಣಿಗೋಗವರಿಗೂ ಮಾತ ನಂಬುಬಾರ್ದು ಕಣೊ. ಅವುನು ಸಿದ್ದರಾಮಯ್ಯನ ಬಗ್ಗೆ ಸಿಂಪತಿ ಮಾತ್ಯಾಕಾಡಿದ ಗೊತ್ತೇನೊ? ಈ ಹಾಸನ, ಮಂಡ್ಯ, ಮೈಸೂರು, ತುಮಕೂರ್ ಕಡೆ ಕುರುಬ್ರು ಜೆಡಿಎಸ್ ಕ್ಯಾಂಡೇಟಗೆ ಓಟಾಕ್ಲಿ ಅಂತ ಅಂಗಂದ. ಈಗ ಚುನಾವಣೆ ಮುಗಿತು. ಕ್ಯಾಂಡೇಟ್ ಗೆದ್ರು. ಈಗೋಗಿ ಮಾತಾಡ್ಸು. ತೇಲಗಣ್ಣು ಮೇಲಗಣ್ಣು ಬುಟ್ಟುಗಂಡು ಅಥವ ಕಣ್ಣು ಮುಚ್ಗಗಂಡು ಬ್ಯಾರೆದ್ನೆ ಮಾತಾಡ್ತನೆ. ಅಂಡರ್‌ಸ್ಟ್ಯಾಂಡ್?!" ●



...ದ್ದೆ-ಚೀಲಗಳಲ್ಲ

ಮೊನ್ನೆ ಗೆಳೆಯರೊಬ್ಬರು ಮಾತಾಡುತ್ತಿದ್ದರು. ನಾನು ಒಮ್ಮೆ ಅಧ್ಯಾಪಕನಾಗಿದ್ದುದರಿಂದ ಈಗಿನ ...ದ್ಯಾರ್ಥಿಗಳು ಮತ್ತು ಅಧ್ಯಾಪಕರತ್ತ ಮಾತು ತಿರುಗಿತು. ನಾವು ಬಲ್ಲ ಮೇಷ್ಟ್ರ ವಿಷಯ ಮಾತಾಡಿದೆವು. ...ವರು ಅಧ್ಯಾಪಕರು ಒಳ್ಳೆಯ ಮಾತುಗಾರರು. ಆದರೆ ವಿಷಯ ಅಷ್ಟಾಗಿ ಇರುತ್ತಿರಲಿಲ್ಲ. ವಿಷಯ ...ದ್ದರೂ ಅದು ಅವರ ವ್ಯಕ್ತಿತ್ವದ ಅಂಗವಾಗಿದ್ದು ಹೊರಬರುತ್ತಿರಲಿಲ್ಲ. ಶಿ.ಡಿ. ಗೋವಿಂದರಾವ್ ಎಂಬ ... ಅಧ್ಯಾಪಕರೊಬ್ಬರು ಇಂಗ್ಲಿಷರನ್ನು ಮೀರಿಸುವಷ್ಟು ನಿರರ್ಗಳವಾಗಿ ಪಾಂಡಿತ್ಯಪೂರ್ಣವಾಗಿ ಇಂಗ್ಲಿಷ್ ...ಮಾತಾಡುತ್ತಿದ್ದರು. ಅವರೆಲ್ಲೋ ತೀರಾ ಸಲೀಸು ಅನ್ನಿಸುತ್ತಿತ್ತು, ಇನ್ನೊಬ್ಬರು ತಮ್ಮಷ್ಟಕ್ಕೆ ತಾವು ಪಾಠ ...ಮಾಡುತ್ತಿದ್ದರು; ಅವರ ವ್ಯಕ್ತಿತ್ವ ವಿಷಯಗಳನ್ನು ನಮಗೆ ಮುಟ್ಟಿಸುತ್ತಿರಲಿಲ್ಲ. ಬೆಂಗಳೂರಿನ ನನ್ನ ...ಧ್ಯಾಪಕರೊಬ್ಬರು ಕೆಟ್ಟ ಇಂಗ್ಲಿಷ್‌ನಲ್ಲಿ- ಆದರೆ ವ್ಯಾಕರಣಬದ್ಧವಾಗಿ- ಮಾತಾಡುತ್ತಿದ್ದರೂ ಅವರ ...ಸೂಹೆ ಮತ್ತು ಒಳನೋಟ ನಮ್ಮ ಮನಸ್ಸು ಹಿಗ್ಗಿಸುತ್ತಿತ್ತು. ರಾಮಸ್ವಾಮಿ ಎಂಬ ನಮ್ಮ ಮಾಸ್ತರೊಬ್ಬರು ...ಪಾರ ವಿದ್ವತ್ತು ಮತ್ತು ಅಸ್ಖಲಿತ ಅಭಿವ್ಯಕ್ತಿ ಪಡೆದಿದ್ದರು. ಆದರೆ ಅದೆಲ್ಲಾ ಅವರು ಓದಿಕೊಂಡಿದ್ದು ...ನ್ನುಸುತ್ತಿತ್ತು.


... ಗೆಳೆಯರು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಮನಸ್ಸು ಹೇಗೆ ಕ್ರಿಯಾಶೀಲವಾಗಿರಬೇಕು, ...ವಂತವಾಗಿರಬೇಕು ಎಂಬುದಕ್ಕೆ ಕುವೆಂಪು ಅವರು ತಮ್ಮ ವಿದ್ಯಾರ್ಥಿಗಳಿಗೆ ನೀಡಿದ ಹಿತವಚನ ...ಲ್ಲೇಖಿಸಿದರು. ಬರೀ ವಿಷಯಗಳನ್ನು ಸಂಗ್ರಹಿಸಿಕೊಂಡು ಉಪಯೋಗವಿಲ್ಲ ಎಂಬುದನ್ನು ಕುವೆಂಪು ...ಗೆ ಹೇಳಿದರಂತೆ: "ನೀವು ಬತ್ತ ಬೆಳೆಯುವ ಗದ್ದೆಗಳಂತಾಗಬೇಕು, ಬತ್ತ ತುಂಬುವ ...ಚೀಲವಾಗಬಾರದು"

ಸ್ವಾತಂತ್ರ್ಯ 'ಯೋಧರು'

ನಮ್ಮಲ್ಲಿ ಅನೇಕ ರೀತಿಯ ಜನ ಬರುತ್ತಾರೆ; ಮೊನ್ನೆ ಒಬ್ಬ ಬಂದು ಪಟ್ಟಾಗಿ ಕೂತು ತನ್ನ ಗೋಳು ಹೇಳಿಕೊಳ್ಳಲೇಬೇಕು ಅಂದ. ಅವನು ಹೇಳಿದ್ದರ ಪ್ರಕಾರ ಅವನ ತಂದೆ ಸ್ವಾತಂತ್ರ್ಯ ಹೋರಾಟಗಾರನಾಗಿದ್ದನಂತೆ; ಆದ್ದರಿಂದ ಈತನ ಕುಟುಂಬಕ್ಕೆ ಸರ್ಕಾರ ವೇತನ ಕೊಡಬೇಕಂತೆ. ನನಗೆ ರೇಗಿಹೋಯಿತು. "ಸರಿ ಕಣಯ್ಯ ನಿನಗಾಗಲಿ ನಿನ್ನ ಅಪ್ಪನಿಗಾಗಲಿ ಸ್ವಾತಂತ್ರ್ಯದಲ್ಲಿ ಹೋರಾಡು ಅಂತ ಯಾರು ಹೇಳಿದ್ದರು? ಜೈಲಿಗೆ ಹೋಗು ಅಂತ ಯಾರು ಹೇಳಿದ್ದರು?"

"ಗಾಂಧೀಜಿ" ಅಂದ.

"ಅವರನ್ನೇ ಕೇಳು. ಅವರು ಈಗ ಮಾತಾಡಬಲ್ಲವರಾಗಿದ್ದರೆ ನಿಮ್ಮಂಥವರಿಗೆ ಉಗಿಯುತ್ತಿದ್ದರು. ಸ್ವಾತಂತ್ರ್ಯಕ್ಕಾಗಿ ಹೋರಾಡುವುದರ ಬಗ್ಗೆ ಹೇಳಿಕೊಳ್ಳಲು ಹಿಂಜರಿಯುವಂಥವನು ಮಾತ್ರ ಗಾಂಧೀಜಿಯ ಶಿಷ್ಯ. ತಮ್ಮ ಜೀವನ ತಾವು ನೋಡಿಕೊಳ್ಳಬಲ್ಲ ಸ್ವಾಭಿಮಾನಿ ಮಾತ್ರ ಅವರಿಗೆ ಇಷ್ಟ. ಇದು ನನಗೆ ಗೊತ್ತು. ಸ್ವಾತಂತ್ರ್ಯ ಬಂದು ನಲ್ವತ್ತು ವರ್ಷವಾದ ಮೇಲೆ ಗೋವಾ ಹೋರಾಟಗಾರರು, ಕರ್ನಾಟಕ ಹೋರಾಟಗಾರರು- ಎಲ್ಲ ಹುಟ್ಟಿಕೊಂಡಿದ್ದಾರೆ. ಇದು ನಾಚಿಕೆಗೇಡಿನ ವಿಷಯ. ಇವರಿಗೆಲ್ಲ ಸಂಬಳ ಸಹಾಯ ನೀಡುವವರು ಕೂಡಾ ಪಾತಕಿಗಳು. ಕ್ರಿಮಿನಲ್‌ಗಳು. ಸುಮ್ಮನೇ ಹೋಗು" ಅಂದೆ




-ಫೆಬ್ರವರಿ 23, 1992

ಪೂಜೆ ಯಾರದ್ದೋ ಫಲ ಯಾರಿಗೋ!

ದೇವಾನುದೇವತೆಗಳಿಗೆ ಇದು ಸಮೃದ್ಧಿಯ ಕಾಲ. ಹಾಳುಬಿದ್ದ ಮುರುಕು ಮಂಟಪದಲ್ಲಿರುವವರೂ ಈಗ ಗುಡಿಯ ಗಡಿಯನ್ನು ದಾಟಿ ದೇವಸ್ಥಾನ ಎಂಬ ಹೆಸರಿಗೆ ಅನುರೂಪವಾದ ಸ್ಥಳದಲ್ಲಿ ವಾಸಿಸುವಂತಾಗಿದೆ. ನಗರ ಪಟ್ಟಣಗಳ ಮಾತು ಹಾಗಿರಲಿ. ಹಳ್ಳಿಗಳಲ್ಲಿಯೂ ಇದೇ ಪರಿಸ್ಥಿತಿ. ರಾಜಕೀಯ ವ್ಯಕ್ತಿ ಹಳ್ಳಿಗೆ ಬಂದು 'ನಿಮ್ಮ ಊರಿಗೆ ಏನು ಬೇಕು' ಅನ್ನುವುದಕ್ಕಿಲ್ಲ, ಒಮ್ಮತದಿಂದ 'ಎಲ್ಲಾ ಅದೆ. ಏನೂ ಬ್ಯಾಡಿ. ನಮ್ಮ ದೇವರ ಗುಡಿಗೆ ಗೋಪುರ ಮಾಡುಸ್ಬುಡಿ ಸಾಕು' ಎನ್ನುತ್ತಾರೆ. ಊರದೇವರ ದಯದಿಂದ ಕುಳ ಅನ್ನಿಸಿಕೊಂಡ ಸರ್ಕಾರಿ ಅಧಿಕಾರಿಗಳೂ 'ತಾಯಿಯ ಕೃಪೆ ಹೀಗೆಯೇ ಇರಲಿ' ಎಂದು ಪುನರ್ ನವೀಕರಣಕ್ಕೆ ಟೊಂಕಕಟ್ಟಿ ನಿಲ್ಲುತ್ತಾರೆ. ಹೀಗಾಗಿ ಎಲ್ಲಾ

ಅಣಕ



▸▸ ಎಚ್.ಎಲ್. ಕೇಶವಮೂರ್ತಿ

ದೇವರುಗಳೂ ವೈಭವಯುತ ಮಂದಿರಗಳಲ್ಲಿ ವಿಜೃಂಭಿಸುವಂತಾಗಿದೆ.

ಈ ಗುಡಿಗಳನ್ನು ಕುರಿತಂತೆ ಡಾ. ಸಿದ್ಧಲಿಂಗಯ್ಯನವರು 'ಅವತಾರಗಳು' ಎಂಬ ಕಥಾನಕದಲ್ಲಿ ಒಂದು ಕುತೂಹಲಕರ ಪ್ರಸಂಗ ತಿಳಿಸಿದ್ದಾರೆ. ಸ್ವಲ್ಪ ಹೆಚ್ಚುಕಡಿಮೆ ಅದು ಹೀಗಿದೆ. ಒಮ್ಮೆ ಅವರು ಕ್ಷೇತ್ರ ಕಾರ್ಯದ ನಿಮಿತ್ತ ಒಂದು ಹಳ್ಳಿಗೆ ಹೋಗಿದ್ದರಂತೆ. ದಲಿತಕೇರಿಯ ಗುಡಿ ಮುಂದೆ ಜನ ಸೇರಿದ್ದರಂತೆ. ಅವರ ಉದ್ದೇಶ ಗುಡಿಗೆ ಸೂರು ಹಾಕಿಸುವುದು ಆಗಿತ್ತಂತೆ. ದಲಿತ ಕೇರಿ ಅಂದ ಮೇಲೆ ಶಿಷ್ಟ ದೇವತೆಗಳು ಕಾಲಿಡುವಂತಿಲ್ಲ, ಏನಿದ್ದರೂ ಅದು ಇತರೆ ದೇವತೆಗಳಿಗೆ ಮೀಸಲು.

ಶಿಷ್ಟ ದೇವತೆಗಳಿಗೂ ಇತರೆಯವರಿಗೂ ಒಂದು ವ್ಯತ್ಯಾಸ ಇದೆ. ಅವರಾದರೋ ಯಾರ ಮೈಮೇಲೂ ಬರುವುದಿಲ್ಲ, ತಮ್ಮ ಮನದಾಳದ ಆಸೆಗಳನ್ನು ನೇರವಾಗಿ ಹೇಳುವುದಿಲ್ಲ, ಪೂಜಾರಿಯ ಮುಖಾಂತರ ತಮ್ಮ ಇಂಗಿತ ತಿಳಿಸುತ್ತವೆ. ಆದರೆ ಇತರೆ ದೇವತೆಗಳು ಹಾಗಲ್ಲ, ಸುವರ್ಣ ನ್ಯೂಸ್ ಚಾನೆಲ್‌ನವರು ಹೇಳುವಂತೆ ನೇರ, ದಿಟ್ಟ. ತನ್ನ ಭಕ್ತರ ಮೈಮೇಲೆ ಬಂದು ತಮ್ಮ ಅಭಿಪ್ರಾಯವನ್ನು ನೇರವಾಗಿ ತಿಳಿಸುತ್ತವೆ. **Straight from horse mouth** ರೀತಿ ಇವು. ಅವತ್ತೂ ಅದೇ ನಡೀತು. ತನ್ನ ಭಕ್ತನ ಮೈಮೇಲೆ ಬಂದಿತು. ದೇವರು ಬಂದಾಗ ಹಂಗಾಡಬೇಕೋ -ಸಿನಿಮಾದಲ್ಲಿ ತೋರುಸ್ತಾರಲ್ಲ-ಹಂಗೇ ಆಡ್ದ, ನಂತರ ಕೇಳ್ದ- 'ಏನ್ ಮಾಡ್ತ ಇದೀರೋ?'

'ನಿನ್ ಗುಡೀಗೆ, ಸೂರು ಹೊದಿಸಲು ದುಡ್ಡ ಹೊಂದುಸ್ತಿದೀವಿ' ಎಂದ ಊರಿನ ಹಿರಿಯ.

ಅದನ್ನು ಕೇಳುತ್ತಿದ್ದಂತೆ ದೇವರು ಯದ್ವಾತದ್ವಾ ಕುಣಿಯಲಾರಂಭಿಸಿತು. ಕುಣಿತದ ಧಾಟಿಯಲ್ಲೇ ತಾಯಿಗೆ ಏನೋ ಅಪಚಾರ ಆಗಿದೆ ಎಂಬುದು ತಿಳಿಯುವಂತಿತ್ತು, ಹಿರಿಯ ಭಯಭಕ್ತಿಯಿಂದ 'ಮಳೆಗಾಲ ಬರೋ ಅಷ್ಟರಲ್ಲಿ ಮುಗಿಸಿಬಿಡ್ತೀವಿ ತಾಯಿ' ಎಂದ.

ತಾಯಿಗೆ ಸಮಾಧಾನ ಆಗಲಿಲ್ಲ, ಇಷ್ಟು ದಿವಸ ಮಳೆಯಲ್ಲಿ ನೆನಸಿ, ಬಿಸಿಲಿನಲ್ಲಿ ಕಾಯಿಸಿದ್ದಕ್ಕೆ ಸಿಟ್ಟು ಮಾಡಿಕೊಂಡಿರಬಹುದೆಂದು ಎಣಿಸಿದರು.

'ನಮ್ ತಪ್ಪೇನಿದ್ರೂ ಹೊಟ್ಟೆಗೆ ಹಾಕ್ಕೋ ತಾಯಿ'

ದೇವರ ಕೋಪ ಇಳಿಯಲಿಲ್ಲ,

'ನನ್ ಗುಡೀಗೆ ಸೂರು ಹೊದಿಸ್ತೀರೇನೋ.'

'ಹೊದುಸ್ತೀವಿ ತಾಯಿ.'


'ದಡ್ ನನ್ ಮಕ್ಳ ನಿಮ್ಮಲ್ಲೆಲ್ಲುಗೂ ಸೂರದ?'

ಇರಲಿಲ್ಲವೆನ್ನುವುದು ಆ ತಾಯಿಗೆ ತಿಳಿದಿತ್ತು,

'ಮೊದ್ಲು ನಿಮ್ಮ ಮನೀಗೆ ಸೂರಾಕ್ಸಿ. ಆಮೇಲೆ ನನ್ ಗುಡಿಗೆ ಸೂರಾಕ್ಸಿ' ಅಂದಳಾ ತಾಯಿ!

ಥೀ ದೇವರು ಅಂದರೆ ಹೀಗಿರಬೇಕು. ಬಡವರ ಆಧಾರಿ ಆ ತಾಯಿ. ಈ ಶಿಷ್ಟ ದೇವರುಗಳು ಇದಾವಲ್ಲ 'ತಾ ತಾ' ಅನ್ನಾವೆ ಹೊರತು 'ಕ್ವಾ ಕ್ವಾ' ಅಂದದ್ದ ಕಾಣೆ ಎಂದೆಲ್ಲ ನಾಸ್ತಿಕ ಮರಿಗಳು ಯೋಚಿಸಬಹುದು. ಅದು ಹಾಗಲ್ಲ. ಶಿಷ್ಟ ದೇವತೆಗಳೂ ಬಡವರ ಪರವೇ.. ದೇವಸ್ಥಾನದಲ್ಲಿ ಕಳ್ಳತನ ಆದಾಗ ಅದನ್ನು ತಡೆಯಬಹುದಾಗಿತ್ತು ಅಥವಾ ಕಳ್ಳನ್ನ ಹಿಡಿದುಕೊಡಬಹುದಾಗಿತ್ತು, ಆದರೂ ದಯಾಮಯಿ ಯಾವುದೇ ಕ್ರಮ ಜರುಗಿಸಲಿಲ್ಲ, ಪಾಪ ಬಡವ ಬದುಕಿಕೊಳ್ಳಲಿ ಅಂತ!

ಕೇವಲ ದೇವರ ವಾಸ್ತವ್ಯಕ್ಕೆ ಭಕ್ತರು ತಮ್ಮ ಕಾಣಿಕೆಯನ್ನು ಸೀಮಿತಗೊಳಿಸಿಲ್ಲ, ಮಂತ್ರಿಯೊಬ್ಬರು ನಲವತ್ತೋ ನಲವತ್ತೈದೋ ಕೋಟಿಯ ಚಿನ್ನದ ಕಿರೀಟವನ್ನು ತಿರುಪತಿ ತಿಮ್ಮಪ್ಪನಿಗೆ ತೊಡಿಸಿ ಧನ್ಯರಾದರಂತೆ. ಕಿರೀಟ ಸಡಿಲವಾಗಿದ್ದರೆ ತಿಮ್ಮಪ್ಪನ ಮುಖವೇ ಮುಚ್ಚಿಹೋಗುತ್ತದಲ್ಲವೆ? ಬಿಗಿ ಆಗಿದ್ದರೆ ಕುಳ್ಳಿರಿಸುವುದು ಹೇಗೆ? ಇಂತಹ ಪ್ರಶ್ನೆಗಳಿಗೆಲ್ಲ ಉತ್ತರಿಸುವ ಪ್ರಮೇಯ ಇಲ್ಲ, ಅಳತೆ ಹೇಗೋ ಸಿಕ್ಕಿತು. ತಿಮ್ಮಪ್ಪನೇ ಬಂದು ಇವರಿಗೆ ತಲೆ ಒಪ್ಪಿಸಿರಬಹುದು ಎಂದು ಹೇಳಬಹುದು ಅಷ್ಟೆ. ಮಂತ್ರಿಗಳಿಗೆ ತಿರುಪತಿ ತಿಮ್ಮಪ್ಪನ ತಲೆ ಮೇಲೆ ಕಣ್ಣುಬಿದ್ದರೆ ಯಾವುದೋ ಮಠದವರಿಗೆ ಉಡುಪಿಯ ಶ್ರೀಕೃಷ್ಣನ ಪಾದದ ಮೇಲೆ ಮರುಕ ಉಂಟಾಗಿದೆ. ಆ ದಯಾಮಯನು ಬರೀ ಕಾಲಲ್ಲಿ ನಡೆಯುವುದನ್ನು ಕಣ್ಣಿಂದ ನೋಡಲಾಗದೆ ಆ ದೇವರ ಮೃದು ಪಾದಗಳಿಗೆ ಚಿನ್ನದ ಪಾದುಕೆಗಳನ್ನು ತೊಡಿಸಿದರು. ಗಂಡು ದೇವರುಗಳಿಗೆ ಹೀಗೆ ತಮ್ಮ ಭಕ್ತಿ ಸಮರ್ಪಣೆ ಮಾಡಿದ ಭಕ್ತರು ಹೆಣ್ಣು ದೇವರುಗಳನ್ನು ಮರೆತಿಲ್ಲ. ಕೊಲ್ಲೂರು ಮೂಕಾಂಬಿಕೆಯಂತಹ ದೇವತೆಗಳಿಗೆ ಜರತಾರಿ ಸೀರೆಗಳ ಹೊಳೆಯನ್ನೇ ಹರಿಸುತ್ತಾರೆ. ಇದೇನು ದೇವತೆಗಳ ಬಗ್ಗೆ ಅಸಡ್ಡೆ? ಗಂಡು ದೇವರುಗಳಿಗೆ ಕಿರೀಟ, ಪಾದುಕೆ; ಹೆಣ್ಣು ದೇವರಿಗೆ ಬರೀ ಸೀರೆ ಅಂದರೆ ಅದು ಸಂಪ್ರದಾಯ. ಗಂಡು ಅಂದರೆ ಲೋಕ ಸುತ್ತೋನು, ಪಾದುಕೆ ಬೇಕು. ಲೋಕ ಆಳಲು ಕಿರೀಟ ಬೇಕು. ದೇವತೆಗಳಿಗೆ ಬಹಳ ಮುಖ್ಯವಾದದ್ದು ಮಾನ ಅಲವಾ. ಅದಕ್ಕೇ ಅದನ್ನು ಮುಚ್ಚಿಕೊಳ್ಳಲಿ ಅಂತಾ ಸೀರೆ ಕೊಡ್ತಾರೆ ಭಕ್ತರು!



ವಾಸಕ್ಕೆ ದೇವಸ್ಥಾನ ಆಯಿತು. ಉಡಕ್ಕೆ ಬಟ್ಟೆ ತೊಡಲು ಕಿರೀಟ ಎಲ್ಲ ಆಯಿತು. ಇನ್ನು ಉಳಿದಿರುವುದೊಂದೇ ಪ್ರದರ್ಶನ. ಗೊತ್ತೂ ಗೊತ್ತಿಲ್ಲದ ಹಾಗೆ ನಡೀತಿದ್ದ ಉತ್ಸವಗಳು ಈಗ ಭರ್ಜರಿ ಕಳೆಯಿಂದ ತುಂಬಿವೆ. ಎಷ್ಟೊಂದು ವೈಭವೋಪೇತವಾಗಿರುತ್ತವೆ ಇವು ಅಂದರೆ ದೇವಾನುದೇವತೆಗಳು ಆ ಸ್ವರ್ಗಕ್ಕೆ ಥೂ ಅಂತ ಕ್ಯಾಕರಿಸಿ ಉಗಿದು ಭಾರತಖಂಡದಲ್ಲೇ ಕಾಯಂ ಆಗಿ ನೆಲೆಸಿಬಿಡಬೇಕು ಹಾಗಿರುತ್ತೆ. ಈ ದೇವರುಗಳೆಲ್ಲ ಭಕ್ತರ ಬಳಿಗೆ ನಿಯೋಗ 'ಹೋಗಿ ದೇವಸ್ಥಾನ ಕಟ್ಟಿಸಿ, ದೇವಸ್ಥಾನ ಕಟ್ಟಿಸಿ' ಎಂದು ಒತ್ತಾಯಿಸಿದರೂ ಒತ್ತಾಯಿಸಬಹುದು. ಅದ್ದೂರಿ ದೇವಾಲಯಗಳು ಏಳುತ್ತಿರುವ ಭರಾಟೆ ನೋಡಿದರೆ ಹಾಗೇ ಇರಬಹುದು ಅನ್ನಿಸುತ್ತೆ!

ಉತ್ಸವ ಅಂದಮೇಲೆ ಮೆರವಣಿಗೆ ಇರಬೇಕು. ಶ್ರೀಕೃಷ್ಣ ಉಡುಪಿಯ ರಥ ಬೀದಿ, ದೇವಸ್ಥಾನದ ಒಳಗೆ ಸಂಚಾರ ಮಾಡಲು ಅದು ಯಾವುದೋ ಮಠದವರು ಚಿನ್ನದ ರಥವನ್ನೇ ಮಾಡಿಸಿದ್ದಾರೆ ಅನ್ನೋ ಸುದ್ದಿ ಇದೆ. ರೋಗಿಗಳಿಗೆ **wheel chair** ಇದ್ದ ಹಾಗೇನೆ ಈ ಕೃಷ್ಣ ಪರಮಾತ್ಮನಿಗೆ **golden chair!** ಇದೂ ಓಲ್ಡ್ ಫ್ಯಾಷನ್ ಆಯ್ತೇನೋ ಅನ್ನಿಸುತ್ತೆ, ಅಡ್ವಾಣಿ ರಥಯಾತ್ರೆ ಮಾಡಿದ್ದರಲ್ಲ... ಅದು ಯಾವುದರಲ್ಲಿ... ಟೊಯೋಟ ಕಾರ್ ರಥದಲ್ಲಿ! ಹಾಗೇನೆ ಈ ಮೆರವಣಿಗೆ ಹೋಗೋ ದೇವರುಗಳಿಗೆಲ್ಲ..... ಪಲ್ಲಕ್ಕಿ ಬದಲಾಗಿ ಲೇಟೆಸ್ಟ್ ಮಾಡೆಲ್ ಕಾರ್ ಬಳಸಿ..... ಕಾರ್ ಪಲ್ಲಕ್ಕಿ..... ಅನ್ನಬಹುದಲ್ಲಾ ಅನ್ನುವುದು ಸಲಹೆ ಅಷ್ಟೇ.

ಇನ್ನು ಆರಾಧಕರ ವಿಷಯಕ್ಕೆ ಬರೋಣವಂತೆ. ಇದಕ್ಕೆ ಬರುವುದಕ್ಕೇ ಹೀಗೆಲ್ಲ ಕೊಂಕಣ ಸುತ್ತಬೇಕಾಯಿತು. ಕೋಮು ಸೌಹಾರ್ದ ವೇದಿಕೆ ಅಧ್ಯಯನ ಶಿಬಿರ ಏರ್ಪಡಿಸಿತ್ತು, ಅಲ್ಲಿ ಉದ್ಭವಿಸಿದ ಪ್ರಶ್ನೆ ಯಾರು ಹೆಚ್ಚು ದೈವಾರಾಧಕರು ಅನ್ನೋದು. ಜಾತ್ಯತೀತ ಜನತಾದಳ ತನ್ನ ಕಚೇರಿಯಲ್ಲಿ ಹೋಮ ಮಾಡಿತು. ಭಾರತೀಯ ಜನತಾ ಪಕ್ಷ ಅದನ್ನು ವಿಧಾನಸೌಧಕ್ಕೆ ತಂದಿತು. ಎರಡೂ ಪಕ್ಷದವರ ಹೋಮವನ್ನು ಸ್ವೀಕರಿಸಿದ ಆ ಭಗವಂತ. ಈಗ ನ್ಯಾಯ ನಿಷ್ಠುರಿ ಯಾರ ಪರ ಇರಬೇಕು? ದೇವರು ಸಂದಿಗ್ಧಕ್ಕೆ ಬಿದ್ದ. ಪುರೋಹಿತರ ಮನಸ್ಸನ್ನು ಅರಿಯಲು ಅವನು ಭಾಜಪ ಪುರೋಹಿತರ ಮನಸ್ಸು ಹೊಕ್ಕ; ಅವನು ಹೋಮ ಮಾಡಿದ್ದೂ ತನಗೆ, ಅರ್ಪಿಸಿದ್ದೂ ತನಗೆ. ಅಂದರೆ ಹಂಡ್ರೆಡ್ ಪರ್ಸೆಂಟ್ ಆಯಿತು. ಜಾತ್ಯತೀತ ಜನತಾದಳದ ಪುರೋಹಿತರ ಮನಸ್ಸು ಸೇರಿದ. ಅವನು ಜಾತ್ಯತೀತ ಜನತಾದಳದ ಪರವಾಗಿ ಹೋಮ ಮಾಡಿದ... ಫಲ..... ಭಾಜಪಗೆ ಸೇರಲಿ ಅನ್ನುತ್ತಿದ್ದಾನೆ! ●

ತರ್ಕ ಶಕ್ತಿ ಕಳೆದುಕೊಂಡು ವಾನರನಾಗುತ್ತಿರುವ ಮಾನವ

ಒಂದು ಪತ್ರ

ಮಲ್ಲಿಯವರು ಬರೆದ ಕ್ರಿಕೆಟಿಗರ 'ಮೆಂಟಲ್ ಫಿಟ್‌ನೆಸ್' ಸ್ವಾರಸ್ಯಕರವಾಗಿತ್ತು. (ಲಂಕೇಶ್ 30-12-2009) ಮೊದಲು ರಾಜಕಾರಣಿಗಳು ಹಾಗೂ ಚಲನಚಿತ್ರ ರಂಗದವರು ಮಾತ್ರ 'ಮೌಢ್ಯದ ರಾಯಭಾರಿಗಳಾಗಿದ್ದರು'. ಈಗ ಕ್ರಿಕೆಟಿಗರೂ ಮೂಢನಂಬಿಕೆಗಳ "ಬ್ರಾಂಡ್ ಅಂಬಾಸಿಡರ್" ಗಳಾಗಿದ್ದಾರೆ. ನಾವು ಚಿಕ್ಕವರಿರುವಾಗ ನಮ್ಮ ಹಿರಿಯರು ಹಾಗೂ ಶಾಲಾ ಮೇಷ್ಟ್ರು ಹೇಳುತ್ತಿದ್ದರು- "ಸಮಾಜದಲ್ಲಿ ಸಾಕ್ಷರತೆ ಹೆಚ್ಚಿದಂತೆಲ್ಲಾ ಅಂಧವಿಶ್ವಾಸಗಳು ಕಡಿಮೆಯಾಗುತ್ತವೆ ಹಾಗೂ ನಾವು 21ನೇ ಶತಮಾನ ಪ್ರವೇಶಿಸುವ ವೇಳೆಗೆ ಸಂಪೂರ್ಣವಾಗಿ ಮೌಢ್ಯ-ಮುಕ್ತರಾಗಿರುತ್ತೇವೆ" ಎಂದು ಆದರೆ ನಾಲ್ಕು ದಶಕಗಳ ನಂತರ ಈಗ ನೋಡಿದರೆ ಅದು ಉಲ್ಟಾ ಆಗಿದೆ. ನಿರಕ್ಷರಿಗಳಿಗಿಂತ/ ಹಳ್ಳಿಗರಿಗಿಂತ ಈಗ ವಿದ್ಯಾವಂತ ಪಟ್ಟಣಿಗರಲ್ಲೇ ಮೌಢ್ಯಗಳು ಹೆಚ್ಚಾಗಿವೆ. ನಮ್ಮ ದೇಶದಲ್ಲಿದ್ದ ಮೂಲ ಅಂಧವಿಶ್ವಾಸಗಳು ಸಾಲದೆಂಬಂತೆ, ಈಗ ನಾವು ವಿದೇಶದಿಂದಲೂ ಮೂಢನಂಬಿಕೆಗಳನ್ನು ಆಮದು ಮಾಡಿಕೊಂಡಿದ್ದೇವೆ. ನ್ಯೂಮರಾಲಾಜಿ, ಫೆಂಗ್‌ಶ್ವೈ, ಫೌಸಿಂಗ್, ಟಾರೆಟ್-ಕಾರ್ಡ್‌ರೀಡಿಂಗ್, ರೇಖಿ, ಸ್ಪಿರಿಟ್-ಕಾಲಿಂಗ್ ಇವೆಲ್ಲಾ ವಿದೇಶಿ ಮೌಢ್ಯಗಳು ನಮ್ಮಲ್ಲೀಗ ಪಸರಿಸಿಕೊಂಡಿರುವುದು ಮಾತ್ರವಲ್ಲ, ಯಾವಾಗಲೂ ಸ್ವದೇಶಿ ಮಂತ್ರ ಜಪಿಸುವ ಹಿಂದೂತ್ವವಾದಿಗಳೂ ಈ ವಿದೇಶಿ ಮೌಢ್ಯಗಳಿಗೆ ಬಲಿಯಾಗಿದ್ದಾರೆ (ನ್ಯೂಮರಾಲಾಜಿ ನಂಬುವ ನಮ್ಮ ಯಡಿಯೂರಪ್ಪ ಈಗ 'ಯಡ್ಯೂರಪ್ಪ' ಎಂದು ತನ್ನ ಹೆಸರಿನ ಇಂಗ್ಲಿಷ್ ಸ್ಪೆಲ್ಲಿಂಗ್ ಬದಲಾಯಿಸಲಿಲ್ಲವೇ!)

ದೊಡ್ಡ-ದೊಡ್ಡ ವಿಜ್ಞಾನಿಗಳಿಂದಲೇ ತುಂಬಿರುವ ಇಸ್ರೋದಲ್ಲಿ ಸಹ ಧಾರ್ಮಿಕ ಮೌಢ್ಯ ಈಗ ಎಷ್ಟು ಹರಡಿಯೆಂದರೆ ಉಪಗ್ರಹವನ್ನು ಹಾರಿಬಿಡುವ ಮೊದಲು ಅದರ ಸಣ್ಣ ಪ್ರತಿಕೃತಿ ತಯಾರಿಸಿ ಅದನ್ನು ಎಲ್ಲಾ ಪ್ರಸಿದ್ಧ ದೇವಸ್ಥಾನಗಳಿಗೆ ಕೊಂಡೊಯ್ದು ಪೂಜೆ ಮಾಡಿಸಿದ್ದಾರೆ. ಮೂಲ ಉಪಗ್ರಹಕ್ಕೆ ತೆಂಗಿನಕಾಯಿ ಒಡೆದು ಆರತಿ ಬೆಳಗಿದ್ದಾರೆ. ಅದನ್ನು ಹಾರಿಬಿಡುವ ಮುನ್ನ ಜ್ಯೋತಿಷಿಗಳಲ್ಲಿ ರಾಹುಕಾಲ-ಗುಳಿಕಕಾಲ, ಶುಭದಿನ, ಶುಭಗಳಿಗೆ ಕೇಳಿದ್ದಾರೆ. ಕಳೆದ ಅಕ್ಟೋಬರ್‌ನಲ್ಲಿ ಹಾರಿಸಿದ ಓಷನ್‌ಸ್ಯಾಟ್ ಉಪಗ್ರಹದ ಸರಣಿ ಸಂಖ್ಯೆ 13 ಆಗಿದ್ದು, ಅದು ಅಶುಭ ಸಂಖ್ಯೆ ಎಂದು ಆ ಉಪಗ್ರಹಕ್ಕೆ 14ನೇ ನಂಬರ್ ಕೊಟ್ಟಿದ್ದಾರೆ. ಕಳೆದ ತಿಂಗಳು ನೇಮಕವಾದ ಇಸ್ರೋದ ಹೊಸ ಅಧ್ಯಕ್ಷರು ಅಧಿಕಾರ ವಹಿಸಿಕೊಳ್ಳುವುದಕ್ಕೆ ಮುನ್ನ ಗುರುವಾಯೂರಿಗೆ ಹೋಗಿ ತನ್ನ ತುಲಾಭಾರ ಮಾಡಿಸಿಕೊಂಡು ಪತ್ರಿಕೆಗಳಿಗೆ ಹಾಗೇ ಪೋಜ್ ಕೊಟ್ಟಿದ್ದಾರೆ. ಭಾರತೀಯ ಘನ ವಿಜ್ಞಾನಿಗಳೇ ಹೀಗಾದ ಮೇಲೆ ಸಾಮಾನ್ಯರ ಸ್ಥಿತಿಯೇನು!

ಉನ್ನತ ವಿದ್ಯಾವಂತರಲ್ಲೂ ಈಗ ಮೌಢ್ಯ ಎಷ್ಟು ಗಾಢವಾಗಿದೆಯೆಂದರೆ **FRCS** ಡಾಕ್ಟರ್‌ಗಳೂ ಆಪರೇಷನ್‌ಗೆ ಮುನ್ನ ರಾಹುಕಾಲ-ಗುಳಿಕಕಾಲ ನೋಡುತ್ತಾರೆ. ವಿದೇಶದಲ್ಲಿ ಕಲಿತ ಇಂಜಿನಿಯರ್‌ನೂ ಯಂತ್ರ ಖರೀದಿಸುವ ಮುನ್ನ ಜ್ಯೋತಿಷಿಯಲ್ಲಿ ಕಣಿ ಕೇಳುತ್ತಾನೆ. ಚಾರ್ಟೆರ್ಡ್ ಅಕೌಂಟೆಂಟ್ ಪ್ರತಿಯೊಂದಕ್ಕೂ ನ್ಯೂಮರಾಲಾಜಿಸ್ಟ್‌ಗಳನ್ನು ಕನ್ಸಲ್ಟ್ ಮಾಡುತ್ತಾನೆ. ವಾಸ್ತು-ವಾಸ್ತು ಎಂದು ಬಡಬಡಿಸುವ ಆರ್ಕಿಟೆಕ್ಟ್ ನಿಮ್ಮ ಮನೆಯ ನಕ್ಷೆಯನ್ನು ಅಧ್ವಾನಗೊಳಿಸಿ ನಿಮಗೆ ಲಕ್ಷಾಂತರ ನಷ್ಟ ಮಾಡುತ್ತಾನೆ. ವಾಸ್ತು ಪಂಡಿತನನ್ನು ಕೇಳಿ ತನ್ನ ಆಫೀಸ್‌ನ ಕ್ಯಾಬಿನ್‌ನ ದಿಕ್ಕು ಬದಲಾಯಿಸುವ ಬ್ಯಾಂಕ್ ಮ್ಯಾನೇಜರ್ ಇದ್ದಾನೆ. ಕಂಪ್ಯೂಟರನ್ನು ಯಾವ ದಿಕ್ಕಿಗೆ ಇಡಬೇಕು ಎಂದು ಭಟ್ಟರಿಗೆ ಕೇಳುವ ಸಾಫ್ಟ್‌ವೇರ್ ಇಂಜಿನಿಯರ್ ಇದ್ದಾನೆ. ಕೋರ್ಟ್‌ನಲ್ಲಿ ವಿಪರೀತ ಪ್ರಶ್ನೆ ಕೇಳುತ್ತಾ ವಿಪರೀತವಾದ -ವಿತಂಡವಾದ ಮಾಡುವ ಪ್ರಚಂಡ ವಕೀಲನೂ ಪುರೋಹಿತರು ಹೇಳಿದ ಮೂರ್ಖ ಸಲಹೆಗಳನ್ನು ಮಾತ್ರ ಏನೊಂದೂ ಪ್ರಶ್ನೆಯಿಲ್ಲದೇ ಪಾಲಿಸುತ್ತಾನೆ.

ಬಾಲಿವುಡ್ ನಟ-ನಟಿಯರು, ರಾಜಕಾರಣಿಗಳು ನ್ಯೂಮರಾಲಾಜಿಸ್ಟ್ ಹಾಗೂ ಟಾರೆಟ್ ಕಾರ್ಡ್ ರೀಡರ್‌ಗಳ ಸಲಹೆಯಂತೆ ತಮ್ಮ ಹೆಸರಿನ ಇಂಗ್ಲಿಷ್ ಸ್ಪೆಲ್ಲಿಂಗ್ ಬದಲಾಯಿಸಿ ತಮ್ಮ ಹೆಸರುಗಳನ್ನೇ ಅಧ್ವಾನ ಮಾಡಿಕೊಳ್ಳುತ್ತಾರೆ. (ಇವರ ಪ್ರಕಾರ ಅಚ್ಚ ಭಾರತೀಯ ಅದೃಷ್ಟದೇವತೆಗೂ ಇಂಗ್ಲಿಷ್ ಅಕ್ಷರ ಬಿಟ್ಟು ಬೇರಾವ ಭಾರತೀಯ ಭಾಷೆಯೂ ಓದಲು ಬರುವುದಿಲ್ಲ ಪಾಪ! ಕಾರಣ ಇಂಗ್ಲಿಷ್ ಅಕ್ಷರಗಳ ಜಗ್ಲರಿ ಸಾಧ್ಯ ಆದರೆ ಅತಿ ನಿಗದಿತ ಉಚ್ಚಾರಣೆ ಇರುವ ಭಾರತೀಯ ಭಾಷೆಗಳಲ್ಲಿ ಅಕ್ಷರಗಳ ಜಗ್ಲರಿ ಸಾಧ್ಯವಿಲ್ಲ ತಾನೇ? ಅದಕ್ಕೆ ನ್ಯೂಮರಾಲಾಜಿಸ್ಟ್‌ಗಳಿಗೆ ಇಂಗ್ಲಿಷೇ ಬೇಕು)

ವಾನರರ ಒಂದು ಪ್ರಭೇದದಲ್ಲಿ ಯಾವುದೋ ಪ್ರಾಕೃತಿಕ ಕಾರಣದಿಂದ ಬೆಳೆದ 'ತರ್ಕ' ಶಕ್ತಿಯ ಪರಿಣಾಮವಾಗಿ ವಾನರರಿಂದ ಮಾನವನಾಗಿ ಕಂಪ್ಯೂಟರ್ ಯುಗಕ್ಕೆ ಮುಟ್ಟುವಂತಾಯಿತು. ಇಂತಹ ತರ್ಕ ಶಕ್ತಿ ಬೆಳೆಯದ ಇತರ ವಾನರ ಜಾತಿಗಳು ಪ್ರಾಣಿ ಲೋಕದಲ್ಲೇ ಉಳಿದವು. ವಿಚಿತ್ರವೆಂದರೆ ಯಾವ ತರ್ಕ ಶಕ್ತಿಯ ಬಲದಿಂದ 'ಗುಹಾವಾಸಿಯಾಗಿದ್ದ' ಮಾನವ ಈಗ 'ಚಂದ್ರಾಲೋಕವಾಸಿ'ಯಾಗಲು ಹೊರಟಿರುವನೋ, ಅದೇ ಆಧುನಿಕ ಮಾನವ ದೇವರು-ಅದೃಷ್ಟದ ವಿಷಯ ಬಂದಾಗ ಮಾತ್ರ ತನ್ನ ಈ ಮೂಲ ತರ್ಕ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡು ಸಾವಿರಾರು ವರ್ಷಗಳ ಹಿಂದಿನ ಆದಿಮಾನವನಂತೆ ವರ್ತಿಸುತ್ತಾನೆ

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

2009: ಸೋಲುಗಳಲ್ಲಿ ಸೊರಗಿದ ಸಿನಿಮಾರಂಗ

ಬರೋಬ್ಬರಿ ನೂರಿಪ್ಪತ್ತು ಕನ್ನಡ ಚಿತ್ರಗಳು ಈ ವರ್ಷ ತೆರೆ ಕಂಡಿವೆ. ...ರೆ ಗುಣಾತ್ಮಕ ದೃಷ್ಟಿಯಿಂದ, ಬಾಕ್ಸಾಫೀಸ್ ಕಲೆಕ್ಷನ್ ದೃಷ್ಟಿಯಿಂದ ...ವಾ ಕ್ರಿಯಾಶೀಲತೆಯ ದೃಷ್ಟಿಯಿಂದ ನೋಡಿದರೆ ಈ ನೂರಿಪ್ಪತ್ತರಲ್ಲಿ ...ದೇ ಒಂದು ಚಿತ್ರವೂ ಕೈಗೆ ಸಿಗುವುದಿಲ್ಲ. ಅಂದರೆ 2009ರಲ್ಲಿ ಕನ್ನಡ ...ರಂಗದ ಸಾಧನೆ ಶೂನ್ಯ ಎಂದೇ ಹೇಳಬೇಕಾಗುತ್ತದೆ.









ಕಳೆದ ವರ್ಷ ಇಡೀ ಉದ್ಯಮ 2009 ಅನ್ನು ಅತ್ಯಂತ ಆಸೆಗಣ್ಣಿನಿಂದ ...ರು ನೋಡುತ್ತಿತ್ತು. 2009 ಅದೃಷ್ಟದ ವರ್ಷವಾಗಲಿದೆ, ತಮ್ಮ ...ಗಳೆಲ್ಲಾ ಸೂಪರ್‌ಹಿಟ್ ಆಗಿ ಉದ್ಯಮ ಚೇತರಿಸಲಿದೆ ಎಂದು ...ರೂ ಭವಿಷ್ಯ ನುಡಿದಿದ್ದರು. ಇದಕ್ಕೆ ಕಾರಣ ಉದ್ಯಮದವರ ...ಢನಂಬಿಕೆ. ಸಾಧಾರಣವಾಗಿ ಈ ಉದ್ಯಮದಲ್ಲಿ ಬಹುತೇಕ ಎಲ್ಲರೂ ... ಅದೃಷ್ಟದ ಸಂಖ್ಯೆಯೆಂದೇ ನಂಬಿರುವವರು. ಈ ಕಾರಣಕ್ಕೆ ...09 ನಮ್ಮೆಲ್ಲರಿಗೂ ಶುಭ ತರಲಿದೆ ಎಂಬುದು ಅವರ ಲೆಕ್ಕಾಚಾರ ...ಗಿತ್ತು. ಆದರೆ ಈಗ ಕನ್ನಡ ಚಿತ್ರರಂಗದ 'ಕ್ರಿಯಾಶೀಲ' ಮೂಢ ...ಬಿಕೆಗೆ 2009 ಮಂಗಳಾರತಿ ಎತ್ತಿದೆ.

ಇತ್ತೀಚಿನ ಕೆಲವು ವರ್ಷಗಳಲ್ಲಿ ಒಬ್ಬ ನಟ ಅಥವಾ ನಟಿ ...ರ್ಷವಿಡೀ ವಿಜೃಂಭಿಸಿದ್ದನ್ನು ನೋಡಿದ್ದೇವೆ. ಉದಾಹರಣೆಗೆ ಎರಡು ...ರ್ಷಗಳ ಹಿಂದೆ 'ಮುಂಗಾರು ಮಳೆ'ಯಿಂದಾಗಿ ಗಣೇಶ್ ಮತ್ತು ...ಜಾ ಗಾಂಧಿ ತಾರಾವರ್ಚಸ್ಸು ಪಡೆದು ಮೆರೆದಿದ್ದರು. ಹಲವೊಮ್ಮೆ ...ಯಕ-ನಾಯಕಿ ಮೆರೆಯದಿದ್ದಾಗ ಯಾವುದೋ ಒಬ್ಬ ನಿರ್ದೇಶಕ, ...ಗೀತ ನಿರ್ದೇಶಕ, ಗೀತರಚನಾಕಾರ ಹೀಗೆ ತಂತ್ರಜ್ಞರೂ ಜನಪ್ರಿಯತೆ ...ಪಡೆದದ್ದು ಉಂಟು. ಇದಕ್ಕೆ ಯೋಗರಾಜ್ ಭಟ್, ಸೂರಿ, ಪ್ರೇಮ್, ...ಸೋಮೂರ್ತಿ, ಜಯಂತ್ ಕಾಯ್ಕಿಣಿ, ಸೋನು ನಿಗಮ್, ಕುಣಾಲ್ ...ಗಾಂಜವಾಲಗಳೇ ಉದಾಹರಣೆಗಳು.

ಆದರೆ ಕನ್ನಡ ಚಿತ್ರರಂಗದ ಅಮೃತ ಮಹೋತ್ಸವವನ್ನು ...ಸ್ಫೂರ್ತಿಯಾಗಿ ನಡೆಸಿದ ವರ್ಷವೇ ಯಾವೊಬ್ಬ ನರಪಿಳ್ಳೆಯೂ ಕನ್ನಡ ...ತ್ರರಂಗದಲ್ಲಿ ಕಣ್ಣಿಗೆ ಕಾಣುವಷ್ಟು ವಿಜೃಂಭಿಸಲಿಲ್ಲ. ಇದೆಲ್ಲ ನಿಜಕ್ಕೂ ...ತ್ರರಂಗ ದಿನದಿಂದ ದಿನಕ್ಕೆ ಅಧೋಗತಿಯತ್ತ ಸಾಗುತ್ತಿರುವ ...ಮುನ್ಸೂಚನೆಯಂತೆ ಕಾಣಿಸುತ್ತಿದೆ.

...ವರ್ಷದಾರಂಭದಲ್ಲಿ ಭಾರೀ ನಿರೀಕ್ಷೆ ಮೂಡಿಸಿದ್ದ ಗೋಲ್ಡನ್ ...ಸ್ಟಾರ್ ಗಣೇಶ್ ನಟಿಸಿದ್ದ 'ಸರ್ಕಸ್' ಹೇಳಹೆಸರಿಲ್ಲದಂತೆ ಕುಸಿದು ...ಹೋಯಿತು. ಅನಂತರ ಗಣೇಶ್ ನಾಪತ್ತೆಯಾಗಿದ್ದರು. ಈಗ ವರ್ಷದ ...ಕೊನೆಯಲ್ಲಿ ಬಂದ 'ಮಳೆಯಲಿ ಜೊತೆಯಲಿ' ಚಿತ್ರ ಕೂಡ ಅಷ್ಟಕ್ಕಷ್ಟೇ ...ಓಡುತ್ತಿದೆ. ಗಣೇಶ್‌ನಂತಹ ಜನಪ್ರಿಯ ನಟನೇ ಈ ವರ್ಷ ಎರಡೇ ...ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ ಅಂದರೆ ಚಿತ್ರರಂಗದ ಪ್ರಸ್ತುತ ದುಸ್ಥಿತಿಯನ್ನು ...ನೀವೇ ಲೆಕ್ಕಹಾಕಿ.

...ಪವರ್ ಸ್ಟಾರ್ ಬಿರುದಾಂಕಿತ ಪುನೀತ್ ಕಥೆಯೂ ಗಣೇಶನ ...ಗಿಂತ ಭಿನ್ನವಾಗಿಲ್ಲ. ಪುನೀತ್ ಯಾವಾಗಲೂ ಬಾಕ್ಸಾಫೀಸ್‌ನಲ್ಲಿ ...ದುಂಭೇರಿ ಬಾರಿಸುವ ನಟ. ಆದರೆ ಈ ಬಾರಿ ಸಾಕಷ್ಟು ಹೈಪ್ ...ಹುಟ್ಟಿಸಿದ್ದ 'ರಾಜ್' ಬಾಕ್ಸಾಫೀಸ್‌ನಲ್ಲಿ ಬಿದ್ದುಹೋಯಿತು. ಅಲ್ಲಿಗೆ ...ಪುನೀತ್‌ಗೂ ಪವರಿಲ್ಲ, ಸ್ಟಾರ್‌ಗಿರಿ ಇಲ್ಲ ಎಂಬಂತಾಗಿದೆ. ಇನ್ನು ...ಕ್ಷನ್ ಕಿಂಗ್ ಎಂದೆನಿಸಿಕೊಂಡಿರುವ ಛಾಲೆಂಜಿಂಗ್ ಸ್ಟಾರ್ ದರ್ಶನ್ ...ರಿಗೂ 2009 ಅದೃಷ್ಟದ ವರ್ಷವಾಗಲಿಲ್ಲ. ದರ್ಶನ್ ನಟಿಸಿದ ...ಯೋಧ' ಮತ್ತು 'ಅಭಯ್' ಹಂಚಿಕೆದಾರರಿಗೆ ಹಣದ ಥೈಲಿ ...ತುಂಬಿಕೊಡಲಿಲ್ಲ. ಆದ್ದರಿಂದ ಇಲ್ಲಿಯತನಕ ಗೆಲ್ಲುವ ಕುದುರೆ ...ಎನಿಸಿಕೊಂಡಿದ್ದ ದರ್ಶನ್ ಮೇಲೆ ಬಾಜಿ ಕಟ್ಟಲೂ ನಿರ್ಮಾಪಕರು ...ಹಿಂದೆಮುಂದೆ ನೋಡುವಂತಾಗಿದೆ.

...ನಾಯಕರ ಕಥೆ ಹೀಗಾದರೆ ನಾಯಕರನ್ನು ಸೃಷ್ಟಿಸುವ ನಿರ್ದೇಶಕರುಗಳ ... ಇನ್ನೂ ಚಿಂತಾಜನಕವಾಗಿದೆ. ನಿರ್ದೇಶಕ ಯೋಗರಾಜ್ ಭಟ್ ಈ ... ಪುನೀತ್ ರಾಜ್‌ಕುಮಾರ್ ಚಿತ್ರ 'ಲಗೋರಿ'ಯನ್ನು ಆರಂಭಿಸಬೇಕಿತ್ತು. ...ರೆ ಅದು ಆರಂಭವಾಗುವ ಮುನ್ನವೇ ಡ್ರಾಪ್ ಆಯಿತು. ಆಗ ಭಟ್ಟರು ...ಹಿಡಿದದ್ದು ದಿಗಂತ್ ಎಂಬ ಹೊಸ ನಟನನ್ನು. ದಿಗಂತ್‌ನ ಹಾಕಿಕೊಂಡು ...ಶುರು ಮಾಡಿದ 'ಮನಸಾರೆ' ಈ ವರ್ಷದ ಹಿಟ್ ಚಿತ್ರಗಳಲ್ಲೊಂದು. ...ರೆ 'ಮುಂಗಾರು ಮಳೆ'ಯಲ್ಲಿ ಕಂಡುಬಂದ ಭಟ್ಟರ ಕೈಚಳಕ ಅಥವಾ ...ಟ್ಟಿ 'ಮನಸಾರೆ'ಯಲ್ಲಿ ಕಾಣಿಸಲಿಲ್ಲ. ಹೀಗಾಗಿ ಚಿತ್ರ ಗೆದ್ದಿದ್ದರೂ ಅದರಿಂದಾಗಿ ...ಟ್ಟರ ವರ್ಚಸ್ಸೇನೂ ಹೆಚ್ಚಾಗಲಿಲ್ಲ.

...ಇನ್ನು ಪುಟಗಟ್ಟಲೆ ಪುಕ್ಕಟೆ ಪ್ರಚಾರ ಪಡೆವ ಪ್ರೇಮ್ ಎಂಬ ನಿರ್ದೇಶಕನ ...ಕಥೆಯೂ ಅದೇ ಆಯಿತು. ಪ್ರೇಮ್ ಮತ್ತು ಪುನೀತ್ ಸಂಗಮದ 'ರಾಜ್' ಚಿತ್ರ ಬಾಕ್ಸಾಫೀಸ್ ದಾಖಲೆಗಳನ್ನೆಲ್ಲಾ ಪುಡಿಪುಡಿ ಮಾಡುತ್ತದೆ ಎಂಬ ಭಾರೀ ನಿರೀಕ್ಷೆ ಹುಟ್ಟಿಸಲಾಗಿತ್ತು. ಆದರೆ 'ರಾಜ್' ಚಿತ್ರದ ಮುಖಾಂತರ ಪ್ರೇಮ್ 'ಒರ್ವ ಸುದ್ದಿ ಸುಬ್ಬಣ್ಣ' ಎಂಬುದು ಮಾತ್ರ ಮತ್ತೆ ಸಾಬೀತಾಯಿತು. ಒಂದಷ್ಟು ದಿನ ಅದು ಹೇಗೋ ತೆವಳಿದ 'ರಾಜ್' ಅತ್ತ ಪುನೀತ್ ಅಭಿಮಾನಿಗಳಿಗೂ, ಇತ್ತ ವಿಮರ್ಶಕರಿಗೂ ಇಷ್ಟವಾಗದ ಚಿತ್ರವಾಗಿ 'ದಾಖಲೆ' ನಿರ್ಮಿಸಿತು!

ಪ್ರೇಮ್‌ನ ಹಾವಭಾವ, ಮಾತಿನವರಸೆ, ಡ್ರೆಸ್‌ಗಳನ್ನು ಅನುಕರಿಸುವ ಚಂದ್ರು ಎಂಬ ನಿರ್ದೇಶಕನ ಕಥೆಯೂ ಪ್ರೇಮ್ ತರಹದ್ದೇ ಆಯಿತು. ಕಳೆದ ವರ್ಷ 'ತಾಜ್‌ಮಹಲ್' ಎಂಬ ಮಾಮೂಲಿ ಚಿತ್ರ ನಿರ್ದೇಶಿಸಿದ್ದ ಚಂದ್ರು ತನಗೆ ತಾನೇ 'ಧೀಮಂತ ಚಿತ್ರ ನಿರ್ದೇಶಕ' ಎಂಬ ಬಿರುದನ್ನು ಕೊಟ್ಟುಕೊಂಡಿದ್ದರು. ಈ ಬಾರಿ ಚಂದ್ರು 'ಪ್ರೇಮ್ ಕಹಾನಿ' ಮುಖಾಂತರ ಗಾಂಧಿನಗರದಲ್ಲಿ 'ಪಲ್ಟಿ ಹೊಡೆದು ಬಿದ್ದಿದ್ದಾರೆ. ಅಲ್ಲಿಗೆ ಚಂದ್ರು ಕೂಡಾ ಏಕ್ ದಿನ್ ಕಾ ಸುಲ್ತಾನ್ ಎನಿಸಿಕೊಂಡರು. 'ಮುಸ್ಸಂಜೆ ಮಹೇಶ್' ಎಂದು ಒಂದೇ ಚಿತ್ರಕ್ಕೆ 'ಗಾಂಧಿನಗರದಲ್ಲಿ 'ಜಗದ್ವಿಖ್ಯಾತಿ'' ಗಳಿಸಿದ ಮಹೇಶ್ ಕೂಡಾ ತನ್ನ ಎರಡನೇ ಪ್ರಯತ್ನವಾದ 'ಇನಿಯಾ' ಮುಖಾಂತರ ಸಂಪೂರ್ಣ ಸೋಲುಕಂಡರು. ಕಳೆದ ವರ್ಷ 'ಸತ್ಯ ಇನ್ ಲವ್' ಚಿತ್ರದ ಮೂಲಕ ಖ್ಯಾತಿ ಗಳಿಸಿದ ರಾಘವ ಲೋಕಿ ಕೂಡಾ ತನ್ನ ಎರಡನೇ ಚಿತ್ರ 'ಗಿಲ್ಲಿ'ಯಲ್ಲಿ ಸೋತು ಈಗ ಗಲ್ಲಿ ಸೇರಿದ್ದಾರೆ.

ಇದ್ದುದರಲ್ಲಿ ಸೂರಿ ಮಾತ್ರ ಸ್ವಲ್ಪಮಟ್ಟಿಗೆ ಪ್ರೇಕ್ಷಕರ ನಿರೀಕ್ಷೆಗೆ ತಕ್ಕಂತೆ 'ಜಂಗ್ಲಿ' ಚಿತ್ರವನ್ನು ನಿರ್ದೇಶಿಸಿ ತನ್ನ 'ನಾಮಬಲ'ವನ್ನು ಉಳಿಸಿಕೊಂಡಿದ್ದಾರೆ. ಆದರೆ ಗ್ಲೋಬಲ್ ಖ್ಯಾತಿಯ ನಾಗತಿಹಳ್ಳಿ ಚಂದ್ರಶೇಖರ್ 'ಒಲವೇ ಜೀವನ ಲೆಕ್ಕಾಚಾರ' ಚಿತ್ರದ ಮುಖಾಂತರ ಲೋಕಲ್ ಪ್ರೇಕ್ಷಕರಿಗೂ ಬೇಡವೆನಿಸಿದ್ದಾರೆ. ಹಾಗೆ ನೋಡಿದರೆ ದ್ವಿತೀಯ ನಿರ್ದೇಶನದ ಚಿತ್ರದಲ್ಲೂ ಸೈ ಎನಿಸಿಕೊಂಡವರೆಂದರೆ ನಿರ್ದೇಶಕ ಗುರುಪ್ರಸಾದ್ ಮಾತ್ರ. ಇವರ ನಿರ್ದೇಶನದ 'ಎದ್ದೇಳು ಮಂಜುನಾಥ' ಒಂದು ಸಣ್ಣಸಂಚಲನವನ್ನು ಗಾಂಧಿನಗರದಲ್ಲಿ ಹುಟ್ಟುಹಾಕಿದ್ದು ನಿಜ.

ವರ್ಷಾರಂಭದಲ್ಲಿ 'ಸವಾರಿ' ಮತ್ತು 'ಅಂಬಾರಿ' ಬಾಕ್ಸಾಫೀಸ್‌ನಲ್ಲಿ ಗೆದ್ದು ಎಲ್ಲರ ಮೆಚ್ಚುಗೆ ಪಡೆದಾಗ ಗಾಂಧಿನಗರದ ಜನ ರಘು ಮುಖರ್ಜಿ ಮತ್ತು ಲೂಸ್ ಮಾದ ಯಾನೆ ಯೋಗೇಶ್ ಮೇಲೆ ಹಣ ಹೂಡಲು ತಯಾರಾಗಿ ಬಿಟ್ಟರು. ಅದರಲ್ಲೂ ಯೋಗೇಶ್ ಈ ವರ್ಷ ಕನ್ನಡ ಚಿತ್ರರಂಗದ ಅಂಬಾರಿ ಮೇಲೆ ಸವಾರಿ ಮಾಡಿ ಮಿಂಚಬಹುದೆಂದು ಎಲ್ಲರೂ ಭಾವಿಸಿ ಆತನ ಕಾಲ್‌ಶೀಟ್‌ಗಾಗಿ ಮುಗಿಬಿದ್ದರು. ಆದರೆ 'ಅಂಬಾರಿ' ನಂತರ ಯೋಗೇಶ್ ನಟಿಸಿದ ಬಹುತೇಕ ಎಲ್ಲಾ ಚಿತ್ರಗಳೂ ಲೂಸ್ ಆಗಿದ್ದವು. 'ಪ್ರೀತ್ಸೆ, ಪ್ರೀತ್ಸೆ', 'ರಾವಣ', 'ಯೋಗಿ' ... ಹೀಗೆ ಆತ ನಟಿಸಿದ ಪ್ರತಿ ಚಿತ್ರವೂ ಬಾಕ್ಸಾಫೀಸ್‌ನಲ್ಲಿ 'ಠುಸ್' ಎಂದವು. ಈಗ ವರ್ಷದ ಕೊನೆಯಲ್ಲಿ ಯೋಗೇಶ್ ಅಂದರೆ ನಿರ್ಮಾಪಕರು ಕಾಲುಕಿತ್ತು ಓಡುವ ಪರಿಸ್ಥಿತಿ ಸೃಷ್ಟಿಯಾಗಿದೆ. ಆತನ ಕಾಲ್‌ಶೀಟ್‌ಗಾಗಿ ಮುಂಗಡ ಹಣ ಕೊಟ್ಟವರೆಲ್ಲ ಈಗ ಚಿತ್ರವನ್ನು ಪ್ರಾರಂಭಿಸದೆ ತೆಪ್ಪಗೆ ಕುಳಿತುಕೊಂಡಿದ್ದಾರೆ. ಆ...ರೂ ಸದ್ಯಕ್ಕೆ ಯೋಗೇಶ್ ಕೈಯಲ್ಲೀಗ 'ಧೂಳ್', 'ಪುಂಡ', 'ದೇವದಾಸ್' ಮತ್ತು 'ಯಕ್ಷ' ಎಂಬ ನಾಲ್ಕು ಚಿತ್ರಗಳಿವೆ. ಅವು ಬಿಡುಗಡೆಗೊಂಡು ಅದೆಷ್ಟು ಜನ ಧೂಳ್ ಆಗುತ್ತಾರೋ, ದೇವದಾಸರಾಗುತ್ತಾರೋ ನೋಡಬೇಕಿದೆ.

2009ರ ಆರಂಭದಲ್ಲಿ ಕೋಲುಮುಖದ ಲೂಸ್‌ಮಾದ ವರ್ಷದ ತಾರೆಯಾಗಿ ಮೆರೆಯುವ ಸಾಧ್ಯತೆ ಇತ್ತು. ಆದರೆ ಅಂತಹ ಅವಕಾಶವನ್ನು ಕಳೆದುಕೊಂಡ ಯೋಗಿ ಸದ್ಯಕ್ಕೆ ಕಾಶೀನಾಥ್‌ನ ಪರಿಷ್ಕೃತ ರೂಪದಂತೆ ಕಾಣಿಸುತ್ತಿರುವುದು ಆತನ ದೌರ್ಭಾಗ್ಯ.

ಹೊಸಬರಲ್ಲಿ ಅತ್ಯಂತ ಚಿಂತಾಜನಕ ಸ್ಥಿತಿಯಲ್ಲಿರುವವರೆಂದರೆ ಡೈನಾಮಿಕ್ ಹೀರೋ ದೇವರಾಜ್ ಮಗ ಪ್ರಜ್ವಲ್, ಎಸ್.ನಾರಾಯಣ್ ಮಗ ಪಂಕಜ್ ಮತ್ತು ಜಗ್ಗೇಶ್ ಮಗ ಗುರುರಾಜ್. ಗುರುರಾಜ್ ಇನ್ನೂ ಮೀಸೆ ಚಿಗುರದ ಹುಡುಗನಾಗಿದ್ದರಿಂದ ಆತನ ಬಗ್ಗೆ ಈಗಲೇ ಕಟುವಿಮರ್ಶೆ ಮಾಡುವುದು ಸರಿಯಲ್ಲ, ಆದರೆ ಇನ್ನುಳಿದವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದ್ದಾರೆ.









ಅತ್ತ ಯುವ ನಟನೂ ಅಲ್ಲ ಇತ್ತ ಹಿರಿಯ ನಟನೂ ಅಲ್ಲ ಎಂಬ ವಿಚಿತ್ರವಾದ ಗುಂಪಿಗೆ ಸೇರುವ 'ನೆನಪಿರಲಿ' ಪ್ರೇಮ್ ಈ ವರ್ಷ ಮೂಲೆಗುಂಪಾಗಿದ್ದಾರೆ. ಆತನ 'ಗೌತಮ್' ಚಿತ್ರ ಸುದ್ದಿ ಮಾಡಲೇ ಇಲ್ಲ. ಉಳಿದಂತೆ ಬೇರೆ ಚಿತ್ರಗಳು ಸೆಟ್ಟೇರಿದ್ದೂ ಗೊತ್ತಾಗಲೇ ಇಲ್ಲ. ಇದೇ ಗುಂಪಿಗೆ ಸೇರುವ ವಿಜಯ್ ಮಾತ್ರ ವರ್ಷದುದ್ದಕ್ಕೂ ತನ್ನ ಚಿತ್ರಗಳು ಮತ್ತು ವಿಚಿತ್ರವಾದ ಸಂಬಂಧಗಳಿಂದ ಸುದ್ದಿಯಲ್ಲಿದ್ದಾರೆ. ಅಷ್ಟಕ್ಕೂ 'ಜಂಗ್ಲಿ' ಮತ್ತು 'ತಾಕತ್' ಚಿತ್ರದ ಸಾಧಾರಣವಾದ ಗೆಲುವು ವಿಜಿಯ ಸ್ಟಾರ್‌ಗಿರಿಯನ್ನು ಉಳಿಸಿದ್ದರೂ ಅನಂತರ ಬಂದ 'ದೇವ್ರು'' ಚಿತ್ರ ಬಾಕ್ಸಾಫೀಸ್‌ನಲ್ಲಿ ಮಕಾಡೆ ಮಲಗಿದ್ದರಿಂದ ವಿಜಿಯ ವೃತ್ತಿಜೀವನವೂ ಕವಲು ದಾರಿಯತ್ತ ಸಾಗಿದೆ. ರಾಜೇಂದ್ರ ಸಿಂಗ್ ಬಾಬು ಅವರ ಮಗ ಆದಿತ್ಯ ಪೇಜ್-3ಗಳಲ್ಲಿ ಅಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುವುದು ಬಿಟ್ಟರೆ ಬೇರೇನೂ ಸಾಧನೆ ಮಾಡಿಲ್ಲ. ಅದೇ ಗ್ರೂಪಿಗೆ ಮದನ್‌ಮಲ್ಲು ಮಗ ಮಯೂರ್ ಪಟೇಲ್ ಸೇರುತ್ತಾನೆ.

ಈ ಮಧ್ಯೆ ಹಿರಿಯ ನಟರೆನಿಸಿಕೊಂಡಿರುವ ಶಿವರಾಜ್‌ಕುಮಾರ್, ವಿಷ್ಣುವರ್ಧನ್ ಮತ್ತು ಉಪೇಂದ್ರ ಪಾಲಿಗೆ ಕೂಡ 2009 ಅದೃಷ್ಟ ತಂದುಕೊಟ್ಟಿಲ್ಲ. ಸಾಧಾರಣವಾಗಿ ವರ್ಷಕ್ಕೆ ಒಂದು ಅಥವಾ ಎರಡು ಹಿಟ್ ಚಿತ್ರಗಳನ್ನು ನೀಡಿ ತಮ್ಮ ಸ್ಥಾನವನ್ನು ಭದ್ರಪಡಿಸುತ್ತಾ ಬಂದಿರುವ ಶಿವಣ್ಣ ಮತ್ತು ವಿಷ್ಣು ಈ ಭಾರೀ ದಯನೀಯ ಸ್ಥಿತಿ ತಲುಪಿದ್ದಾರೆ. ಶಿವಣ್ಣ ನಟಿಸಿದ ಚಿತ್ರಗಳಾದ 'ಭಾಗ್ಯದ ಬಳೆಗಾರ', 'ದೇವರುಕೊಟ್ಟ ತಂಗಿ' ಮತ್ತು 'ಪರಮೇಶಿ ಪಾನ್‌ವಾಲಾ' ಆತನ ಅಭಿಮಾನಿಗಳಿಗೇ ಖುಷಿ ನೀಡಲಿಲ್ಲ ಅಂದ ಮೇಲೆ ಉಳಿದವರು ಯಾಕಾದರೂ ಅವುಗಳನ್ನು ನೋಡುತ್ತಾರೆ? ವಿಷ್ಣುವಿನಂತಹ ಹಿರಿಯ ನಟ 'ಬಳ್ಳಾರಿ ನಾಗ' ಮತ್ತು 'ನಮ್ಮೆಜಮಾನ್ರು' ಎಂಬ ಅಸಂಬದ್ಧ ಚಿತ್ರಗಳಲ್ಲಿ ನಟಿಸಿ ತಮ್ಮ ಸ್ಟಾರ್‌ಗಿರಿಯನ್ನು ತಾವೇ ಕಳೆದುಕೊಂಡಿದ್ದಾರೆ. ಯಾವಾಗಲೂ ಗಿಮಿಕ್‌ಗಳ ಮೂಲಕವೇ ತನ್ನ ಇಮೇಜನ್ನು ಹೆಚ್ಚಿಸಿಕೊಳ್ಳುವ ಉಪೇಂದ್ರ ಈ ಬಾರಿ ಬೋರ್ಡಿಗೇ ಇರಲಿಲ್ಲ. ಆತ ನಟಿಸಿದ 'ರಜನಿ' ಮತ್ತು 'ದುಬಾಯ್ ಬಾಬು' ಎಂಬ ಅತ್ಯಂತ ಕಳಪೆ ಚಿತ್ರಗಳನ್ನು ಜನ ಸಂಪೂರ್ಣವಾಗಿ ತಿರಸ್ಕರಿಸಿದರು. ಆದರೆ ರಮೇಶ್ ಮಾತ್ರ ವರ್ಷಕ್ಕೊಂದು ಚಿತ್ರ ನಿರ್ದೇಶಿಸುತ್ತಾ ವಿರಾಮ ವೇಳೆಯಲ್ಲಿ ದಿಢೀರ್ ಎಂದು ಚಿತ್ರಗಳಲ್ಲಿ ನಟಿಸುತ್ತಾ ಇನ್ನೂ ಗಾಂಧಿನಗರದಲ್ಲಿ ಚಾಲ್ತಿಯಲ್ಲಿದ್ದಾರೆ. ಆದರೆ ಅವರ ಕ್ರಿಯಾಶೀಲತೆ ಕೂಡಾ ಹಿಂದಿನಂತಿಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಕಳೆದ ವರ್ಷ ರಮ್ಯಾಳನ್ನು ಹಿಂದಿಕ್ಕಿ ಅಗ್ರಸ್ಥಾನ ಅಲಂಕರಿಸಿದ ಪೂಜಾ ಗಾಂಧಿ ಈ ಬಾರಿ ಸಪ್ಪೆಯಾಗಿ ಕಂಡರು. ತನ್ನ ಜೊತೆಗೆ ಸಹೋದರಿ ರಾಧಿಕಾಳನ್ನು ಕರೆತಂದರೂ ಅದು ಆಕೆಯ ಸಹಾಯಕ್ಕೆ ಬರಲಿಲ್ಲ. ಇನ್ನು ಕನ್ನಡದ ಹುಡುಗಿಯರಾದ ಶರ್ಮಿಳಾ ಮಾಂಡ್ರೆ, ಹರಿಪ್ರಿಯ, ಶುಭ ಪೂಂಜಾ, ನೀತೂ ಇವರಿಗೆಲ್ಲಾ ಚತುಷ್ಕೋಟಿ ಕನ್ನಡಿಗರ ಆಶೀರ್ವಾದ ಮುಂಬರುವ ದಿನಗಳಲ್ಲಿ ಸಿಗಬಹುದೇನೋ? ಹಾಗೆಯೇ ಡೈಸಿ ಬೋಪಣ್ಣ, ಭಾವನಾ ಮತ್ತು ಅನು ಪ್ರಭಾಕರ್ ಇವರ ಬಗ್ಗೆ ಸಿಂಪಥಿ ವ್ಯಕ್ತಪಡಿಸಬೇಕಾದ ಅನಿವಾರ್ಯತೆ ನಮ್ಮನಿಮ್ಮ ಮುಂದಿದೆ. ಪ್ರೇಮಾ, ಸುಧಾರಾಣಿಯರ ಸಮಕಾಲೀನಳಾದ ಶ್ರುತಿ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಸುದ್ದಿಯಲ್ಲಿದ್ದು ಎಲ್ಲರನ್ನು ಬೆಚ್ಚಿ ಬೀಳಿಸಿದರು. ರಮ್ಯಾಗೆ ನಟನೆಯಲ್ಲೂ ಗ್ಲಾಮರ್‌ನಲ್ಲೂ ತೀವ್ರ ಪೈಪೋಟಿ ನೀಡಿದ ಬೆಂಗಾಲಿ ಹುಡುಗಿ ಅಂದ್ರಿತಾ ರೇ 'ಮನಸಾರೆ' ಮತ್ತು 'ಜಂಗ್ಲಿ' ಚಿತ್ರದ ಬಿಂದಾಸ್ ಅಭಿನಯದ ಜೊತೆಜೊತೆಗೆ ವರ್ಷದ ಕೊನೆಯಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಜೊತೆ ಬೀದಿರಂಪ ಮಾಡಿ ಈ ವರ್ಷದ ನೆನಪಿನಲ್ಲುಳಿಯುವ ತಾರೆಯಾಗಿ ಕಾಣಿಸುತ್ತಾಳೆ.

ಇಷ್ಟೆಲ್ಲಾ ಪುರಾಣದ ನಂತರ ಚಿತ್ರರಂಗದ ಕನಸುಗಾರ ರವಿಚಂದ್ರನ್ ಮತ್ತು ಕನ್ನಡ ಚಿತ್ರರಂಗದ ಪರಮಸುಂದರಿ ರಮ್ಯಾ ನಟಿಸಿದ ಒಂದೇ ಒಂದು ಚಿತ್ರ ಕೂಡಾ ಈ ವರ್ಷ ತೆರೆ ಕಾಣದಿರುವುದು ಸೋಜಿಗವನ್ನುಂಟು ಮಾಡಿದೆ. ಆದರೆ ಇಡೀ ವರ್ಷ ಇವರಿಬ್ಬರೂ ಹಲವಾರು ಕಾರಣಗಳಿಂದ ಸುದ್ದಿಯ ಕೇಂದ್ರಬಿಂದುವಾಗಿದ್ದರು. ಇದೂ ಕೂಡಾ ವರ್ಷದ ವಿಶೇಷತೆಯೆನ್ನಬಹುದು.


● ಸದಾಶಿವ ಶೆಣೈ

ಹಾವಳಿಯಿಟ್ಟ ಪರಭಾಷೆ ಸಿನಿಮಾಗಳು

2009ರಲ್ಲಿ ಬಿಡುಗಡೆಯಾದ ಕನ್ನಡದ ಬಹುತೇಕ ...ತ್ರಗಳು ಸೋಲಲು ಮುಖ್ಯವಾದ ಕಾರಣ ...ಗುಣಮಟ್ಟದ ಕೊರತೆ ಎಂಬುದು ನಿಜವಾದರೂ ...ಹಲವೊಮ್ಮೆ ಉತ್ತಮ ಸಿನಿಮಾಗಳೂ ಸೋತಿವೆ.

'ಮಳೆಬರಲಿ ಮಂಜೂ ಇರಲಿ' ರೀಮೇಕ್ ...ಚಿತ್ರವಾಗಿದ್ದರೂ ಅದು ಇಡೀ ಸಂಸಾರ ನೋಡುವಂತಹ ...ಚಿತ್ರವಾಗಿತ್ತು. ಹಾಗೆ ಕಡಿಮೆ ವೆಚ್ಚದಲ್ಲಿ ಮಾಡಿದ್ದ ...'ಬಿಡ್ಡಿ' ಕೂಡ ಸದಭಿರುಚಿ ಸಿನಿಮಾವಾಗಿತ್ತು. ಇನ್ನು ...ಉಪೇಂದ್ರ ನಟಿಸಿದ್ದ 'ರಜನಿ' ಕಮರ್ಷಿಯಲ್ ಸಿನಿಮಾ ...ವಾಗಿದ್ದರೂ ರಂಜಕವಾಗಿ ಮೂಡಿಬಂದಿತ್ತು. ಆದರೂ ... ಮೂರು ಚಿತ್ರಗಳು ಬಾಕ್ಸ್‌ಆಫೀಸಿನಲ್ಲಿ ಮಣ್ಣು ...ಮುಕ್ಕಿದವು.

ಈ ಚಿತ್ರಗಳ ಸೋಲಿಗೆ ಮುಖ್ಯ ಕಾರಣ ...ಪರಭಾಷೆ ಸಿನಿಮಾಗಳ ಹಾವಳಿ ಎಂಬುದು ...ನವರ ಲೆಕ್ಕಾಚಾರ. ನಮ್ಮವರು ಕಷ್ಟಪಟ್ಟು ...ದಿಲ್ಲ ಇಲ್ಲೊಲ್ಲ ಎಂಬಂತೆ ಉತ್ತಮ



ಸಿನಿಮಾಗಳನ್ನು ಬಿಡುಗಡೆ ಮಾಡುವ ಹೊತ್ತಿಗೇ ಈ ವರ್ಷ ಇತರ ಭಾಷೆಯ ಕೆಲವು ಸಿನಿಮಾಗಳು ಗುಮ್ಮನಂತೆ ಕಾದಿದ್ದುಂಟು. ತೆಲುಗಿನ 'ಮಗಧೀರ' ಬಿಡುಗಡೆಯಾದಾಗ ಕನ್ನಡದಲ್ಲಿ ಬಿಡುಗಡೆಯಾದ 'ಮಳೆಬರಲಿ ಮಂಜೂ ಇರಲಿ' ಸೇರಿದಂತೆ ಇನ್ನೂ ನಾಲ್ಕೈದು ಸಿನಿಮಾಗಳು ಅದಕ್ಕೆ ಬಲಿಯಾದವು.

ಇನ್ನು ಇತ್ತೀಚೆಗೆ ಬಿಡುಗಡೆಯಾಗಿ ಹೊಸ ಸಂಚಲನ ಮೂಡಿಸಿರುವ '2012' ಎಂಬ ಹಾಲಿವುಡ್ ಚಿತ್ರವಂತೂ ಸಣ್ಣಪುಟ್ಟ ಕನ್ನಡ ಚಿತ್ರಗಳನ್ನು ನುಂಗಿ ನೀರು ಕುಡಿದುಬಿಟ್ಟಿತು. ಕಳೆದ ವಾರ ರಿಲೀಸ್ ಆದ, ಅತ್ಯಾಧುನಿಕ ತಾಂತ್ರಿಕತೆಯನ್ನು ಹೊಂದಿರುವ ಹಾಲಿವುಡ್‌ನ 'ಅವತಾರ್' ಚಿತ್ರವಂತೂ ಯೋಗರಾಜ ಭಟ್ಟರ 'ಮನಸಾರೆ',



ಗೋಲ್ಡನ್ ಸ್ಟಾರ್ ಗಣೇಶ್ ನಟಿಸಿರುವ 'ಮಳೆಯಲಿ ಜೊತೆಯಲಿ' ತರಹದ ಚಿತ್ರಗಳನ್ನೇ ಥಂಡಾ ಹೊಡೆಸಿದೆ.

ಪರಭಾಷೆ ಸಿನಿಮಾಗಳ ಮೂಲಕ ಯಥೇಚ್ಛ ಹಣ ಮಾಡುವ ಉದ್ದೇಶದಿಂದ ವಿಜಯ್‌ಕುಮಾರ್‌ನಂಥ ವಿತರಕರು ನಿಯಮವವನ್ನೂ ಮೀರಿ ಅಧಿಕ ಚಿತ್ರಮಂದಿರಗಳಲ್ಲಿ ರಿಲೀಸ್ ಮಾಡಿ ಕನ್ನಡ ಸಿನಿಮಾಗಳನ್ನು ಆಹೋತನ ತೆಗೆದುಕೊಳ್ಳುತ್ತಿರುವುದು ಕನ್ನಡ ಚಿತ್ರರಂಗದ ದುರಂತವಲ್ಲದೆ ಇನ್ನೇನು?

● ಅರುಣ್

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 06-01-2010 RNI No. KARKAN2005/14648



ಜಗಳದಲಿ-ಸಭ್ಯತೆಯಿರಲಿ!

ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ಪತ್ರಕರ್ತ ದೇವಶೆಟ್ಟಿ ಮಹೇಶ್ ನಡುವೆ ನಡೆಯುತ್ತಿದ್ದ ಶೀತಲ ಸಮರ ಈಗ ದೊಡ್ಡ ಆಕಾರ ಪಡೆಯುತ್ತಿದೆ.

ಈಗಷ್ಟೇ ಬಿಡುಗಡೆಯಾಗಿರುವ 'ಮಳೆಯಲಿ ಜೊತೆಯಲಿ' ಚಿತ್ರಕ್ಕೆ ಪತ್ರಕರ್ತರಾದ ದೇವಶೆಟ್ಟಿ ಮಹೇಶ್ ಮತ್ತು ವಿನಾಯಕರಾಮ ಕಲಗಾರು ಸಂಭಾಷಣೆ ಬರೆದಿದ್ದರು. ಆರಂಭದಲ್ಲಿ ಎಲ್ಲಾ ಸರಿಯಾಗೇ ಇದ್ದ ಈ ತಂಡದಲ್ಲಿ ಅದೇನು ಭಿನ್ನಾಭಿಪ್ರಾಯ ಮೂಡಿತೋ ಗೊತ್ತಿಲ್ಲ, ಇದ್ದಕ್ಕಿದ್ದಹಾಗೆ ಗಣೇಶ್, ಪ್ರೀತಂ ಗುಬ್ಬಿ ಸೇರಿದಂತೆ 'ಮಳೆಯಿರಲಿ' ತಂಡದವರು ಈ ಚಿತ್ರಕ್ಕೆ ಸಂಬಂಧಿಸಿದ ಪತ್ರಿಕಾಗೋಷ್ಠಿಗಳಿಗೆ ದೇವಶೆಟ್ಟಿಯವರನ್ನು ಆಹ್ವಾನಿಸದೇ ಕಡೆಗಣಿಸಿದರು.

ಈಗ ಸಿನಿಮಾ ಬಿಡುಗಡೆಯಾದ ಮೇಲೆ ಇವರ ವೈಮನಸ್ಯ ಹೆಚ್ಚಾಗಿ ಮತ್ತಷ್ಟು ತಿರುವುಗಳನ್ನು ಪಡೆಯುತ್ತಿದೆ. ಕಳೆದ ವಾರ ದೇವಶೆಟ್ಟಿ ಮಹೇಶ್ ಗಣೇಶನಿಗೆ ಸರಿರಾತ್ರಿಯಲ್ಲಿ ಫೋನ್ ಮಾಡಿ ಐವತ್ತು ಸಾವಿರ ರೂಪಾಯಿ ನೀಡುವಂತೆ ಒತ್ತಾಯಿಸಿದರಂತೆ. ಕರೆ ಸ್ವೀಕರಿಸಿದ ಗಣೇಶನ ಪತ್ನಿ ಶಿಲ್ಪಾ ಅದಕ್ಕೆ ಸಮ್ಮತಿಸದಿದ್ದಾಗ ಅವಾಚ್ಯ ಶಬ್ದಗಳಿಂದ ಕೆಟ್ಟಾ ಕೊಳಕು ಮಾತನಾಡಿದರಂತೆ. ಮಧ್ಯರಾತ್ರಿಯಲ್ಲಿ ಮೊಬೈಲ್‌ನಲ್ಲಾದ ಇವರ ವಾಗ್ವಾದವನ್ನು ಗಣೇಶ್ ಮತ್ತು ಶಿಲ್ಪಾ ತಮ್ಮ ಬ್ಲಾಕ್‌ಬೆರಿ ಹ್ಯಾಂಡ್‌ಸೆಟ್‌ನಲ್ಲಿ ರೆಕಾರ್ಡು ಮಾಡಿಕೊಂಡು ಮಹೇಶ್ ವಿರುದ್ಧ ಪತ್ರಿಕಾಗೋಷ್ಠಿ ನಡೆಸುವ ಪ್ಲಾನು ಮಾಡುತ್ತಿದ್ದಾರಂತೆ.... ಹೀಗೆ ಹಲವಾರು ಗಾಳಿಸುದ್ದಿಗಳನ್ನು ಗಣೇಶ್ ಮತ್ತಾತನ ಸ್ನೇಹಿತರೇ ಹಬ್ಬಿಸುತ್ತಿದ್ದಾರೆ.

ಈ ಗಾಳಿಸುದ್ದಿಯಲ್ಲಿ ಎಷ್ಟು ಸತ್ಯವಿದೆಯೋ ಇಲ್ಲವೋ? ಆದರೆ ಗಣೇಶ್ ಮತ್ತು ದೇವಶೆಟ್ಟಿ ನಡುವೆ ಅಸಮಾಧಾನದ ಕಿಚ್ಚು ಹೊಗೆಯಾಡುತ್ತಿರುವುದಂತೂ ನಿಜ. ಸಭ್ಯತೆ ಮೀರದಂತೆ ಜಗಳವಾಡುವ ಹೊಣೆ ದೇವಶೆಟ್ಟಿ ಮತ್ತು ಗಣೇಶ್ ಇಬ್ಬರ ಮೇಲೂ ಇದೆ!





ಮಿನುಗು
ಪೂಜಾ
ಗಾಂಧಿ

ಇದು ಸಿನಿಮಾನೇ ಅಲ್ಲವಂತೆ!

'ಇದು ಸಿನಿಮಾ ಅಲ್ಲ ರಿಯಲ್ ಸ್ಟೋರಿ...' ಯಾವುದೋ ಚಿತ್ರದ ಟ್ಯಾಗ್‌ಲೈನ್‌ನಂತೆ ಕಾಣುವ ಈ ಸಾಲು ಹೊಸ ಸಿನಿಮಾವೊಂದರ ಹೆಸರು.



ಮೊನ್ನೆಮೊನ್ನೆಯಷ್ಟೇ ನಿರ್ದೇಶಕ ಗುರುಪ್ರಸಾದ್ 'ಡೈರೆಕ್ಟರ್ಸ್ ಸ್ಪೆಷಲ್' ಎನ್ನುವ ಹೊಸ ಸಿನಿಮಾವನ್ನು ಘೋಷಿಸಿದರು. ಎರಡು ವಾರಗಳ ಹಿಂದೆ ಮತ್ತೊಬ್ಬ ಯುವ ನಿರ್ದೇಶಕ ರವೀಂದ್ರ 'ಇದು ಕಥೆಯಲ್ಲ ಜೀವನ' ಸಿನಿಮಾವನ್ನು ಆರಂಭಿಸಿದರು. ಈಗ ಅದೇ ಕ್ಯಾಟಗರಿಗೆ ಸೇರುವ 'ಇದು ಸಿನಿಮಾ ಅಲ್ಲ ರಿಯಲ್ ಸ್ಟೋರಿ...' ಎನ್ನುವ ಸಿನಿಮಾ ಸೆಟ್ಟೇರುತ್ತಿದೆ. ಹತ್ತು ವರ್ಷಗಳಲ್ಲಿ ಕರ್ನಾಟಕದಲ್ಲಿ ನಡೆದ ಘಟನೆಗಳು ಮತ್ತು ಮಾಧ್ಯಮದಲ್ಲಿ ಬಿತ್ತರಗೊಂಡ ಸುದ್ದಿಗಳನ್ನೇ ಆಧಾರವಾಗಿಟ್ಟುಕೊಂಡು ಈ ಸಿನಿಮಾ ರೂಪುಗೊಳ್ಳುತ್ತಿದೆ. ಈ ಸಿನಿಮಾದಲ್ಲಿ ಸಾಂಗು, ಕಾಮಿಡಿ ಟ್ರ್ಯಾಕು, ಫೈಟು ಯಾವುದೂ ಇಲ್ಲವಂತೆ.

'ಹಾಗಾದರೆ ಇದು ನಿಜಕ್ಕೂ ಸಿನಿಮಾನಾ?' ಎಂದು ಕೇಳಿದರೆ ಸದ್ಯಕ್ಕೆ ಉತ್ತರ ಸಿಗುವುದು ಕಷ್ಟ.

'ಕಲಿಯುಗದ ತಾಳಿ' ಎನ್ನುವ ಸಿನಿಮಾವನ್ನು ಮಾಡಲು ಹೋಗಿದ್ದ ರಾಜೀವ್ ಕೃಷ್ಣನೇ ಈ ಚಿತ್ರದ ನಿರ್ದೇಶಕ. ಫೈನಾನ್ಸ್ ಪ್ರಾಬ್ಲಂನಿಂದ ರಾಜೀವ್ ಕೃಷ್ಣನ 'ತಾಳಿ' ಅರ್ಧಕ್ಕೇ ತುಂಡಾಗಿತ್ತು, ಈಗ 'ರಿಯಲ್ ಸ್ಟೋರಿ'ಯಾದರೂ ಕಂಪ್ಲೀಟ್ ಆಗಲಿ.

ಮುರಳಿ ಮಗನ ಕನ್ನಡ ಗಾನ

ಸ್ವಲ್ಪ ದಿನಗಳ ಮುನ್ನವೇ ಖ್ಯಾತ ನಟ ಅರ್ಜುನ್ ಸರ್ಜಾ ಕನ್ನಡದಲ್ಲಿ 'ವಾಯುಪುತ್ರ' ಎಂಬ ಸಿನಿಮಾವೊಂದನ್ನು ನಿರ್ಮಿಸಿ ತನ್ನ ಅಕ್ಕನ ಮಗ ಚಿರಂಜೀವಿ ಸರ್ಜಾನ ಆರಂಗೇಟ್ರಂ ಮಾಡಿಸಿದ್ದರು.

ಈಗ ಅಂಥದ್ದೇ ಇನ್ನೊಂದು ಪ್ರಯತ್ನ ನಡೆಯುತ್ತಿದೆ.



ಅದು ಹಿರಿಯ ನಿರ್ದೇಶಕ ಸಿದ್ದಲಿಂಗಯ್ಯನವರ ಮೊಮ್ಮಗನದ್ದು.

'ಭೂತಯ್ಯನ ಮಗ ಅಯ್ಯು' ಸೇರಿದಂತೆ ಕನ್ನಡದಲ್ಲಿ ಹಲವಾರು ಸೂಪರ್ ಹಿಟ್ ಸಿನಿಮಾಗಳನ್ನು ನೀಡಿದ ಅನುಭವಿ ನಿರ್ದೇಶಕ ಸಿದ್ದಲಿಂಗಯ್ಯ ತಮ್ಮ ಮೊಮ್ಮಗನನ್ನು ಕನ್ನಡ ಚಿತ್ರರಂಗದಿಂದಲೇ ಲಾಂಚ್ ಮಾಡುವ ಪ್ಲಾನ್ ಮಾಡಿದ್ದಾರೆ. ಸಿದ್ದಲಿಂಗಯ್ಯನವರ ಮಗ ಮುರಳಿ ಕೂಡ ಇದೇ ರೀತಿ ಕನ್ನಡ ಚಿತ್ರದಿಂದಲೇ ನಟನೆ ಆರಂಭಿಸಿ, ಇಂದು ತಮಿಳುನಾಡಿನಲ್ಲಿ ದೊಡ್ಡ ಸ್ಟಾರ್ ಆಗಿದ್ದಾರೆ. ಈಗ ತನ್ನ ಮಗನೂ ತನ್ನ ಹಾದಿಯಲ್ಲೇ ಸಾಗಿ ಬರಲಿ ಎಂದೋ, ಅಥವಾ ಹಳೆಯ ಸೆಂಟಿಮೆಂಟೋ ಗೊತ್ತಿಲ್ಲ, ಒಟ್ಟಿನಲ್ಲಿ ತಮ್ಮ ಮಗನ ಮೊದಲ ಚಿತ್ರ ಕನ್ನಡದ್ದೇ ಆಗಿರಬೇಕು ಎಂದು ತೀರ್ಮಾನಿಸಿದ್ದಾರೆ.



ದಿಗಂತನ ರಾತ್ರಿ ರಂಪಾಟ

ಇತ್ತೀಚೆಗೆ ಒಂದೆರಡು ಸಿನಿಮಾ ಹಿಟ್ ಆಗುತ್ತಿದ್ದಂತೇ ಯುವ ನಟರ ತಲೆ ನೆಟ್ಟಗೆ ನಿಲ್ಲುವುದಿಲ್ಲ. ವಿವಾದ ಸೃಷ್ಟಿಸಿಕೊಳ್ಳುತ್ತಿದ್ದಾರೆ. ನೈಟ್ ಔಟ್ ಪಾರ್ಟಿಗಳಲ್ಲಿ ಪಾಲ್ಗೊಳ್ಳುವ ಲೂಸ್ ಮಾದ, ಪ್ರಜ್ವಲ್ ಮತ್ತು ದಿಗಂತ್ ಅಂತಹ ಯುವ ನಟರು.

ಇತ್ತೀಚೆಗಷ್ಟೇ 'ಈ ಪ್ರೀತಿ' ಎಂಬ ಸಿನಿಮಾದ ನಿರ್ದೇಶಕಿ ಪ್ರಿಯಾಭಾರತಿ ಎಂಬಾಕೆಯೊಂದಿಗೆ ರಂಪ ಮಾಡಿಕೊಂಡಿದ್ದ ನಟ ದಿಗಂತ್ ಈಗ ಬೆಂಗಳೂರಿನ ಟ್ರಾಫಿಕ್ ಪೊಲೀಸರೊಂದಿಗೂ ಕಿರಿಕಿರಿ ಮಾಡಿಕೊಂಡಿದ್ದಾನೆ. ಕಳೆದ ವಾರ ಹೊತ್ತಲ್ಲದ ಹೊತ್ತಿನಲ್ಲಿ ಕಂಠಮಟ್ಟ ಕುಡಿದು ಕಾರಿನಲ್ಲಿ ಹೋಗುತ್ತಿದ್ದ ದಿಗಂತ್‌ನನ್ನು ಚಾಮರಾಜಪೇಟೆ ಸಂಚಾರಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪ್ರಭುದೇವಯ್ಯ ಹಿಡಿದು ನಿಲ್ಲಿಸಿದ್ದಾರೆ.

ಕಾರಿನಿಂದ ಕೆಳಗಿಳಿಯಲೂ ಆಗದಷ್ಟು ಪಾನಮತ್ತನಾಗಿದ್ದ ದಿಗಂತ ಪ್ರಭುದೇವ್ ಬಳಿ "ನಾನು ಪಾಪ್ಯುಲರ್ ಹೀರೋ ಕಣ್ರೀ. ಎಷ್ಟು ದುಡ್ಡು ಬೇಕು ಹೇಳಿ'' ಎಂದು ಬಿಲ್ಡಪ್ ಕೊಟ್ಟಿದ್ದಾನೆ. ದಿಗಂತನ ಜೊತೆಯಲ್ಲಿ ಮಾಜಿ ಮಂತ್ರಿ ಎಚ್.ಟಿ. ಕೃಷ್ಣಪ್ಪನವರ ಸಂಬಂಧಿಕರ ಹುಡುಗ ಸಂತೋಷ್ ಮತ್ತು ಶ್ವೇತಾ ಗೌಡ ಎಂಬ ಧಾರಾವಾಹಿ ನಟಿಯೂ ಇದ್ದರಂತೆ.

ಪೊಲೀಸರು "ನೀನ್ಯಾವ ಹೀರೋ ಆದ್ರೆ ಏನಂತೆ? ಈ ಪಾಟ ಕುಡಿದು ಅದೂ, ಇಷ್ಟು ಹೊತ್ತಲ್ಲಿ ಡ್ರೈವ್ ಮಾಡೋದು ಸರೀನಾ?'' ಎಂದು ದಬಾಯಿಸುತ್ತಿದ್ದಂತೇ ದಿಗಂತ್ ದಂಡ ಕಟ್ಟಿ ಪರಾರಿಯಾಗಿದ್ದಾನೆ.

ಆಶಿಸ್ತು, ತರ್ಲೆ, ದೌಲತ್ತುಗಳೊಂದಿಗೆ ಕೈತುಂಬಾ ಕಾಸು ಇರುವ ದಿಗಂತನಂತಹ ನಟನಿಗೆ ಪೊಲೀಸರ ದಂಡ ಯಾವ ಮಹಾ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji...